ಫೆಬ್ರವರಿ 9, 2025
40ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೋಲೀಸ್ ನ್ಯೂಸ್

1971
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಹೆಣ್ಣು ಕೇಳಿದಕ್ಕೆ ಹರಿಯಿತು ಬಾಡಿ ಬಿಲ್ಡರ್‌ನ ನೆತ್ತರು!

ನಾಲ್ವರು ಆರೋಪಿಗಳು ಅರೆಸ್ಟ್!





## ಪ್ರಿಯಕರನಿಗೆ ಸುಪಾರಿ ಕೊಟ್ಟು ಗಂಡನಿಗೆ ಚಟ್ಟ ಕಟ್ಟಿದ ಹೆಂಡತಿ!

## ಹೆಚ್ಚುತ್ತಿರುವ ಅನೈತಿಕ ಸಂಬಂಧಕ್ಕೆ ಹೆಣ ಬೀಳುತ್ತಿದೆ!



## ಅಪ್ಪಾಣೆಗೂ... ರಾಜ್ಯದಲ್ಲಿ ಬಿಜೆಪಿ ಉದ್ಧಾರ ಆಗಲ್ಲ!



## ಎಂಟು ವರ್ಷದಿಂದ ಪ್ರೀತಿಸುತ್ತಿದ್ದ ಪ್ರಿಯತಮೆಯ ಕತ್ತು ಕುಯ್ದ!

**ಕರ್ನಾಟಕದಲ್ಲಿ ಬಿಜೆಪಿ ಸ್ಥಿತಿ ಎರಡ್ಮೂರು ದಶಕಗಳ ಹಿಂದೆ ಹೇಗಿತ್ತು? ಅದನ್ನು ಕಟ್ಟಿ ಬೆಳೆಸಿದ ನಾಯಕರ ಪೈಕಿ ಕೆಲವರು ಇವತ್ತು ಇಲ್ಲದಿರಬಹುದು. ಆದರೆ ಯಡಿಯೂರಪ್ಪ, ಈಶ್ವರಪ್ಪ ಸೇರಿದಂತೆ ಹಲವು ಹಿರಿಯ ನಾಯಕರು ಇವತ್ತಿಗೂ ನಮ್ಮ ಮುಂದಿದ್ದಾರೆ. ಆದರೆ ಯಾವತ್ತೂ ಅಧಿಕಾರಕ್ಕೆ ಬರುವುದೇ ಇಲ್ಲ ಎಂಬಂತಹ ಸ್ಥಿತಿಯಲ್ಲಿದ್ದ ಬಿಜೆಪಿ ಅಧಿಕಾರ ಪಡೆಯುವ ಮಟಕ್ಕೆ ಬೆಳೆದು ಬಂದಿದೆ. ಆದರೆ ಈಗಿನ ಬಣಬಡಿದಾಟವನ್ನು ನೋಡಿದರೆ ಅಪ್ಪನಾಣೆಗೂ ರಾಜ್ಯದಲ್ಲಿ ಬಿಜೆಪಿ ಉದ್ಧಾರ ಆಗಲ್ಲ ಎಂದೆನಿಸುತ್ತಿದೆ.**





# ಅಪ್ಪನಾಣೆಗೂ... ರಾಜ್ಯದಲ್ಲಿ ಬಿಜೆಪಿ ಉದ್ಧಾರ ಆಗಲ್ಲ!

✍ಬಿ.ಎಂ. ಲವಕುಮಾರ್

ಇವತ್ತಿಗಿಂತಲೂ ದೊಡ್ಡಮಟ್ಟದಲ್ಲಿ ಹಿಂದೆ ಬಿಜೆಪಿಯಲ್ಲಿ ಬಣವಿತ್ತು. ಅದು ಅನಂತಕುಮಾರ್ ಮತ್ತು ಬಿ.ಎಸ್.ಯಡಿಯೂರಪ್ಪ ಬಣವಾಗಿತ್ತು. ಇವರ ನಡುವೆ ನಡುವೆ ಶೀತಲ ಸಮರ ನಡೆಯುತ್ತಲೇ ಇರುತ್ತಿತ್ತಾದರೂ ಎಲ್ಲಿಯೂ ಅದು ಬೀದಿಗೆ ಬಿದ್ದಿರಲಿಲ್ಲ. ಮತ್ತು ಬೀದಿಯಲ್ಲಿ ನಿಂತು ಬಾಯಿಗೆ ಬಂದಂತೆ ಬೈದು ಕೊಂಡಿರಲಿಲ್ಲ, ಆದರೀಗ ಏನಾಗುತ್ತಿದೆ. ಬಿಜೆಪಿಯಲ್ಲಿ ನಾಯಕರು ತಮ್ಮ ಜವಬ್ದಾರಿ ಮರೆತು ತಮ್ಮದೇ ಪಕ್ಷದ ನಾಯಕರ ವಿರುದ್ಧ ಅಸಹ್ಯವಾಗಿ ಮಾತನಾಡಿಕೊಳ್ಳುತ್ತಿದ್ದಾರೆ. ಇವರ ನಡೆನುಡಿಗಳನ್ನು ಗಮನಿಸಿದರೆ ಇವತ್ತಲ್ಲ ಯಾವತ್ತಿಗೂ ಇವರು ಒಂದಾಗುವುದಿಲ್ಲ ಎನ್ನುವುದು ಖಚಿತವಾಗುತ್ತಿದೆ.



## ಹೈಕಮಾಂಡ್ ಅಂಗಳಕ್ಕೆ ಬಣಜಗಳ

ರಾಜ್ಯಾಧ್ಯಕ್ಷ ಸ್ಥಾನವನ್ನು ಬಿಟ್ಟುಕೊಡಲು ಬಿ.ವೈ.ವಿಜಯೇಂದ್ರ ತಯಾರಿಲ್ಲ, ಆದರೆ ವಿಜಯೇಂದ್ರ ರಾಜ್ಯಾಧ್ಯಕ್ಷನಾಗಿ ಮುಂದುವರೆಯುವುದು ಬಸವನಗೌಡ ಯತ್ನಾಳ್ ಟೀಮ್‌ಗೆ ಸುತಾರಾಂ ಒಪ್ಪಿಗೆಯಿಲ್ಲ, ಹೀಗಾಗಿ ಜಟಾಪಟಿ ಮುಂದುವರೆದಿದ್ದು, ಅದು ಹೈಕಮಾಂಡ್ ಅಂಗಳಕ್ಕೆ ತಲುಪಿದೆ. ಹೈಕಮಾಂಡ್ ಇಲ್ಲಿ ಇಬ್ಬರನ್ನೂ ನಿಷ್ಠುರ ಮಾಡಿಕೊಳ್ಳಲು ತಯಾರಿಲ್ಲ, ಸದ್ಯದ ಪರಿಸ್ಥಿತಿಯಲ್ಲಿ ಇಬ್ಬರನ್ನು ಬಿಡುವ ಸ್ಥಿತಿಯಲ್ಲಿ ಹೈಕಮಾಂಡ್ ಇಲ್ಲ,

ಏನೇ ಮಾಡಿದರೂ ತೇಪೆ ಹಾಕಿ ಕಳುಹಿಸಬೇಕೇ ವಿನಃ ಕಠಿಣ ಕ್ರಮಗಳ ಬಗ್ಗೆ ಮಾತನಾಡುವುದು ಕಷ್ಟವಾಗಲಿದೆ. ಯತ್ನಾಳ್ ಬಣದಲ್ಲಿಯೂ ನಾಯಕರ ಪ್ರಾಬಲ್ಯವಿದೆ. ಹೀಗಾಗಿ ಭಿನ್ನಮತೀಯ ಚಟುವಟಿಕೆಗಳನ್ನು ಕಠಿಣ ಕ್ರಮಗಳ ಮೂಲಕ ನಿಗ್ರಹಿಸುತ್ತೇನೆ ಎನ್ನುವುದು ಕಷ್ಟವೇ. ಎರಡು ಬಣದ ನಾಯಕರನ್ನು ಒಂದೆಡೆ ಕೂರಿಸಿ ಅವರನ್ನು ರಾಜೀಮಾಡಿಸಿ ಕಳುಹಿಸಿಕೊಡುವ ತಾಕತ್ ಹೈಕಮಾಂಡ್‌ಗೆ ಇದೆಯಾ? ಗೊತ್ತಿಲ್ಲ, ಹೈಕಮಾಂಡ್ ಯಾವ ರೀತಿಯ ನಿಲುವು ತೆಗೆದುಕೊಳ್ಳುತ್ತದೆಯೋ ಅದರ ಮೇಲೆ ಬಿಜೆಪಿ ಭವಿಷ್ಯ ನಿಂತಿದೆ ಎಂದರೆ ತಪ್ಪಾಗಲಾರದು. ☯

ವಿಜಯೇಂದ್ರ ಮತ್ತು ಯತ್ನಾಳ್ ಬಣಗಳಾಗಿ ಒಡೆದು ಹೋದ ಬಿಜೆಪಿಯನ್ನು ಒಂದಾಗಿಸುವುದು ಅಷ್ಟು ಸುಲಭವಲ್ಲ, ಹೀಗಾಗಿ ರಾಜ್ಯದಲ್ಲಿ ಬಿಜೆಪಿ ಅವನತಿಯಲ್ಲಿ ಸಾಗುತ್ತಿದೆಯಾ? ಹಾಗೆಂಬ ಪ್ರಶ್ನೆಗಳು ಶ್ರೀಸಾಮಾನ್ಯನಲ್ಲಿ ಮೂಡುತ್ತಿದೆ.

ದುರಂತ ಏನೆಂದರೆ ಯಾವುದೋ ದೇಶದಲ್ಲಿ ಯುದ್ಧವನ್ನು ನಿಲ್ಲಿಸುವ ಶಕ್ತಿ ಪ್ರಧಾನಿ ನರೇಂದ್ರ ಮೋದಿಗಿದೆಯಾದರೆ, ರಾಜ್ಯದಲ್ಲಿ ನಡೆಯುತ್ತಿರುವ ಒಳಜಗಳವನ್ನು ನಿಲ್ಲಿಸುವಷ್ಟು ತಾಕತ್ತು ಧಮ್ಮು ಇಲ್ಲವೇ? ಎಂದು ಜನ ಗೇಲಿ ಮಾಡುತ್ತಿದ್ದಾರೆ. ಸದ್ಯಕ್ಕೆ ಬಿಜೆಪಿ ಹೈಕಮಾಂಡ್ ಹೊದ್ದು ಮಲಗಿದೆ. ಅವರು ಗಡದ್ದಾಗಿ ನಿದ್ದೆ ಮಾಡುತ್ತಿದ್ದಾರೆ. ಅವರು ಎಚ್ಚೆತ್ತುಕೊಳ್ಳುವ ಹೊತ್ತಿಗೆ ರಾಜ್ಯ ಬಿಜೆಪಿ ಮಕಾಡೆ ಮಲಗಿಯಾಗಿರುತ್ತದೆ.




ರಾಜ್ಯದಲ್ಲಿ ಬಿಜೆಪಿಯ ಈಗಿನ ಕಥೆ ಮನೆಯೊಂದು ಬಾಗಿಲುಗಳು ಹತ್ತಾರು ಎಂಬಂತಾಗಿದೆ. ಅಸಮಾಧಾನಿತರು, ತಟಸ್ಥರು, ಅವಕಾಶವಾದಿಗಳು ಹೀಗೆ ಹತ್ತಾರು ನಾಯಕರ ಗುಂಪುಗಳಿಂದ ವಿಭಜನೆಗೊಳ್ಳುತ್ತಾ ಸಾಗುತ್ತಿದ್ದು, ನಿಷ್ಠಾವಂತ ನಾಯಕರು ಮತ್ತು ಕಾರ್ಯಕರ್ತರು ಲೆಕ್ಕಕ್ಕಿಲ್ಲದಂತಾಗಿ ಮೂಲೆ ಸೇರುವಂತಾಗಿದೆ. ಹಿರಿಯ ಮತ್ತು ಕಿರಿಯ ನಾಯಕರ ನಡುವೆ ಹಗ್ಗಜಗ್ಗಾಟಗಳು ಶುರುವಾಗಿದ್ದು, ಪ್ರತಿಷ್ಠೆಯ ಕಾರಣದಿಂದಾಗಿ ಪಕ್ಷದ ಪ್ರಾಬಲ್ಯ ಮಣ್ಣುಪಾಲಾಗುವ ಲಕ್ಷಣಗಳು ಎದ್ದು ಕಾಣಿಸುತ್ತಿವೆ.

ಹಿರಿಯನಾಯಕ ಬಿಜೆಪಿ ಪಕ್ಷವನ್ನು ರಾಜ್ಯದಲ್ಲಿ ಕಟ್ಟಿ ಬೆಳೆಸಿದ ಬಿ.ಎಸ್. ಯಡಿಯೂರಪ್ಪ ಅವರ ಪುತ್ರ ಎಂಬ ಕಾರಣಕ್ಕೆ ಮತ್ತು ಹಿರಿಯರೊಂದಿಗೆ ಕಿರಿಯರನ್ನು ಒಟ್ಟಾಗಿ ಕೊಂಡೊಯ್ಯುವ ಮತ್ತು ಪಕ್ಷ ಸಂಘಟನೆಗಳಲ್ಲಿ ತೊಡಗಿಸಿಕೊಳ್ಳುವ ಚಾಕಚಕ್ಯತೆಯಿದೆ ಎಂದು ಬಿ.ವೈ.ವಿಜಯೇಂದ್ರರಿಗೆ ಬಿಜೆಪಿ ರಾಜ್ಯಾಧ್ಯಕ್ಷ ಪಟ್ಟ ನೀಡಿರಲಿಲ್ಲ. ಅದಾಗಲೇ ಬಿ.ಎಸ್.ಯಡಿಯೂರಪ್ಪರಿಂದ ಸಿಎಂ ಸ್ಥಾನವನ್ನು ಕಿತ್ತು ಬಸವರಾಜಬೊಮ್ಮಾಯಿ ಅವರಿಗೆ ನೀಡಿರುವುದು ಮಾತ್ರವಲ್ಲದೆ, ಯಡಿಯೂರಪ್ಪರನ್ನು ಮೂಲೆ ಗುಂಪು ಮಾಡಿದ್ದಾರೆ ಎಂಬ ಕಳಂಕವನ್ನು ತೊಡೆದುಹಾಕಲು ಹೈಕಮಾಂಡ್ ಪಟ್ಟ ನೀಡಿತ್ತು.

ನಿಜ ಹೇಳಬೇಕೆಂದರೆ ಸದಾನಂದಗೌಡರು ರಾಜ್ಯಾಧ್ಯಕ್ಷರಾಗಿದ್ದ ಕಾಲದಿಂದಲೇ ಬಿಜೆಪಿಯಲ್ಲಿ ಒಳಜಗಳವಿತ್ತು. ಆ ನಂತರವೂ ಮುಂದುವರೆದಿತ್ತು. ತೀರಾ ಇತ್ತೀಚೆಗೆ ನಳೀನ್ ಕುಮಾರ್ ಕಟೀಲ್ ಅಧ್ಯಕ್ಷರಾಗಿದ್ದ ಕಾಲದಲ್ಲಿ ಪಕ್ಷದಲ್ಲಿ ಭಿನ್ನಮತವಿತ್ತಾದರೂ ಈಗಿನಂತೆ ಅದು ಬೀದಿಗೆ ಬಿದ್ದಿರಲಿಲ್ಲ, ಆದರೆ ಹಿಂದೂ ಕಾರ್ಯಕರ್ತರಲ್ಲಿ ತಾವು ಕಟ್ಟಿ ಬೆಳೆಸಿದ ಪಕ್ಷ ಅಧಿಕಾರದಲ್ಲಿದ್ದರೂ ತಮಗೆ ರಕ್ಷಣೆ ಇಲ್ಲ ಎಂಬ ಆಕ್ರೋಶವಿತ್ತು. ಅದನ್ನು ಹಿಂದೂ ಕಾರ್ಯಕರ್ತರ ಕೊಲೆಯಾದಾಗ ಹೊರ ಹಾಕಲಾಗಿತ್ತು. ಅದನ್ನು ಹೊರತುಪಡಿಸಿದರೆ ಇವತ್ತಿನಂತೆ ತೀವ್ರತೆ ಪಡೆದುಕೊಂಡಿರಲಿಲ್ಲ. ನಳೀನ್ ಕುಮಾರ್ ಕಟೀಲ್ ನಂತರ ಬಿಜೆಪಿ ರಾಜ್ಯಾಧ್ಯಕ್ಷ ಪಟ್ಟವನ್ನು ಯಡಿಯೂರಪ್ಪ ಅವರ ಪುತ್ರ ಬಿ.ವೈ.ವಿಜಯೇಂದ್ರರಿಗೆ ಕಟ್ಟಿದ ಬಳಿಕ ಪಕ್ಷದೊಳಗೆ ಅಸಮಾಧಾನ ತಾರಕಕ್ಕೇರಿದೆ.

ಈ ಹಿಂದೆ ಯಡಿಯೂರಪ್ಪ ಅವರು ಬಿಜೆಪಿಯನ್ನು ಬಿಟ್ಟು ಕೆಜೆಪಿ ಕಟ್ಟಿದಾಗ ಲಿಂಗಾಯಿತರು ಅವರ ಬೆನ್ನಿಗೆ ನಿಂತಿದ್ದರು. ಒಂದಷ್ಟು ನಾಯಕರು ಅವರ ಜತೆಗೆ ಪಕ್ಷ ಬಿಟ್ಟು ಹೋದ ಕಾರಣದಿಂದಾಗಿ ಬಿಜೆಪಿ ಸಂಕಷ್ಟ ಅನುಭವಿಸಿತ್ತು. ಇದರ ಅರಿವಿದ್ದ ಹೈಕಮಾಂಡ್ ಬಿಎಸ್ ವೈನ್ನು ಸಿಎಂ ಸ್ಥಾನದಿಂದ ಇಳಿಸಿದ ಕಳಂಕ ಹೋಗಲಾಡಿಸಲು ಮತ್ತು ಲಿಂಗಾಯಿತ ನಾಯಕರ ಒಲವು ಗಳಿಸಲು ವಿಜಯೇಂದ್ರರಿಗೆ ರಾಜ್ಯಾಧ್ಯಕ್ಷ ಸ್ಥಾನವನ್ನು ನೀಡಲಾಗಿತ್ತು. ಆದರೆ ದುರಂತವೇನೆಂದರೆ ಇವತ್ತು ವಿಜಯೇಂದ್ರರನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ಇಳಿಸುವಂತೆ ಒತ್ತಾಯ ಮಾಡುತ್ತಿರುವವರಲ್ಲಿ ಲಿಂಗಾಯಿತ ನಾಯಕರೇ ಮುಂಚೂಣಿಯಲ್ಲಿದ್ದಾರೆ.

ಯಡಿಯೂರಪ್ಪ ಅವರು ಸಿಎಂ ಆಗಿದ್ದಾಗಲೇ ಪುತ್ರ ವಿಜಯೇಂದ್ರ ವಿರುದ್ಧ ಆರೋಪಗಳು ಬಂದಿತ್ತು. ಅವರ ವಿರುದ್ಧವೇ ಪಕ್ಷದ ನಾಯಕರು ಸಿಡಿದೆದ್ದಿದ್ದರು. ಆ ವೇಳೆ ಯಡಿಯೂರಪ್ಪ ಅವರನ್ನು ಸಿಎಂ ಸ್ಥಾನದಿಂದ ಕೆಳಗಿಳಿಸಲಾಗಿತ್ತು. ಅದಾದ ನಂತರ ರಾಜ್ಯದಲ್ಲಿ ಬಿಜೆಪಿ ಆಡಳಿತವಿತ್ತಾದರೂ ಕಾಂಗ್ರೆಸ್ ರಾಜ್ಯದಲ್ಲಿ ಬೊಮ್ಮಾಯಿ ಸರ್ಕಾರವನ್ನು ಅಲುಗಾಡಿಸಲು ಸರ್ವತಂತ್ರವನ್ನು ಮಾಡಿತ್ತು. ಅದರಲ್ಲಿ ಯಶಸ್ವಿಯೂ ಆಯಿತು. ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪಗಳನ್ನು ಮಾಡುತ್ತಾ ಅದನ್ನು ಜನರ ಬಳಿಗೆ ತೆಗೆದುಕೊಂಡು ಹೋಗುವಲ್ಲಿ ಯಶಸ್ವಿಯಾಯಿತು. ಅಷ್ಟರಲ್ಲಾಗಲೇ ಬಿಜೆಪಿಯಲ್ಲಿ ಒಳಜಗಳಗಳು ಆರಂಭವಾಗಿದ್ದವು. 2023 ಚುನಾವಣೆ ಹೊತ್ತಿಗೆ ಕಾಂಗ್ರೆಸ್ ರಾಜ್ಯದಲ್ಲಿ ಸದೃಢವಾಗಿತ್ತು. ಹೀಗಾಗಿ ಚುನಾವಣೆಯಲ್ಲಿ ಬಿಜೆಪಿ ಸೋಲು ಕಂಡು ಕಾಂಗ್ರೆಸ್ ಅಧಿಕಾರಕ್ಕೆ ಬಂದಿತ್ತು.





ಇದಾದ ಬಳಿಕ ಬಿಜೆಪಿಯಲ್ಲಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಸಂಬಂಧಿಸಿದಂತೆ ಲಾಭಿ ಶುರುವಾಗಿತ್ತು. ಬಸವನಗೌಡ ಯತ್ನಾಳ್, ಸಿ.ಟಿ. ರವಿ ಸೇರಿದಂತೆ ಹಲವು ಹಿರಿಯ ನಾಯಕರು ರೇಸ್‌ನಲ್ಲಿದ್ದರು. ಆದರೆ ಹಿರಿಯರನ್ನೆಲ್ಲ ಬದಿಗೆ ಸರಿಸಿ ಬಿ.ವೈ.ವಿಜಯೇಂದ್ರರವರಿಗೆ ಮಣೆ ಹಾಕಲಾಯಿತು.

☞12

# ಹೆಚ್ಚುತ್ತಿರುವ ಅನೈತಿಕ ಸಂಬಂಧಕ್ಕೆ ಹೆಣ ಬೀಳುತ್ತಿದೆ!


ಗಂಡನಿಂದ ಕೊಲೆಯಾದ ತೇಜಸ್ವಿನಿ

**ನೈತಿಕತೆ ಮೀರಿದ ಸಂಬಂಧವೇ ಅಲ್ಲದ ಸಂಬಂಧಗಳು ನಮ್ಮನ್ನು ನಿಜವಾಗಿಯೂ ಸುಖವಾಗಿಡುತ್ತಿದೆಯಾ? ಹೀಗೊಂದು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗಿದೆ. ಅಕ್ರಮ ಸಂಬಂಧಗಳು ಸಂಸಾರದ ಮಾನ ಮರ್ಯಾದೆಯನ್ನು ಬೀದಿಪಾಲು ಮಾಡುತ್ತಿರುವುದಷ್ಟೇ ಅಲ್ಲದೆ, ಕೊಲೆಗಳಲ್ಲಿ ಅಂತ್ಯವಾಗುವ ಮಟ್ಟಕ್ಕೆ ಹೋಗುತ್ತಿವೆ. ಇದೆಲ್ಲವನ್ನು ಗಮನಿಸಿದಾಗ ಇಂತಹದೊಂದು ಸಂಬಂಧ ಬೇಕಾ? ಎಂದೆನಿಸದಿರದು. ಆದರೂ ಆ ಬಗ್ಗೆ ಯೋಚನೆ ಮಾಡದೆ ಶುರು ಮಾಡುವ ಸಂಬಂಧ ಕೊಲೆಯಲ್ಲಿ ಅಂತ್ಯವಾಗುತ್ತಿರುವುದು ಮಾತ್ರ ದುರಂತವೇ ಸರಿ.**

**ಮೈಸೂರು**
✍ ಬಿ.ಎಂ. ಲವಕುಮಾರ್

ಅಕ್ರಮ ಸಂಬಂಧದ ವಿಚಾರಕ್ಕೆ ಸಂಬಂಧಿಸಿದಂತೆ ಕೊಲೆಗಳಾಗುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಆದರೆ ಇತ್ತೀಚೆಗಿನ ವರ್ಷಗಳಲ್ಲಿ ಇದರ ಪ್ರಮಾಣ ಹೆಚ್ಚಾಗುತ್ತಿರುವುದು ನಿಜಕ್ಕೂ ಬೇಸರದ ಸಂಗತಿಯಾಗಿದೆ. ಮೊಬೈಲ್ ಫೋನ್‌ಗಳು ಕೈಗೆ ಬಂದ ಮೇಲೆ ಸಂಪರ್ಕ ಸುಲಭವಾಯಿತು. ಅದರಲ್ಲೂ ಇತ್ತೀಚೆಗೆ ಇಂಟರ್‌ನೆಟ್ ಅಗ್ಗವಾಗಿ ಸೋಷಿಯಲ್ ಮೀಡಿಯಾಗಳು ಆಕ್ಟೀವ್ ಆದ ನಂತರವಂತೂ ಸಂಬಂಧಗಳು ಕುದುರುವುದು ಬಲು ಸುಲಭವಾಗಿದ್ದು, ಹಲವು ಸಂಸಾರಗಳು ಮುರಿದು ಹೋಗುವ ಮಟ್ಟಕ್ಕೆ ಬಂದು ತಲುಪಿವೆ. ಅಷ್ಟೇ ಅಲ್ಲದೆ ಸಂಬಂಧಗಳು ಕೊಲೆಯಲ್ಲಿ ಅಂತ್ಯವಾಗುತ್ತಿವೆ.

ಸಂಬಂಧಗಳಲ್ಲಿ ಒಳ್ಳೆಯತನವಿದ್ದರೆ ತೊಂದರೆಯಿಲ್ಲ, ಜೊತೆಗೆ ಎಲ್ಲೆ ಮೀರಿ ಹೋದರೆ ತೊಂದರೆಗಳು ಕಟ್ಟಿಟ್ಟಬುತ್ತಿ. ಇವತ್ತಿನ ಎಲ್ಲ ಸೌಲಭ್ಯಗಳು ನಮ್ಮ ಅನುಕೂಲಕ್ಕಾಗಿಯೇ ಇವೆ. ಆದರೆ ಯಾವುದನ್ನು ಹೇಗೆ ಬಳಸಿಕೊಳ್ಳುತ್ತೇವೆ ಎಂಬುದರ ಮೇಲೆ ನಿಂತಿದೆ. ಈ ವಿಚಾರದಲ್ಲಿ ಸಂಬಂಧಗಳು ಕೂಡ ಅಷ್ಟೇ. ಅವುಗಳನ್ನು ನೈತಿಕ ನೆಲಗಟ್ಟಿನಲ್ಲಿ ಮುಂದುವರೆಸಿದರೆ ನಾವೆಲ್ಲವೂ ಸುಖವಾಗಿರಲು ಸಾಧ್ಯವಾಗುತ್ತದೆ. ಆದರೆ ಅದು ಅಕ್ರಮದ ಕಡೆಗೆ ತಿರುಗಿದರೆ ಅದರಿಂದ ಯಾರಿಗೂ ನೆಮ್ಮದಿಯಿಲ್ಲ ಎಂಬುದನ್ನು ಮರೆಯಬಾರದು.

ಸಂಸಾರದ ನೌಕೆಯಲ್ಲಿ ಸಾಗುವವರು ಇತ್ತೀಚೆಗೆ




ಸೋಷಿಯಲ್ ಮೀಡಿಯಾದಲ್ಲಿ ಪರಿಚಯವಾಗುವ ಅಪರಿಚಿತರ ಜೊತೆ ಕ್ಲೋಸ್ ಆಗಿ ಮೂವ್ ಆಗಿ ಮನೆ ತನಕ ಕರೆಯಿಸಿಕೊಳ್ಳುವ ಮಟ್ಟಕ್ಕೆ ಹೋಗಿ ಅವರೊಂದಿಗೆ ಅಕ್ರಮ ಸಂಬಂಧ ಹೊಂದಿದ ಬಳಿಕ ನಡತೆಯಲ್ಲಿ ಅನುಮಾನ ಹುಟ್ಟಿ ಮನೆಯಲ್ಲಿ ಸದಾ ಕಿರಿಕಿರಿಗಳಾಗಿ ಕೊನೆಗೆ ಗಂಡನನ್ನೋ, ಹೆಂಡತಿಯನ್ನೋ ಮುಗಿಸಿದರೆ ನೆಮ್ಮದಿಯಾಗಿರಬಹುದೆಂಬ ತೀರ್ಮಾನಕ್ಕೆ ಬಂದು ಕೊಲೆ ಮಾಡಿ ಜೈಲ್ ಸೇರುವ ಪ್ರಕರಣಗಳು ನಡೆಯುತ್ತಿವೆ.


ಪತ್ನಿಯಿಂದ ಕೊಲೆಯಾದ ರಮೇಶ್

ಪ್ರತಿನಿತ್ಯವೂ ಅನೈತಿಕ ಸಂಬಂಧದ ಹಿನ್ನಲೆಯಲ್ಲಿ ಕೊಲೆಗಳು ನಡೆಯುತ್ತಿದ್ದು, ಎಷ್ಟೇ ಚಾಣಕ್ಯತನ ತೋರಿದರೂ ಕೊನೆಗೆ ಪೊಲೀಸರಿಗೆ ಸಿಕ್ಕಿ ಬಿದ್ದು ಜೈಲ್ ಸೇರುವ ಘಟನೆಗಳು ನಡೆಯುತ್ತಲೇ ಇದ್ದು, ಇದೆಲ್ಲವನ್ನು ನೋಡಿದ ಮೇಲೆಯೂ ಒಬ್ಬರನ್ನು ಕೊಲೆ ಮಾಡಿ ನಾವು ಸುಖವಾಗಿರಬಹುದೆಂದು ಬಯಸುವವರ ಭ್ರಮೆ ಮಾತ್ರ ದೂರವಾಗಿಲ್ಲ ಎಂಬುದು ಮನದಟ್ಟಾಗುತ್ತದೆ. ಬಹಳಷ್ಟು ಕೊಲೆಗಳಲ್ಲಿ ಹೆಂಡತಿಯೇ ಹಂತಕಿಯಾಗುವುದು, ಗಂಡನೇ ಹಂತಕನಾಗುವುದು ಮಾತ್ರ ಬೇಸರದ ಸಂಗತಿಯಾಗಿದೆ.

ಇಲ್ಲಿ ಕೊಲೆ ಮಾಡಿದವರು, ಮಾಡಿಸಿದವರು ಯಾರೂ ಕೂಡ ನೆಮ್ಮದಿಯಾಗಿ ಬಾಳಲು ಸಾಧ್ಯವೇ ಇಲ್ಲ. ಒಬ್ಬರನ್ನು ಸಾಯಿಸಿ ಸುಖವಾಗಿ ಬದುಕುತ್ತೇವೆ ಎನ್ನುವುದು ಭ್ರಮೆಯಷ್ಟೆ, ಈ ಭೂಮಿ ಮೇಲೆ ನಾವು ಮಾಡುವ ಎಲ್ಲ ಕರ್ಮಗಳಿಗೂ ಕಂದಾಯ ಕಟ್ಟಲೇ ಬೇಕಾಗುತ್ತದೆ. ಹೀಗಿರುವಾಗ ಕೊಲೆ ಮಾಡಿ ಬದುಕಲು ಸಾಧ್ಯನಾ? ಇದ್ಯಾವುದನ್ನು ಅರಿತುಕೊಳ್ಳದೆ, ನಮ್ಮ ಸ್ವಚ್ಛಂದದ ಬದುಕಿಗೆ ಅಡ್ಡಿಯಾಗಿದ್ದಾರೆ ಎನ್ನುವ ಕಾರಣಕ್ಕೆ ಕೊಲೆ ಮಾಡಿ ಮುಂದೆ ನಾವು ಯಾವುದೇ ತೊಂದರೆಯಿಲ್ಲದೆ ನಮ್ಮಿಷ್ಟದಂತೆ ಹೇಗೆ ಬೇಕೋ ಹಾಗೆ ಇರಬಹುದೆಂದು ಕೊಳ್ಳುವುದು ಭ್ರಮೆಯಲ್ಲದೆ ಮತ್ತೇನಲ್ಲ.

ವಿವಾಹಿತರ ಅಕ್ರಮ ಸಂಬಂಧದ ಕೊಲೆ ಪ್ರಕರಣಗಳಲ್ಲಿ ಏನೂ ತಪ್ಪುಮಾಡದ ಮಕ್ಕಳು ತಬ್ಬಲಿಯಾಗುತ್ತಿವೆ. ಕೊಲೆ ಮಾಡಿದ ಬಳಿಕ ಹೆತ್ತವರ ಪೈಕಿ ಒಬ್ಬರು ಸಾವನ್ನಪ್ಪಿರುತ್ತಾರೆ. ಮತ್ತೊಬ್ಬರು ಜೈಲ್ ಸೇರಿರುತ್ತಾರೆ. ಇಂತಹವರಿಗೆ ಹುಟ್ಟಿದ ತಪ್ಪಿಗೆ ಮಕ್ಕಳು ಅನಾಥರಾಗಬೇಕಾಗುತ್ತದೆ. ಸೋಷಿಯಲ್ ಮೀಡಿಯಾಗಳಲ್ಲೋ ಅಥವಾ ಇನ್ನೆಲ್ಲೋ ಆಗುವ ಪರಿಚಯಗಳನ್ನು ಅಲ್ಲಿಯೇ ಬಿಟ್ಟು, ಮನೆಯ ತನಕ ಎಳೆದುಕೊಳ್ಳದೆ ಮುನ್ನಡೆದರೆ ನೆಮ್ಮದಿಯಾಗಿರಲು ಸಾಧ್ಯವಾಗಬಹುದೇನೋ? ಆದರೆ ಆ ರೀತಿ ಆಗುತ್ತಿಲ್ಲ, ಪ್ರಿಯಕರನಿಗಾಗಿಯೋ? ಪ್ರಿಯತಮೆಗಾಗಿಯೋ ತನ್ನ ಹೆಂಡತಿ ಅಥವಾ ಗಂಡನನ್ನು ಕೊಲ್ಲುವುದು ಅಥವಾ ಹೆಂಡತಿಯ ಅನೈತಿಕ ಸಂಬಂಧ ಗೊತ್ತಾಗಿ ಗಂಡನೇ ಹೆಂಡತಿಯನ್ನು ಕೊಲ್ಲುವುದು ಇಲ್ಲವೇ ಆತ್ಮಹತ್ಯೆ ಮಾಡಿ ಕೊಳ್ಳುವುದು ಹೀಗೆ ಏನಾದರೊಂದು ಘಟನೆ ನಡಯುತ್ತಲೇ ಇದೆ.

**ಅನೈತಿಕ ಸಂಬಂಧಕ್ಕೆ ಹೆಂಡತಿಯ ಕೊಲೆ**

ಈ ನಡುವೆ ಗಂಡನಿದ್ದರೂ ಹೆಂಡತಿ ಪ್ರಿಯಕರನೊಂದಿಗೆ ಚೆಲ್ಲಾಟವಾಡುತ್ತಿದ್ದಳು. ಅಷ್ಟೇ ಅಲ್ಲದೆ ಗಂಡನನ್ನು ಬಿಟ್ಟು ಓಡಿ ಹೋಗಿದ್ದಳು. ಆಕೆಯನ್ನು ಕರೆತಂದು ರಾಜೀಪಂಚಾಯಿತಿ ಮಾಡಿಸಿ ತೆಪ್ಪಗೆ ಇರುವಂತೆ ಬುದ್ದಿ ಹೇಳಿದರೂ ಆಕೆ ಮತ್ತೆ ಗಂಡನಿಗೆ ಗೋಲಿ ಹೊಡೆದು ಪ್ರಿಯಕರನ ಜೊತೆ ಡಿಂಗ್ ಡಾಂಗ್ ಶುರು ಮಾಡಿಕೊಂಡಿದ್ದಳು ಇದರಿಂದ ರೊಚ್ಚಿಗೆದ್ದ ಗಂಡ ಆಕೆಯನ್ನು ಕೊಲೆಗೈದು ಪೊಲೀಸರಿಗೆ ಶರಣಾಗಿದ್ದಾನೆ.

ತನ್ನ ಇಪ್ಪತ್ತಾರನೇ ವಯಸ್ಸಿಗೆ ಗಂಡನಿಂದ ಹೆಣವಾಗಿ ಹೋದವಳ ಹೆಸರು ತೇಜಸ್ವಿನಿ. ಈಕೆ ಮೈಸೂರು ಜಿಲ್ಲೆಯ ಹೆಚ್.ಡಿ. ಕೋಟೆ ತಾಲೂಕಿನ ಕುಟ್ಟಾಡಿ ಗ್ರಾಮದವಳು. ಈಕೆ ಕಣಿಯನಹುಂಡಿ ಗ್ರಾಮದ ದೇವರಾಜ್ ಎಂಬಾತನನ್ನು ಮದುವೆಯಾಗಿದ್ದಳು. ಗಂಡ ದೇವರಾಜ್ ಕೃಷಿ ಮಾಡಿಕೊಂಡು ಜೀವನ ನಡೆಸುತ್ತಿದ್ದನು. ಹಾಗೆಯೇ ಹೆಂಡತಿ ತೇಜಸ್ವಿನಿಗೆ ಯಾವುದೇ ರೀತಿಯಲ್ಲಿ ತೊಂದರೆ ಮಾಡಿರಲಿಲ್ಲ, ಕಳೆದ ಎಂಟು ವರ್ಷಗಳಿಂದ ಇವರು ದಾಂಪತ್ಯ ಜೀವನ ನಡೆಸಿಕೊಂಡು ಬಂದಿದ್ದರು. ಇವರಿಗೆ ಐದು ವರ್ಷದ ಗಂಡು ಮಗು ಮತ್ತು ಮೂರು ವರ್ಷದ ಹೆಣ್ಣು ಮಗು ವಿತ್ತು. ತೇಜಸ್ವಿನಿ ನೋಡಲು ಸುಂದರಿಯಾಗಿದ್ದಳು ಗಂಡ ಮಕ್ಕಳು ಅಂಥ ಜವಬ್ದಾರಿ ಅರಿತು ಬದುಕಿಕೊಂಡು ಹೋಗಿದ್ದರೆ ಏನೂ ಆಗುತ್ತಿರಲಿಲ್ಲ.


ಆರೋಪಿ ಗುರುಪಾದಸ್ವಾಮಿ

ಅದೇನಾಯಿತೂ ಆಕೆ ತಾನೊಬ್ಬಳು ಜವಾಬ್ದಾರಿಯುತ ಹೆಣ್ಣು ನನಗೆ ನನ್ನದೇ ಆದ ಕುಟುಂಬವಿದೆ ಎಂಬುದನ್ನು ಮರೆತು ಹುಣಸೂರು ತಾಲೂಕಿನ ಆಸ್ವಾಳ್ ಗ್ರಾಮದ ಯುವಕನ ಮೇಲೆ ವ್ಯಾಮೋಹವಾಗಿತ್ತು. ಅದು ಎಷ್ಟರ ಮಟ್ಟಿಗೆ ಹೋಯಿತು ಎಂದರೆ ಗಂಡ ದೇವರಾಜ್ ನನ್ನು ಬಿಟ್ಟು ಹೋಗುವಷ್ಟರ ಮಟ್ಟಿಗೆ ಬೆಳೆದು ಬಿಟ್ಟಿತು. ತನ್ನ ಹೆಂಡತಿ ಮತ್ಯಾವುದೋ ಯುವಕನ ಜತೆ ಚೆಲ್ಲಾಟ ಆಡುವ ವಿಚಾರ ಗಂಡನಿಗೆ ಗೊತ್ತಾಗಿತ್ತು. ಹೀಗಾಗಿ ಜಗಳಗಳು ಶುರುವಾದವು. ಇಬ್ಬರ ಜಗಳ ಕೊನೆಗೆ ಪೊಲೀಸ್ ಸ್ಟೇಷನ್ ಮೆಟ್ಟಿಲೇರಿತು. ಪೊಲೀಸರು ಉಗಿದು ಬುದ್ದಿ ಹೇಳಿದರು. ಹಾಗೆಯೇ ಹಿರಿಯರು ಒಂದೆಡೆ ಕೂರಿಸಿ ಬುದ್ದಿ ಹೇಳಿದರು. ಆದರೆ ತೇಜಸ್ವಿನಿಯ ಕಾಮುಕ ಮನಸ್ಸು ಆ ಯುವಕನನ್ನೇ ಬಯಸಲಾರಂಭಿಸಿತು. ಹೀಗಾಗಿ ಹಿರಿಯರು ಹೇಳಿದ ಬುದ್ದಿಯನ್ನು ಗಾಳಿಗೆ ತೂರಿ ಅವನತ್ತಲೇ ಹೋಗಬೇಕೆನಿಸಲಾರಂಭಿಸಿತ್ತು. ಮಕ್ಕಳ ಬದುಕಿಗಿಂತ ಹೆಚ್ಚಾಗಿ ಪ್ರಿಯಕರನೇ ಹೆಚ್ಚಾಗಿ ಬಿಟ್ಟಿದ್ದನು.

ಹೀಗಾಗಿ ಒಂದಷ್ಟು ದಿನ ಏನೂ ನಡೆದೇ ಇಲ್ಲ ಎಂಬಂತಿದ್ದ ತೇಜಸ್ವಿನಿ ಅದೊಂದು ದಿನ ಆ ಪ್ರಿಯಕರನ ಜತೆಯಲ್ಲಿ ಫಲಾಯನಗೈದಿದ್ದಳು. ಮತ್ತೆ ಗಂಡ ಆಕೆಯನ್ನು ಹುಡುಕಿ ಮಕ್ಕಳಿಗೋಸ್ಕರ ಮನೆಗೆ ಸೇರಿಸಿಕೊಂಡಿದ್ದನು. ಈ ವೇಳೆ ಹಿರಿಯರು ರಾಜಿ ಪಂಚಾಯಿತಿ ನಡೆಸಿ ಆಕೆಗೆ


ಆರೋಪಿ ಗೀತಾ

ಬುದ್ದಿಹೇಳಿ ಒಂದುಗೂಡಿಸಿದ್ದರು. ಆದರೆ ದೇವರಾಜ್ ಗಿಂತ ಆ ಯುವಕ ತನಗೆ ಬೆಸ್ಟ್ ಎಂದು ಕೊಂಡಿದ್ದ ತೇಜಸ್ವಿನಿ ಮತ್ತೆ ಆತನ ಸಂಗಕ್ಕೆ ಹಾತೊರೆಯಲಾರಂಭಿಸಿದ್ದಳು.

ತೇಜಸ್ವಿನಿಯ ಚೆಲ್ಲಾಟದಿಂದ ಸಾಕು ಸಾಕಾಗಿದ್ದ ದೇವರಾಜ್ ಅವಳಿಗೆ ಬುದ್ದಿ ಹೇಳುವ ಪ್ರಯತ್ನ ಮಾಡಿದರೂ ಅದು ಸಾಧ್ಯವಾಗಲಿಲ್ಲ, ಹೀಗಾಗಿ ಜಗಳಗಳು ಶುರುವಾಗಿದ್ದವು. ಅದು ತೀವ್ರಮಟ್ಟಕ್ಕೆ ಹೋಗಿತ್ತು. ಈ ವೇಳೆ ಆಕ್ರೋಶಗೊಂಡ ಗಂಡ ದೇವರಾಜ್ ಮಚ್ಚಿನಿಂದ ಕೊಚ್ಚಿ ಅವಳನ್ನು ಕೊಲೆ ಮಾಡಿಯೇ ಬಿಟ್ಟಿದ್ದನು. ಇದಾದ ನಂತರ ಮಚ್ಚಿನೊಂದಿಗೆ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಗೆ ಹೋಗಿ ಶರಣಾಗಿದ್ದನು. ಅಲ್ಲಿಗೆ ಅನೈತಿಕ ಸಂಬಂಧದ ಜಟಾಪಟಿ ಅಂತ್ಯವಾಗಿತ್ತು. ಆದರೆ ಅಪ್ಪ ಅಮ್ಮನ ಜಟಾಪಟಿಯಲ್ಲಿ ಮಕ್ಕಳಿಬ್ಬರು ಅನಾಥರಾಗಿದ್ದಾರೆ. ಮಕ್ಕಳ ಭವಿಷ್ಯದ ಕಥೆಯೇನು? ಇಷ್ಟಕ್ಕೂ ಮಕ್ಕಳು ಮಾಡಿದ ತಪ್ಪಾದರೂ ಏನು?

**ಪ್ರಿಯಕರನಿಗಾಗಿ ಗಂಡನನ್ನೇ ಕೊಂದ ಹೆಂಡತಿ**

ಇನ್ನೊಂದು ಪ್ರಕರಣ ಮೇಲಿನ ಪ್ರಕರಣಕ್ಕೆ ವಿರುದ್ಧ

☞12



ಕಣ್ವ ಜಲಾಶಯದ ಒಂದು ನೋಟ



ಜಲಾಶಯದ ಹೊರನೋಟ





ಜಲಾಶಯದಲ್ಲಿ ನಾಮಫಲಕ

# ಸುಂದರ ಪ್ರಕೃತಿಯ ಸೊಬಗಿನಲ್ಲಿ ಕಣ್ವ ಜಲಾಶಯ ಅಭಿವೃದ್ಧಿ ಪಡಿಸಿದರೆ ಪ್ರವಾಸಿಗರ ತಾಣ!

ರಾಮನಗರ

✍ ಶಾಂತರಾಜು ಜಿ. ಕಲ್ಲಹಳ್ಳಿ

ಸುಂದರ ಪ್ರಕೃತಿಯ ಸೊಬಗಿನಲ್ಲಿ ಪ್ರವಾಸಿಗರ ತಾಣವಾದ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಜೀವನಾಡಿ ಎಂದೇ ಖ್ಯಾತಿ ಪಡೆದಿರುವ ಕಣ್ವ ಜಲಾಶಯ ಏಷ್ಯಾದಲ್ಲೇ ಮೊದಲ ಸ್ವಯಂಚಾಲಿತ ಕ್ರಸ್ಟ್ ಗೇಟ್ ಎಂಬ ಇತಿಹಾಸಕ್ಕೆ ಕಾರಣವಾಗಿರುವ ಸರ್ ಎಂ. ವಿಶ್ವೇಶ್ವರಯ್ಯ ಅವರು ನಿರ್ಮಾಣ ಮಾಡಿರುವ ಈ ಜಲಾಶಯ ಇದೀಗ ಮತ್ತೊಂದು ಇತಿಹಾಸದ ಪುಟಕ್ಕೆ ಸೇರಲು ಸಿದ್ಧವಾಗಿದೆ. ಜೊತೆಗೆ ಕಣ್ವ ಜಲಾಶಯವನ್ನು ಪ್ರವಾಸಿಗರ ತಾಣವನ್ನಾಗಿ ಅಭಿವೃದ್ಧಿ ಮಾಡಿದರೆ ಹತ್ತಾರು ಉದ್ಯಮಿಗಳಿಗೆ ಉತ್ತೇಜನ ನೀಡಿದಂತಾಗುವುದು.



ಚನ್ನಪಟ್ಟಣ ಅಭಿವೃದ್ಧಿ ಚಾಲನೆ ನೀಡುತ್ತಿರುವ ಡಿ.ಕೆ. ಶಿವಕುಮಾರ

ಮೈಸೂರಿನ ಮಹಾರಾಜರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಆಶಯವನ್ನು ಮುಂದುವರೆಸಿಕೊಂಡು ಬಂದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ ಆಡಳಿತಾವಧಿಯಲ್ಲಿ ರೂಪುಗೊಂಡ ಕಣ್ವ ಜಲಾಶಯವು ಇಂದಿಗೆ 75 ವಸಂತಗಳನ್ನು ಪೂರೈಸಿ 76ನೇ ವಸಂತಕ್ಕೆ ಕಾಲಿಟ್ಟಿರುವ ಈ ಜಲಾಶಯ ದಶಮಾನಗಳಿಂದ ಸಾವಿರಾರು ಹೆಕ್ಟೇರ್ ಕಾಲಿಟ್ಟಿರುವ ಈ ಜಲಾಸಯ ದಶಮಾನಗಳಿಂದ ಸಾವಿರಾರು ಹೆಕ್ಟೇರವ ಕೃಷಿ ಭೂಮಿಯ ನೀರಿನ ಸೆಲೆಯಾಗಿ ಸಾವಿರಾರು ಕುಟುಂಬಗಳಿಗೆ ಉಪಯುಕ್ತವಾಗಿದೆ. ಕಣ್ವ ಜಲಾಸಯವು ಸಾವಿರಾರು ಎಕರೆ ವಿಶಾಲವಾದ ಭೂ ಪ್ರದೇಶವನ್ನು ಹೊಂದಿದ್ದು ಆಯಕಟ್ಟಿನ ಪ್ರದೇಶದಲ್ಲಿ ಇದ್ದು ಸುತ್ತಲೂ ಹಲವಾರು ವನಸಿರಿಯ ಗುಡ್ಡಗಳನ್ನು ಹೊಂದಿರುವುದರಿಂದ ಪ್ರವಾಸಿ ತಾಣಕ್ಕೆ ಹೇಳಿ ಮಾಡಿಸಿರುವ ರೀತಿಯಲ್ಲಿದೆ.



ಜಲಾಶಯ ವೀಕ್ಷಣೆ ಮಾಡುತ್ತಿರುವುದು

ಚನ್ನಪಟ್ಟಣ ಹಾಗೂ ಪುರಾಣದ ಕತೆಗಳಿಗೂ ಅವಿನಾಭಾವ ಸಂಬಂಧವಿದ್ದು ಇತಿಹಾಸವನ್ನು ನಮ್ಮ ಹಿರಿಯರ ಮುಖಾಂತರ ಜನಪದ ಗೀತೆಗಳು ಹಾಗೂ ಕತೆಗಳ ಮೂಲಕ ಕೇಳಬಹುದಾಇದೆ. ಒಮ್ಮೆ ಹನುಮಂತ ವಿಂದ್ಯಾ ಪರ್ವತದಿಂದ ಸಂಜೀವಿನಿ ಪರ್ವತವನ್ನು ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಕಣ್ವ ಜಲಾಶಯದ ಪಕ್ಕದಲ್ಲಿ ಇರುವಂತಹ ಕಂಬದ ರಾಯನಗುಡ್ಡ ಬಳಿ ಕಂಬಾಸುರ ಎಂಬ ರಕ್ಕಸ ಕಲ್ಲಿನ ರೂಪದಲ್ಲಿ ಎತ್ತರಕ್ಕೆ ಬೆಳೆಯುತ್ತಿದ್ದ ಕಲ್ಲು ಸಂಜೀವಿನಿ ಪರ್ವತವನ್ನು ತೆಗೆದುಕೊಂಡು ಹೋಗುತ್ತಿದ್ದ ಹನುಮಂತನ ಕಾಲಿಗೆ ತಾಗಿ ಕಲ್ಲು ಚೂರು ಚೂರಾಗುತ್ತದೆ. ಆಗ ದೇವರ ಹೊಸಹಳ್ಳಿ ಬಳಿ ಹೋಗಿ ಪಶ್ಚಿಮಾಭಿಮುಖವಾಗಿ ಹನುಮಂತ ತಿರುಗಿ ನೋಡುತ್ತಾನೆ. ಆ ಕಾರಣದಿಂದ ಸಂಜೀವರಾಯಸ್ವಾಮಿ ದೇವಸ್ಥಾನವನ್ನು ಆ ಜಾಗದಲ್ಲೇ ಸ್ಥಾಪಿಸಲಾಗಿದ್ದು, ಕುಂಬಾಸುರ ಕಲ್ಲೇ ದೇವಸ್ಥಾನದ ಮುಂಭಾಗದಲ್ಲಿ ಗರುಡಗಂಬವಾಗಿ ನಿಂತಿದೆ ಎಂದು ಹೇಳಲಾಗುತ್ತಿದೆ. ನಂತರ ಅಲ್ಲಿಂದ ಆಕಾಶಕ್ಕೆ ಜಿಗಿದ ಹನುಮಂತ ವಾಯು ಮಾರ್ಗದಲ್ಲಿ ಸಂಜೀವಿನಿ ತೆಗೆದುಕೊಂಡು ಚಲಿಸುವಾಗ ವಿಪರೀತ ಕಾಲು ನೋವಿನಿಂದ ರಕ್ತಸ್ರಾವವಾಗುತ್ತಿದ್ದರಿಂದ ಒಂದು ಗುಡ್ಡೆ ಮೇಲೆ ನಿಂತ ಹನುಮಂತನ ಕಾಲಿನ ರಕ್ತದಿಂದ ಅಲ್ಲಿನ ಗುಡ್ಡೆಯ ಕಲ್ಲುಗಳೆಲ್ಲ ಕೆಂಪುಮಯವಾಗಿರುವುದರಿಂದ ಆ ಸ್ತಳಕ್ಕೆ ಕೆಂಗಲ್ಲು ಎಂದು ಕರೆಯಲಾಯಿತು ಎಂದು ಹಿರಿಯರ ಮಾತಾಗಿದೆ. ದೇವರ ಹೊಸಹಳ್ಳಿ ಸಂಜೀವರಾಯಸ್ವಾಮಿ ದೇವಸ್ಥಾನ ಹಾಗೂ ಕೆಂಗಲ್ಲು ಬಳಿ ಸಂಜೀವಿನಿ ಪರ್ವತದಿಂದ ಉದುರಿದ ವನಸ್ಥಿತಿಗಳನ್ನು ಶೇಖರಿಸಿ ಹನುಮಂತನ ಗಾಯಕ್ಕೆ ಔಷಧಿಯಾಗಿ ಬಳಸಲಾಗಿತ್ತು ಎಂಬ ಪುರಾಣಗಳಿವೆ. ಸುತ್ತಮುತ್ತಲಿನ ಗುಡ್ಡೆಗಳಲ್ಲಿ ಇಂದಿಗೂ ಹಲವಾರು ಔಷಧೀಯ ಗಿಡಮೂಲಿಕೆಗಳಿವೆ ಎಂದು ಹೇಳಲಾಗುತ್ತಿದೆ. ಹಾಗಾಗಿ ಈ ಭಾಗದ ಕಣ್ವ ಜಲಾಶಯ ಹಾಗೂ ಅಕ್ಕಪಕ್ಕ ಪ್ರದೇಶವನ್ನು ಅಭಿವೃದ್ಧಿಪಡಿಸಿದರೆ ಮಾತ್ರ ಐತಿಹಾಸಿಕ ಸ್ಥಳಗಳನ್ನು ಉಳಿಸಿಕೊಳ್ಳಲು ಸಾಧ್ಯ ಎಂಬುದು ಕೆಲವು ಸಾಹಿತಿಗಳ ಮಾತಾಗಿದೆ.




ಇಂದು ಪ್ರತಿಯೊಬ್ಬರು ಒಂದಲ್ಲ ಒಂದು ರೀತಿ ಒತ್ತಡದಲ್ಲೇ ಜೀವನ ಮಾಡುವ ಪರಿಸ್ಥಿತಿಯ ನಡುವೆ ಒಂದು ದಿನವಾದರೂ ವಿಶ್ರಾಂತಿ ಪಡೆಯೋಣ ಎಂದು ಕುಟುಂಬದೊಂದಿಗೆ ಪ್ರವಾಸಕ್ಕೆ ತೆರಳುವವರಿಗೆ ಈ ಚನ್ನಪಟ್ಟಣ ತಾಲ್ಲೂಕಿನಲ್ಲಿ ಒಂದು ಸುಂದರವಾದ ಪ್ರವಾಸಿ ತಾಣವನ್ನು ನಿರ್ಮಾಣ ಮಾಡಿ, ಗಗನಚುಚ್ಚಿ, ಬರಚುಕ್ಕಿಯಂತಹ ಇತಿಹಾಸದ ಪ್ರವಾಸಿ ತಾಣಗಳ ಪಟ್ಟಿಗೆ ಕಣ್ವ ಜಲಾಶಯವನ್ನು ಸೇರಿಸುವ ನಿಟ್ಟಿನಲ್ಲಿ ಕೆಲವು ಹೋರಾಟಗಾರರು ಹೋರಾಡಿರುವ ವಿಚಾರಗಳುಂಟು.

ಕಣ್ವ ಜಲಾಶಯದ ಪ್ರದೇಶದಲ್ಲಿ ಸುತ್ತಮುತ್ತ ಹಲವಾರು ವನಸಿರಿಯ ಗುಡ್ಡಗಳನ್ನು ಹೊಂದಿರುವುದರಿಂದ ಈ ಜಲಾಶಯದ ಬಳಿ ಚಿಲ್ಡ್ರನ್ ಪಾಕರ್ವ ಸೇರಿದಂತೆ ಇತರೆ ಅಭಿವೃದ್ಧಿಗೆ 10 ಕೋಟಿ ರೂ. ಅನುದಾನವನ್ನು ನೀಡುವುದಾಗಿ ಘೋಷಣೆ ಮಾಡಲಾಗಿದೆ. ಆದರೆ ಇದಾದ ಬಳಿಕ ಈ ಬಗ್ಗೆ ಈ ಕ್ಷೇತ್ರದ ಶಾಸಕರು ಹೆಚ್ಚು ಗಮನ ನೀಡದ ಕಾರಣ ಇದು ನೆನೆಗುದಿಗೆ ಬಿದ್ದಿತ್ತು. ಮತ್ತೆ ಶಾಸಕರಾಗಿರುವ ಸಿ.ಪಿ. ಯೋಗೇಶ್ವರ್‌ರವರು ಕಾಳಜಿ ಮತ್ತು ಕನಕಪುರ ಬಂಡೆ ಎಂದು ಖ್ಯಾತಿ ಪಡೆದಿರುವ ಬಂಡೆಗೆ ಯಾವುದೇ ಇಲಾಖೆಯನ್ನು ಪಡೆದರೂ ಆ ಇಲಾಖೆಯಲ್ಲಿ ಅಭಿವೃದ್ಧಿಯ ಸಾಕ್ಷಿಗುಡ್ಡೆ ಸೃಷ್ಠಿ ಮಾಡುವ, ಅಭಿವೃದ್ಧಿಯ ನಾಯಕ ರಾಜ್ಯದ ಉಪಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್‌ರವರು ನೀರಾವರಿ ಇಲಾಖೆಯ ಸಚಿವರಾಗಿರುವ ಇವರು ಇದೀಗ ಮತ್ತೆ ಈ ಕ್ಷೇತ್ರದ ಕಣ್ವ ಜಲಾಶಯವನ್ನು ಪ್ರವಾಸಿಗರ ತಾಣವಾಗಿಸುವ ಯೋಜನೆಗೆ ಚಾಲನೆ ನೀಡಿದ್ದಾರೆ.



ಜಲಾಶಯದಲ್ಲಿ ಬೋಟಿಂಗ್ ವೀಕ್ಷಣೆ ಮಾಡಿದ ಡಿಸಿಎಂ



ಡಿ.ಕೆ. ಸುರೇಶ್ ಜೊತೆ ಸಿ.ಪಿ. ಯೋಗೇಶ್ವರ್ ಜಲಾಶಯದಲ್ಲಿ

ಕಣ್ವ ಜಲಾಶಯವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿ ಮಾಡಿದರೆ ಇಲ್ಲಿ ವ್ಯಾಪಾರಕ್ಕೆ ಹೆಚ್ಚಿನ ಆದ್ಯತೆ ಸಿಗುತ್ತದೆ. ಅದರಲ್ಲೂ ತಾಲ್ಲೂಕು ಹೈನೋದ್ಯಮದಲ್ಲಿ ರಾಜ್ಯಕ್ಕೆ ಹೆಚ್ಚು ಹಾಲನ್ನು ಉತ್ಪಾದಿಸುತ್ತಿದ್ದು, ನಂದಿನಿ ಉತ್ಪನ್ನಗಳನ್ನು ಮಾರಾಟ ಮಾಡಲು ಮಳಿಗೆಗಳು ಸೇರಿದಂತೆ ನೀರಾ ಇಳಿಸಿ ಸಂಕ್ರಣೆ ಮಾಡಿ ಪ್ಯಾಕೆಟ್ ಮತ್ತು ಬಾಟಲ್‌ಗಳಲ್ಲಿ ಮಾರಾಟ ಮಾಡುವ ಪಾರ್ಲರ್ ಸಹ ನಿರ್ಮಾಣ ಮಾಡಬಹುದಾಗಿದೆ. ಇದರ ಜೊತೆಗೆ ಕಣ್ವ ಜಲಾಶಯ ಮೀನು ಸಾಕಾಣಿಕೆಗೆ ಹೆಚ್ಚು ಪ್ರಸಿದ್ಧಿಯಾಗಿದ್ದು ಇಲ್ಲಿ ಪ್ರವಾಸಕ್ಕೆ ಬರುವವರಿಗೆ ಮೀನಿನ ಖಾದ್ಯಗಳನ್ನು ಮಾಡುವ ಮಳಿಗೆಗಳಿಗೂ ಬೇಡಿಕೆ ಸಿಗಲಿದೆ. ಇದರಿಂದ ಹತ್ತಾರು ಸಣ್ಣ ವ್ಯಾಪಾರಗಳು, ಹೋಟೆಲ್‌ಗಳು ಸಹ ನಿರ್ಮಾಣ


☞ 5



ಕೆಂಗಲ್ ಆಂಜನೇಯ ದೇವಾಲಯ



ಕೆಂಗಲ್‌ನಲ್ಲಿ ಆಂಜನೇಯ ಗದೆ ಹೋಲುವ ನೀರಿನ ಟ್ಯಾಂಕ್



ಕೆಂಗಲ್ ಆಂಜನೇಯಸ್ವಾಮಿ



ಡಿಸಿಎಂ ಜೊತೆ ಜಿಲ್ಲಾಧಿಕಾರಿಗಳು

# ಹಾಸನ : ಪ್ರಿಯಕರನಿಗೆ ಸುಪಾರಿ ಕೊಟ್ಟು ತಾಳಿಕಟ್ಟಿದ ಗಂಡನಿಗೆ ಚಟ್ಟ ಕಟ್ಟಿದ ಹೆಂಡತಿ!


ಕೊಲೆಯಾದ ಲೋಕೇಶ್

**ಮಹಿಳೆಯೋರ್ವಳಿಗೆ ಮದುವೆಯಾಗಿ ಇಬ್ಬರು ಮಕ್ಕಳು ಇದ್ದರೂ ಸಹ ಎದುರು ಮನೆ ವ್ಯಕ್ತಿ ಜೊತೆ ಲವ್ವಿಡವ್ವಿ ಇಟ್ಟುಕೊಂಡಿದ್ದಳು. ಆದ್ರೆ, ಇದನ್ನು ಮಾಡಬೇಡ ಬದಲಾಗು. ಮಕ್ಕಳಿಗಾದರೂ ಬದಲಾಗು ಎಂದು ಗಂಡ ಹಲವು ಬಾರಿ ಬುದ್ಧಿವಾದ ಹೇಳಿದ್ದ. ಆದರೂ ಬದಲಾಗದ ಮಹಿಳೆ, ಪ್ರಿಯಕರನಿಗೆ ಸುಪಾರಿ ಕೊಟ್ಟು ತಾಳಿ ಕಟ್ಟಿದ ಗಂಡನಿಗೆ ಚಟ್ಟಕಟ್ಟಿದ್ದಾಳೆ. ಹೆಂಡ್ತಿ ನಡೆತೆಗೆ ಬೇಸತ್ತು ಮನೆ ತೊರೆದಿದ್ದ ಲೋಕೇಶ್, ಮಕ್ಕಳನ್ನು ನೋಡಲು ಬಂದು ಬರ್ಬರವಾಗಿ ಹತ್ಯೆಯಾಗಿದ್ದಾನೆ.**

ತನ್ನ ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ಪತಿಯನ್ನು, ಪತ್ನಿಯೇ ಪ್ರಿಯಕರನಿಗೆ ಸುಪಾರಿಕೊಟ್ಟು ಬರ್ಬರವಾಗಿ ಕೊಲೆ ಮಾಡಿಸಿರುವ ಘಟನೆ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲೂಕಿನ ಕುಂಬಾರಹಳ್ಳಿ ಬಳಿ ನಡೆದಿದೆ. ಗ್ರಾಮದ ನಂಜುಂಡೇಗೌಡ ಅಲಿಯಾಸ್ ಲೋಕೇಶ್(44) ಕೊಲೆಯಾದ ವ್ಯಕ್ತಿ. ಪತ್ನಿ ಸವಿತಾ ಎದುರು ಮನೆ ವ್ಯಕ್ತಿ ಅರಣ್ ಎನ್ನುವಾತ ಜೊತೆ ಅನೈತಿಕ ಸಂಬಂಧ ಹೊಂದಿದ್ದಳು. ಇದನ್ನು ಮಾಡಬೇಡ ಇಲ್ಲಿಗೆ ಬಿಟ್ಟು ಬಿಡು ಎಂದು ಪತಿ ಹಲವು ಬಾರಿ ಬುದ್ಧಿವಾದ ಹೇಳಿದ್ದ, ಆದರೆ, ಸವಿತಾ ಮಾತ್ರ ತನ್ನ ಚಾಳಿ ಮುಂದುವರಿಸಿದ್ದು, ಕೊನೆಗೆ ತಮ್ಮ ಸಂಬಂಧಕ್ಕೆ ಅಡ್ಡಿಯಾಗಿದ್ದಾನೆಂದು ಪ್ರಿಯಕರನಿಗೆ ಸುಪಾರಿ ಕೊಟ್ಟು ಕೊಲ್ಲಿಸಿದ್ದಾಳೆ. ಹೆಂಡ್ತಿಯ ನಡೆತೆಯಿಂದ ಬೇಸತ್ತ ಲೋಕೇಶ್, ಊರು ತೊರೆದು ಹೋಗಿದ್ದ, ಆದ್ರೆ, ಮಕ್ಕಳನ್ನು ನೋಡಲು ಬಂದು ಹೆಂಡ್ತಿ ಕೊಟ್ಟಿದ್ದ ಸುಪಾರಿಗೆ ಬಲಿಯಾಗಿದ್ದಾನೆ. ತನ್ನ ಇಬ್ಬರು ಹೆಣ್ಣು ಮಕ್ಕಳೇ ಸರ್ವಸ್ವ ಎಂದು ಬದುಕಿದ್ದ ಲೋಕೇಶನ ಕೊಲೆಗೆ ಇಡೀ ಊರೇ ಮಮ್ಮಲ ಮರುಗುತ್ತಿದೆ.

**ಎಷ್ಟು ಬುದ್ಧಿ ಹೇಳಿದರೂ ಬದಲಾಗಲಿಲ್ಲ ಸವಿತಾ**

ಲೋಕೇಶ್ ರೈತನಾದರೂ ಸ್ವಾಭಿಮಾನದ ವ್ಯಕ್ತಿಯಾಗಿದ್ದ. 14 ವರ್ಷಗಳ ಹಿಂದೆ ಸವಿತಾ ಎಂಬಾಕೆಯನ್ನು ಮದುವೆಯಾಗಿದ್ದ. ಸದ್ಯ ಇಬ್ಬರು ಮುದ್ದಾದ ಹೆಣ್ಣು ಮಕ್ಕಳಿದ್ದಾರೆ. ತನ್ನ ಎರಡು ಎಕರೆ ಜಮೀನಿನಲ್ಲಿ ಬೇಕಾದ ಬೆಳೆ ಬೆಳೆಯುತ್ತಿದ್ದ. ಜೊತೆಗೆ ಮಹೀಂದ್ರ ಜಿತೋ ಆಟೋ ಇಟ್ಟುಕೊಂಡು ತನ್ನ ಹಾಗೂ ಅಕ್ಕಪಕ್ಕದ ಗ್ರಾಮಗಳಿಂದ ಹಾಲನ್ನು ಸಂಗ್ರಹಿಸಿ ಬ್ಯಾಡರಹಳ್ಳಿ ಡೇರಿಗೆ ಹಾಕುತ್ತಿದ್ದ. ಇದರಿಂದ ಬಂದ ಕಮಿಷನ್ ಹಣದಿಂದ ಸಂಸಾರ ಸಾಗಿಸುತ್ತಿದ್ದ, ಕುಟುಂಬ ಸಾಗಿಸಲು ಏನನ್ನು ಕಡಿಮೆ ಮಾಡಿರಲಿಲ್ಲ, ಆದ್ರೆ ಎಲ್ಲವನ್ನು ಕೊಡುತ್ತಿದ್ದ ಗಂಡನಿಗೆ ದೋಖಾ ಮಾಡಿದ್ದ ಪತ್ನಿ ಸವಿತಾ ಚಿಕ್ಕ-ಚೊಕ್ಕ ಸಂಸಾರ ಇದ್ದರೂ, ತನ್ನ ಎದುರುಮನೆಯ ಅರುಣ್ ಎಂಬಾತನೊಂದಿಗೆ ಕಳೆದ ಮೂರು ವರ್ಷಗಳಿಂದ ಅಕ್ರಮ ಸಂಬಂಧ ಬೆಳೆಸಿದ್ದಾಳೆ. ಅರುಣ್‌ಗೂ ಕೂಡ ಮದುವೆಯಾಗಿ ಇಬ್ಬರು ಮಕ್ಕಳಿದ್ದು, ಈತನ ದುರ್ನಡತೆಯಿಂದ ಮನನೊಂದು ಪತ್ನಿ ತವರು ಮನೆ ಸೇರಿದ್ದಳು. ಬಳಿಕ ಆತ ಸವಿತಾಳೊಂದಿಗೆ ಸಖ್ಯ ಬೆಳೆಸಿದ್ದ.

ಸವಿತಾ ಹಾಗೂ ಅರುಣ್ ಗುಟ್ಟು ರಟ್ಟಾಗಿ ನೆರೆಹೊರೆಯವರು ಮಾತ್ರವಲ್ಲದೆ ಗ್ರಾಮಕ್ಕೆ ಗೊತ್ತಾಗಿದೆ. ಅನೇಕ ಸಲ ರಾಜಿ ಪಂಚಾಯ್ತಿ ನಡೆದರೂ, ಸವಿತಾ ಬದಲಾಗಲಿಲ್ಲ, ತನ್ನ ಮನೆಯಲ್ಲಿ ಏನೇ ನಡೆದರೂ ಎಲ್ಲವನ್ನೂ ಪ್ರಿಯಕರನ ಕಿವಿಗೆ ಊದುತ್ತಿದ್ದಳು. ತನಗೆ ಯಾರೂ ಅಡ್ಡಿ ಬರಬಾರದು ಎಂದು ಪತಿಯನ್ನು ಅವರ ಸಂಬಂಧಿಕರಿಂದ ದೂರ ಮಾಡಿಸಿದ್ದಳು. ಆದರೂ ದೊಡ್ಡವರಾಗಿರುವ ಮಕ್ಕಳಿಗಾಗಿಯಾದರೂ ಪತ್ನಿ ಇಂದು ಸರಿ ಹೋಗುತ್ತಾಳೆ, ನಾಳೆ ಸರಿಹೋಗುತ್ತಾಳೆ ಎಂದು ಲೋಕೇಶ್ ಸಹಿಸಿಕೊಂಡಿದ್ದ ತಾನು ಮಾಡುತ್ತಿರುವುದು ತಪ್ಪು ಎಂದು ತಿಳಿದು ಬದಲಾಗಬೇಕಿದ್ದ ಸವಿತಾ, ಗಂಡನನ್ನೇ ಮುಗಿಸುವಂತೆ ಪ್ರಿಯಕರಿಗೆ ಸುಪಾರಿ ಕೊಟ್ಟಿದ್ದಾಳೆ.

**ಹೆಂಡ್ತಿ ನಡತೆಗೆ ಬೇಸತ್ತು ಮನೆ ತೊರೆದಿದ್ದ ಲೋಕೇಶ್**

ಆರು ತಿಂಗಳ ಹಿಂದೆ ಪತ್ನಿಯ ಆಟಕ್ಕೆ ಬೇಸತ್ತ ಲೋಕೇಶ್ ಮನೆ ಬಿಟ್ಟು ಹೋಗಿದ್ದ, ಆತಂಕಗೊಂಡ ಕುಟುಂಬ ಸದಸ್ಯರು ಎಲ್ಲೆಡೆ ಹುಡುಕಾಡಿ ಮಿಸ್ಸಿಂಗ್ ಕೇಸ್ ಕೊಟ್ಟಿದ್ದರು. ಆಗ ಬೆಂಗಳೂರಿನ ಬೇಕರಿಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದ ಲೋಕೇಶ್‌ನನ್ನ ಮರಳಿ ಕರೆಸಿ ವಿಚಾರಣೆ ನಡೆಸಿದಾಗ ಪತ್ನಿಯ ಅಕ್ರಮ ಸಂಬಂಧ ಗುಟ್ಟು ಬಯಲಿಗೆ ಬಂದಿದೆ. ಆಗ ರಾಜಿ ಸಂಧಾನ ನಡೆಸಿ ಮಕ್ಕಳಿಗಾಗಿಯಾದ್ರು ಬದಲಾಗು ಎಂದು ಪತ್ನಿಗೆ ಬುದ್ಧಿ ಹೇಳಿದ್ದ ಲೋಕೇಶ್ ಮತ್ತೆ ಹೊಸದಾಗಿ ಜೀವನ ಶುರು ಮಾಡಿದ್ದ. ಆದ್ರೆ ಏನೇ ಹೇಳಿದ್ರು ಬದಲಾಗದ ಪಾಪಿ ಪತ್ನಿ ಈ ಕೃತ್ಯ ಮಾಡಿದ್ದಾಳೆ.

**ಎರಡು ಬಾರಿ ಯತ್ನ, ಮೂರನೇ ಬಾರಿಗೆ ಬರ್ಬರ ಹತ್ಯೆ**

ಲೊಕೇಶ್ ಹತ್ಯೆಗಾಗಿ ಅರುಣ್ ಅಂಡ್ ಗ್ಯಾಂಗ್ ಎರಡು ಬಾರಿ ಕೊಲೆಗೆ ಪ್ರಯತ್ನ ಮಾಡಿ ವಿಫಲ ಆಗಿತ್ತು. ಅದೃಷ್ಟವಶಾತ್ ಲೋಕೇಶ ಬಚಾವಾಗಿದ್ದ. ಆದರೆ ಮೂರನೇ ಸಲ ಮಿಸ್ ಆಗಬಾರದು ಎಂದು ಲೋಕೇಶ ಹಾಲು ಸಾಗಿಸುತ್ತಿದ್ದ ಮರುವನಹಳ್ಳಿ-ಬ್ಯಾಡರಹಳ್ಳಿ ಮಾರ್ಗ ಮಧ್ಯೆ ಮುಗಿಸಲು ಪ್ಲಾನ್ ಮಾಡಿದ್ದರು. ಇದಕ್ಕಾಗಿ ಒಂದಲ್ಲ, ಮೂರು ಕಡೆ ಸ್ಥಳ ಗುರುತು ಮಾಡಿದ್ದರು. ಬ್ಯಾಡರಹಳ್ಳಿಗೆ ಹೋಗುವ ರಸ್ತೆ ಮಧ್ಯೆ ಇರುವ ಬಾರೆ ಬಳಿಯ ಮೋಹನ ಎಂಬುವರ ಜಮೀನಿನ ಬಳಿ ಮರದಪಟ್ಟಿಗೆ ಉದ್ದವಾದ 25ಕ್ಕೂ ಹೆಚ್ಚು ಮೊಳೆ ಚುಚ್ಚಿ, ರಸ್ತೆ ಅಗೆದು ಹೂತು ಭತ್ತದ ಹುಲ್ಲು ಮುಚ್ಚಿದ್ದರು.

ಮತ್ತೊಂದು ಕಡೆ ಹಾರೆ ಇಟ್ಟಿದ್ದರು. ಆದ್ರೆ ಈ ಬಗ್ಗೆ ಸಣ್ಣ ಸುಳಿವು ಇಲ್ಲದ ಲೋಕೇಶ ಎಂದಿನಂತೆ ಹಾಲು ಸಂಗ್ರಹ ಮಾಡಿಕೊಂಡು ಗುರುವಾರ ರಾತ್ರಿ 8.25 ರ ಸುಮಾರಿಗೆ ಆಟೋದಲ್ಲಿ ಡೇರಿಗೆ ಹೋಗುತ್ತಿದ್ದ, ಹಂತಕರು ಅಂದುಕೊಂಡಂತೆ ಆಟೋ ಚಕ್ರಕ್ಕೆ ಮೊಳೆ ಚುಚ್ಚಿ ಪಂಕ್ಚರ್ ಆಯಿತು. ಕೂಡಲೇ ತಮ್ಮೂರಿನ ತಮ್ಮಯ್ಯ ಎಂಬುವರಿಗೆ ಕರೆ ಮಾಡಿ, ಯಾರೋ ರಿಪೀಸ್ ಪಟ್ಟಿಗೆ ಮೊಳೆ ಹೊಡೆದು ಅದರ ಮೇಲೆ ಹುಲ್ಲು ಹಾಕಿ ಮುಚ್ಚಿದ್ದರು. ಇದು ತಿಳಿಯದೇ ಚಕ್ರ ಹತ್ತಿ ಪಂಕ್ಚರ್ ಆಗಿದೆ. ಯಾರನ್ನಾದರೂ ಕರೆದುಕೊಂಡು ಬೇಗ ಬಾ ಎಂದು ಹೇಳಿ ಹಾಗೆಯೇ ಆಟೋದ ಮುಂದಿನ ಸೀಟಲ್ಲಿ ಕುಳಿತು ಫೋನಲ್ಲಿ ಲೋಕೇಶ್ ಮಾತನಾಡುತ್ತಿದ್ದ. ಇದಕ್ಕಾಗಿಯೇ ಕಾದಿದ್ದ ಹಂತಕರ ತಂಡ, ಏಕಾಏಕಿ ಅಟ್ಯಾಕ್ ಮಾಡಿ ಲೋಕೇಶನ ಕಣ್ಣಿಗೆ ಖಾರದಪುಡಿ ಎರಚಿ ಮೊದಲೇ ಹೊಂದಿಸಿಕೊಂಡು ತಂದಿದ್ದ ಮಚ್ಚು, ಲಾಂಗುಗಳಿಂದ ಸಾಯುವವರೆಗೂ ಮನಬಂದಂತೆ ಕೊಚ್ಚಿ, ಲಾಂಗನ್ನು ಅಲ್ಲೇ ಬಿಟ್ಟು ಎಸ್ಕೇಪ್ ಆಗಿದ್ದಾರೆ.


ಆರೋಪಿ ಸವಿತಾ

ಇತ್ತ ಲೋಕೇಶ್ ಕರೆ ಮಾಡಿದ್ದ ಮಾಹಿತಿಯನ್ನು ತಮ್ಮಯ್ಯನಿಂದ ತಿಳಿದ ನಂಜುಂಡೇಗೌಡನ ಭಾವ ಸುರೇಶ್, ಶ್ರೀನಿವಾಸ, ಬಾಗೂರು ಮಂಜು ಮೊದಲಾದವರು ಆತಂಕದಿಂದಲೇ ಬೈಕ್‌ಗಳಲ್ಲಿ ಮರುವನಹಳ್ಳಿ-ಬ್ಯಾಡರಹಳ್ಳಿ ನಡುವಿನ ಮೋಹನ ಎಂಬುವರ ಜಮೀನಿನ ಬಳಿಗೆ ದೌಡಾಯಿಸಿದ್ದಾರೆ. ಲೋಕೇಶ ಚಲಾಯಿಸುತ್ತಿದ್ದ ಹಾಲಿನ ವಾಹನ ಅಲ್ಲೇ ನಿಂತಿತ್ತು. ಹತ್ತಿರ ಹೋಗಿ ನೋಡಿದಾಗ ಲೋಕೇಶ ರಕ್ತಸಿಕ್ತವಾಗಿ ಬಿದ್ದಿದ್ದ, ಕೈಗೆ, ತಲೆಯ ಹಿಂಭಾಗಕ್ಕೆ ಮತ್ತು ಕುತ್ತಿಗೆ ಹಿಂಭಾಗವನ್ನು ಹರಿತವಾದ ಆಯುಧದಿಂದ ಕತ್ತರಿಸಿ ದುರುಳರು ಜೀವ ತೆಗೆದಿದ್ದರು. ಇದಕ್ಕೆ ಅರುಣ ಮತ್ತವನ ತಂಡ ಕಾರಣ ಎಂದು ಸುರೇಶ್ ಹಾಗೂ ಇತರರು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದು, ಈ ದೂರಿನ ಮೇರೆಗೆ ಪೊಲೀಸರು, ಸವಿತಾ ಹಾಗೂ ಆಕೆಯ ಪ್ರಿಯಕರ ಅರುಣ್‌ನನ್ನು ಪೊಲೀಸರು ಬಂಧಿಸಿದ್ದಾರೆ. ☯

---

4 ☞ ವಾಗಿ ನೂರಾರು ನಿರುದ್ಯೋಗಿಗಳಿಗೆ ಕೆಲಸವೂ ಸಿಗಲಿದೆ ಎಂಬುದು ಹಲವರ ಅಭಿಪ್ರಾಯವಾಗಿದೆ. ಈ ನಿಟ್ಟಿನಲ್ಲಿ ಉಪ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್‌ರವರು ಮತ್ತು ಕ್ಷೇತ್ರದ ಶಾಸಕರಾದ ಸಿ.ಪಿ. ಯೋಗೇಶ್ವರ್‌ರವರು ಕಣ್ವ ಜಲಾಶಯವನ್ನು ಪ್ರವಾಸಿಗರ ತಾಣ ಮಾಡಲು ಚಿಂತನೆ ಮಾಡಿರುವುದು ಸಾರ್ವಜನಿಕರಿಗೆ ಸಂತಸ ತಂದಿದೆ. ಮತ್ತು ಕಣ್ವ ಜಲಾಶಯವನ್ನು ಪ್ರವಾಸಿಗರ ತಾಣವಾಗಿಸಿ ಇಲ್ಲಿ ಬೋಟಿಂಗ್ ಸೌಲಭ್ಯ ಕಲ್ಪಿಸಿದರೆ ನಿತ್ಯ ಪ್ರವಾಸಿಗರು ಬರುತ್ತಾರೆ. ಇದರಿಂದ ಜಲಾಶಯಕ್ಕೆ ಸದಾ ನೀರು ಬರುವಂತೆ ಅಧಿಕಾರಿಗಳು ಹೆಚ್ಚಿನ ಗಮನ ನೀಡುತ್ತಾರೆ. ಇದಕ್ಕೆ ಪೂರಕವಾಗಿ ನೀರಾವರಿ ಯೋಜನೆಗಳು

## ಸುಂದರ ಪ್ರಕೃತಿಯ ಸೊಬಗಿನಲ್ಲಿ ಕಣ್ವ ಜಲಾಶಯ ಅಭಿವೃದ್ಧಿ ಪಡಿಸಿದರೆ ಪ್ರವಾಸಿಗರ ತಾಣ!

ಸಹ ಕಾರ್ಯರೂಪಕ್ಕೆ ಬರಲಿವೆ. ಈ ನಿಟ್ಟಿನಲ್ಲಿ ಸತ್ತೇಗಾಲ ಯೋಜನೆಗೆ ಶೀಘ್ರ ಮುಕ್ತಿ ಸಿಗುವ ಸೂಚನೆಗಳಿವೆ.

ಕನಕಪುರದ ಬಂಡೆ ಡಿ.ಕೆ. ಶಿವಕುಮಾರ್ ಹಾಗೂ ಸಿ.ಪಿ. ಯೋಗೇಶ್ವರ್‌ರವರು ರಾಜಕೀಯವಾಗಿ ಬದ್ಧ ವೈರಿಗಳಾಗಿದ್ದಾರೆ. ಆದರೆ ಇಬ್ಬರು ಒಂದೇ ಪಕ್ಷದಲ್ಲಿದ್ದು ಈ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿ ಶ್ರಮಿಸಿದ್ದಾರೆ. ಜೊತೆಗೆ ಬದ್ಧ ವೈರಿಗಳಾಗಿ ಸಹ ರಾಜಕಾರಣ ಮಾಡಿದರು. ಇಂದು ಮತ್ತೆ ಒಂದಾಗಿ ಚನ್ನಪಟ್ಟಣ ಕ್ಷೇತ್ರದ ಅಭಿವೃದ್ಧಿಗೆ ಕೈ ಜೋಡಿಸುವ ಮೂಲಕ ತಮ್ಮ ವಿರುದ್ಧ ದ್ವೇಷ ಕಾರಿದ್ದ ಜೆಡಿಎಸ್ ಪಕ್ಷವನ್ನು ರಾಮನಗರ ಜಿಲ್ಲೆಯಲ್ಲಿ ಕ್ಲೀನ್ ಸ್ವಿಪ್ ಮಾಡಿದ್ದಾರೆ. ಈ ಭಾಗದ ಕಣ್ವ ಜಲಾಶಯವನ್ನು ಅಭಿವೃದ್ಧಿಪಡಿಸಿ ಪ್ರವಾಸಿಗರ ತಾಣವಾದರೆ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಪ್ರಯಾಣಿಸುವ ಹಲವಾರು ಪ್ರಯಾಣಿಕರು ಮತ್ತು ಪ್ರವಾಸಿಗರು ತಮ್ಮ ಕುಟುಂಬ ಸಮೇತ ಆಗಮಿಸುವುದರಲ್ಲಿ ಸಂಶಯವೇ ಇರುವುದಿಲ್ಲ, ರಾಜಧಾನಿಗೆ ಹತ್ತಿರವಾಗಿರುವ ರಾಮನಗರ ಜಿಲ್ಲೆಯಲ್ಲಿ ಪ್ರಸಿದ್ಧ ಪಡೆದಿರುವ ಶ್ರೀರಾಮ ದೇವರ ಬೆಟ್ಟದ ಜೊತೆಗೆ ಕಣ್ವ ಜಲಾಶಯವೂ ಒಂದು ಪ್ರಸಿದ್ಧಿ ತಾಣವಾಗುವುದು ಕೆಲವೇ ದಿನಗಳು ಎನ್ನಬಹುದು. ಏಕೆಂದರೆ ಡಿಸಿ ಎಂ. ಡಿ.ಕೆ. ಶಿವಕುಮಾರ್‌ರವರು ಜಲಸಂಪನ್ಮೂಲ ಸಚಿವರಾಗಿರುವುದರಿಂದ ಆದಷ್ಟು ಬೇಗ ಈ ಕಾರ್ಯ ಈಡೇರುತ್ತದೆ ಮತ್ತು ಶಾಸಕ ಸಿ.ಪಿ. ಯೋಗೇಶ್ವರ್‌ರವರ ಜೊತೆ ಮಾಜಿ ಸಂಸದರಾದ ಡಿ.ಕೆ. ಸುರೇಶ್‌ರವರು ಶ್ರಮಿಸುತ್ತಿರುವುದರಿಂದ ಈ ಚನ್ನಪಟ್ಟಣ ಕ್ಷೇತ್ರ ಅಭಿವೃದ್ಧಿ ಹೊಂದುವುದರಲ್ಲಿ ಸಂಶಯವೇ ಇಲ್ಲ ಎನ್ನುತ್ತಾರೆ ಹಲವು ಹೋರಾಟಗಾರರು, ಸಂಘ ಸಂಸ್ಥೆಗಳ ಮುಖಂಡರು. ☯

ಕ್ರೈಂ ಪ್ರಪಂಚ

# ಕಿಡ್ನಾಪ್ ಪ್ರಕರಣ

ಬಡ ಕುಟುಂಬದ ಅಥವಾ ಕೂಲ ಕಾರ್ಮಿಕರ ಮನೆಯ ಹೆಣ್ಣುಮಕ್ಕಳು ಕಣ್ಮರೆಯಾದರೆ ದೊಡ್ಡಸುದ್ದಿ ಆಗೋಲ್ಲ. ಆದರೆ ಕಣ್ಮರೆ ಆಗಿರೋದು ಆ ಊರಿನ ಗೌರವಾನ್ವಿತ ಶ್ರೀಮಂತ ಕುಟುಂಬದ ರಾಜಾ ಬಹದ್ದೂರ್ ಅವರ ಮಗಳು! ಮಗಳು ನೀಲಿಮಾ ಬಹದ್ದೂರ್. ಇಬ್ಬರು ಮಕ್ಕಳು.

ಮಗಳು ನೀಲಿಮಾ ಹಿರಿಯವಳು. ಅವಳಿಗಿತ ಒಂದು ವರ್ಷಕ್ಕೆ ಚಿಕ್ಕವನು ಮಹೇಂದ್ರ ಬಹದ್ದೂರ್!

ಮಗಳು ಕಣ್ಮರೆ ಆಗಿರುವ ಸಂಗತಿಯನ್ನು ಈ ಕುಟುಂಬದ ಗೌರವ, ಮರ್ಯಾದೆಯ ದೃಷ್ಟಿಯಿಂದ ಗೌಪ್ಯವಾಗಿ ಇಡಲು ಪ್ರಯತ್ನ ಮಾಡಿದ್ದಾರೆ. ಅದು ಹೇಗೋ, ಯಾರಿಂದಲೋ ಬಹಿರಂಗ ಆಗಿದೆ. ಇದು ಊರಲ್ಲಿ ಮಾತ್ರವಲ್ಲ, ಸುತ್ತಮುತ್ತಲಿನ ಹತ್ತಾರು ಹಳ್ಳಿಗಳಲ್ಲಿ ತುಂಬಾ ಪ್ರಖ್ಯಾತವಾಗಿರೋದ್ರಿಂದ ಅಬ್ಬರದ ಪ್ರಚಾರ ಪಡೆದಿದೆ.

ಯಾರೋ ಕಿಡ್ನಾಪ್ ಮಾಡಿದ್ದಾರಂತೆ.

ಹಣಕ್ಕಾಗಿ ಡಿಮ್ಯಾಂಡ್ ಮಾಡುತ್ತಿದ್ದಾರೆ.

ಇನ್ನು ಕೆಲವರು ಹೇಳಿದ್ದೇನು? ಏ... ಅವಳು ಬೇರೆ ಯಾರನ್ನೋ ಪ್ರೀತಿ ಮಾಡಿದ್ದಾಳೆ. ಮನೆಯವರು ಒಪ್ಪುವುದಿಲ್ಲ ಅಂತ, ಯಾವನ ಜೊತೆಗೆ ಓಡಿ ಹೋಗಿದ್ದಾಳೆ.

ರಾಜಾ ಬಹದ್ದೂರ್ ಕೋಪ, ಅಸಹನೆಯಿಂದ ಆಕ್ರೋಶಗೊಳ್ಳುತ್ತಿದ್ದಾರೆ. ಮಹೇಂದ್ರ ಬಹದ್ದೂರ್ ಈಗ ಅಕ್ಕನ ರೂಮಿನ ಅಂಗುಲ, ಅಂಗುಲವನ್ನು ಶೋಧಿಸಿ ನೋಡಿದನು. ಅವಳ ಲವ್‌ಗೆ ಸಂಬಂಧಪಡುವ ಸಣ್ಣಸುಳಿವು ಸಹ ಇರಲಿಲ್ಲ. ಅವನು ಎರಡು ಗಂಟೆಗಳ ನಂತರ ಪುನಹ ಆ ರೂಮಿಗೆ ಬಂದನು.

ಅರ್ಧ ಗಂಟೆ ತಡಕಾಡಿದನು. ಟೇಬಲ್ ಲಾಕರ್ ಓಪನ್ ಮಾಡಿದಾಗ ವಾಚು, ಈಯರ್ ಫೋನ್, ಮಾಸ್ಕ್‌ಗಳ ಜೊತೆಯಲ್ಲಿ ಮೊಬೈಲ್ ಹ್ಯಾಂಡ್ ಸೆಟ್ ಇತ್ತು.

ಚಾರ್ಜ್ ಮಾಡಿ ತುಂಬಾ ಗಂಟೆಗಳಾಗಿರೋದ್ರಿಂದ ಆಫ್ ಆಗಿದೆ. ಮೊಬೈಲ್ ಚಾರ್ಜ್‌ಗೆ ಹಾಕಿದ್ದಾನೆ.

ಸಾಮಾನ್ಯ ಲವ್ ಮತ್ತು ಲವರ್ ಬಗ್ಗೆ ಮೊಬೈಲ್‌ನಲ್ಲಿ ಏನಾದರೂ ಸುಳಿವು ಇರುತ್ತದೆ ಎಂದು ಅವನು ನಿರೀಕ್ಷಿಸುತ್ತಿದ್ದಾನೆ.

●●●

'ಇನೋವಾ' ಕಾರು ಪೊಲೀಸ್ ಸ್ಟೇಷನ್ ಮುಂದೆ ಬಂದು ನಿಂತುಕೊಂಡಿತು. ಅದರಿಂದ ಮೊದಲು ಫಾಲೋಯರ್ಸ್ ಇಳಿದರು.

ವಿಷಯ ತಿಳಿದಕೂಡಲೇ ಪೊಲೀಸ್ ಅಧಿಕಾರಿ ಉಪೇಂದ್ರ ಹೊರಗೆ ಬಂದು ರಾಜಾ ಬಹದ್ದೂರ್ ಅವರಿಗೆ ನಮಸ್ಕಾರ ಮಾಡಿ ಗೌರವರಿಂದ ಒಳಗೆ ಕರೆದುಕೊಂಡು ಬಂದನು.

ಉಳಿದವರನ್ನು ಹೊರಗೆ ಇರಲು ಹೇಳಿ ಚೇಂಬರ್‌ನಲ್ಲಿ ಇವನೊಬ್ಬನೇ ಇನ್ಸ್‌ಪೆಕ್ಟರ್ ಎದುರಿಗೆ ಕುಳಿತಿದ್ದಾರೆ.

ವಿಚಿತ್ರ ಏನು ಗೊತ್ತೆ?

ಪೊಲೀಸ್ ಅಧಿಕಾರಿ ನಿಂತಿದ್ದಾನೆ.

ಅಂದರೆ ಇವರನ್ನು ಕಂಡರೆ ಅದೆಂತಹ ಭಯ, ಗೌರವ ಇದೆ ಎಂಬುದು ಇದರಿಂದ ಗೊತ್ತಾಗುತ್ತದೆ.

''ಇನ್ಸ್‌ಪೆಕ್ಟರ್ ವಿಷಯ ಗೊತ್ತಾಗಿದೆ ತಾನೆ?

''ಗೊತ್ತಾಗಿದೆ ಸಾರ್.''

''ಏನಾದ್ರು ಪ್ರಯತ್ನ ಮಾಡಿದ್ರಾ?''

ಅವನು ವಿನಯದಿಂದ ''ಸಾರ್... ನಿಮ್ಮಿಂದ ಕಂಪ್ಲೆಂಟ್ ಬರೆಸಿಕೊಳ್ಳದೇ ನಿಮ್ಮ ಅನುಮತಿ ಪಡೆಯದೆ ಕೆಲಸ ಮಾಡಬಾರದು ಅಂತ ನಾನು ಕಾರ್ಯ ಪ್ರಾರಂಭ ಮಾಡಿಲ್ಲ'' ಎಂದನು.

''ಹಾಗಾದರೆ ಇವತ್ತಿನಿಂದಲೇ ಪ್ರಾರಂಭ ಮಾಡಿ.''

ಪೊಲೀಸ್ ಅಧಿಕಾರಿ ತಾನೇ ಕಂಪ್ಲೆಂಟ್ ಬರೆದು ಅವರಿಗೆ ಓದಿ ಹೇಳಿದ ನಂತರ ''ಸಾರ್... ಎಲ್ಲಾ ಸರಿಯಾಗಿದೆ ಅಲ್ವ?''

''ಪರವಾಗಿಲ್ಲ ಸರಿಯಾಗಿದೆ.''

''ಸೈನ್ ಮಾಡಿ ಸಾಹೇಬರೆ.''

ಸಾಮಾನ್ಯರು ಕಂಪ್ಲೆಂಟ್ ಕೊಡಲು ಬಂದರೆ ದರ್ಪ, ಅಧಿಕಾರ ಚಲಾಯಿಸುವ ಪೊಲೀಸ್ ಅಧಿಕಾರಿ ತಾನೇ ಕಂಪ್ಲೆಂಟ್ ಬರೆದು ಸೈನ್ ಮಾಡಿಸಿಕೊಳ್ಳಲು ಮುಂದೆ ಹಿಡಿದಿದ್ದಾನೆ.

''ಸಾರ್... ನಿಮ್ಮ ಮಗಳ ಫೋಟೋ ಬೇಕು.''

''ಪಿ.ಸಿ.ನ ಕಳಿಸಿ ತರಿಸಿಕೊಳ್ಳಿ.''

''ಆಗಲಿ ಸಾರ್.''

''ರಾಜಾ ಬಹದ್ದೂರ್ ದರ್ಪದಿಂದ ''ರೀ ಇನ್ಸ್‌ಪೆಕ್ಟರ್, ಅಬ್ಬರದ ಪ್ರಚಾರ ಆಗದಂತೆ ತನಿಖೆ ಮಾಡಿ'' ಎಂದನು.

''ಸಾರ್... ಇನ್ನೊಂದು ಮಾಹಿತಿ ಬೇಕು.''

''ಏನದು ಕೇಳಿ.''

''ನೀಲಿಮಾ ಮೇಡಂ ಯಾರನ್ನಾದ್ರು ಲವ್ ಮಾಡಿದ್ಲಾ.''

ರಾಜಾ ಬಹದ್ದೂರ್ ಮುಖ ಕೋಪದಿಂದ ಕಡು ಕೆಂಪಾಯಿತು. ಅವರೀಗ ''ಏ... ಏನು... ಏನಂದೆ ನೀನು? ನನ್ನ ಮಗಳು ಲವ್ ಮಾಡೋದಾ? ಇದು ನಮ್ಮ ವಂಶದಲ್ಲೇ ಬಂದಿಲ್ಲ. ಅವಳಿಗೆ ತೆಲಂಗಾಣದ ಶ್ರೀಮಂತ ಉದ್ಯಮ ಮತ್ತು ರಾಜಕಾರಣಿಯ ಮಗನ ಜೊತೆ ಮದುವೆ ಮಾಡಲು ಸಂಪ್ರದಾಯದ ರೀತಿ ವ್ಯವಹಾರ ಮಾತುಕತೆ ನಡೆಯುತ್ತಿದೆ.''

''ಕ್ಷಮಿಸಿ ಸಾರ್... ಆ ವಿಚಾರ ಬಿಡಿ. ನಿನ್ನ ಮಗಳಿಗೆ ಯಾರಾದರೂ ಶತ್ರುಗಳಿದ್ರಾ?'

''ನನಗೆ ತಿಳಿದಂತೆ ಯಾರೂ ಇಲ್ಲ. ನಮ್ಮ ಕುಟುಂಬದ ಮೇಲೆ ಶತ್ರುತ್ವ ಸಾಧಿಸುವ ಧೈರ್ಯ ಯಾರಿಗೂ ಇಲ್ಲ.''

ಪೊಲೀಸ್ ಅಧಿಕಾರಿಗೆ ಅರ್ಥವಾಗಿದೆ.

ಈ ಮನುಷ್ಯನಿಗೆ ಅಹಂಕಾರ, ಅಧಿಕಾರದ ಮಹಾಪ್ರತಿಷ್ಠೆ ಜಾಸ್ತಿ. ಇವನಿಂದ ತನಿಖೆಗೆ ಯಾವ ವಿಚಾರವೂ ತಿಳಿಯೋಲ್ಲ ಎಂದುಕೊಂಡು ''ಸಾರ್... ಕೊನೆ ಪ್ರಶ್ನೆ ಕೇಳ್ತೀನಿ'' ಎಂದನು.

''ಬೇಗ ಕೇಳು.''

''ನಿಮ್ಮ ಮಗಳು ಕಾಲೇಜಿನಲ್ಲಿ ಓದುತ್ತಿದ್ದಾಳೆ. ಅವಳ ಆತ್ಮೀಯ ಗೆಳತಿಯರು ಯಾರು ಅಂತ ಗೊತ್ತಿದ್ದರೆ ಹೇಳ್ತೀರ?''

''ಭಾರತಿ ಅಂತ. ನಮ್ಮ ಬೀದಿಯಲ್ಲಿರುವ ಶ್ರೀನಿವಾಸಾಚಾರ್ ಮಗಳು ಆಗಾಗ ನಮ್ಮ ಮನೆಗೆ ಬಂದು ಭಾರತಿ ಜೊತೆ ಉಳಿಯುತ್ತಿದ್ದಳು.''

''ನಮಸ್ಕಾರ ಸಾರ್. ನೀವು ಹೊರಡಬಹುದು.'

''ನಾನು ಹೇಳಿದ್ದು ನೆನಪಿರಲಿ.''

''ಆಗಲಿ ಸಾಹೇಬರೆ.''

ಅವರೆಲ್ಲಾ ಹೋದ ಮೇಲೆ ಪೊಲೀಸ್ ಅಧಿಕಾರಿ ಉಪೇಂದ್ರ ಜೀಪಲ್ಲಿ ಭಾರತಿಯ ಮನೆಯ ಕಡೆ ಹೊರಟನು.

●●●

ಹಳೆಯ ಕಾಲದ ಅರಮನೆ ಬಂಗಲೆಗೆ ಈ ಕಾಲದ ಆಧುನಿಕ ರೂಪ ನೀಡಿ, ಎಲ್ಲಾ ಅನುಕೂಲಗಳೊಂದಿಗೆ ಮಾರ್ಪಾಡು ಮಾಡಿ ಕಟ್ಟಿಸಲಾಗಿದೆ.

ನೀಲಿಮಾಳ ಬೆಡ್‌ರೂಮು!

ತುಂಬಾ ಹೊತ್ತಿನಿಂದ ರೂಮನ್ನು ಶೋಧನೆ ಮಾಡುತ್ತಿದ್ದ ಅವಳಿಗೆ, ಟೇಬಲ್ ಲಾಕರ್‌ನಲ್ಲಿದ್ದ ಮೊಬೈಲ್ ಸಿಕ್ಕಿತ್ತು. ಚಾರ್ಜ್ ಮಾಡಿರಲಿಲ್ಲ ಆದ್ದರಿಂದ ಸ್ವಿಚ್ ಆಫ್ ಆಗಿತ್ತು.

ಚಾರ್ಜ್‌ಗೆ ಹಾಕಿ ಒಂದು ಗಂಟೆಯ ನಂತರ ಮಹೇಂದ್ರ ಬಹದ್ದೂರ್ ರೂಮಿಗೆ ಬಂದು ಮೊಬೈಲ್ ಆನ್ ಮಾಡಿ ನೋಡಿದನು.

ಫೋಟೋ ಗ್ಯಾಲರಿ ನೋಡುತ್ತಿದ್ದಾನೆ.

ಅಲ್ಲಿ ಫೋಟೋ ಇರಲಿಲ್ಲ.

ನೀಲಿಮಾಳ ಲವ್ವರ್ ಫೋಟೋ ಇರಲಿಲ್ಲ.

ಅವನಿಗೆ ನಿರಾಸೆಯಾಯಿತು. ಆದರೂ ತಾಳ್ಮೆ ಕಳೆದುಕೊಳ್ಳದೆ ಕಾಲ್ ಡೀಟೈಲ್ಸ್ ಚೆಕ್ ಮಾಡಿದನು.

ಅವಳು ಮನೆಯಿಂದ ಹೋಗಿದ್ದು ಭಾನುವಾರ ಸಂಜೆ ಐದು ಗಂಟೆ ಸಮಯದಲ್ಲಿ. ಅದಕ್ಕೆ ಅರ್ಧ ಗಂಟೆ ಮೊದಲು ಆರ್.ಹೆಚ್. ಎಂಬ ಅಕ್ಷರಗಳಿರುವ '944'ನಿಂದ ಪ್ರಾರಂಭವಾಗುವ ನಂಬರ್‌ಗೆ ಫೋನ್ ಮಾಡಿದ್ದಾಳೆ.

ಬೇರೆ ಯಾವ ಕ್ಲೂ ಇರಲಿಲ್ಲ! ಹಾಗಾದರೆ ನೀಲಿಮಾ ಯಾರನ್ನೂ ಲವ್ ಮಾಡುತ್ತಿರಲಿಲ್ವ? ಈ ಆರ್.ಹೆಚ್. ಯಾರು? ಅವರಿಬ್ಬರಿಗೂ ಯಾವ ರೀತಿ ಲಿಂಕ್ ಇದೆ? ಈ ವಿಚಾರದ ಬಗ್ಗೆ ತಂದೆಗಾಗಲಿ ಅಥವಾ ಪೊಲೀಸರಿಗಾಗಲಿ ಹೇಳಲಿಲ್ಲ.

ಮಹೇಂದ್ರ ಬಹದ್ದೂರ್ ಈ ವಿಚಾರವಾಗಿ ತುಂಬಾ ವಿಭಿನ್ನ ರೀತಿಯಲ್ಲಿ ಆಲೋಚನೆ ಮಾಡುತ್ತಿದ್ದಾನೆ.

●●●

ಬೇರೊಂದು ಊರಲ್ಲಿರುವ ಒಂಟಿ ಮನೆಯೊಂದರಲ್ಲಿ ಅವಳಿದ್ದಾಳೆ.

ಅವನೇನು ಬಂಧನದಲ್ಲಿಲ್ಲ!

ಆರಾಮವಾಗಿ ತಿರುಗಾಡಿಕೊಂಡಿದ್ದಾಳೆ. ಟಿ.ವಿ. ಇದೆ. ನ್ಯೂಸ್ ಪೇಪರ್, ವಾರಪತ್ರಿಕೆಗಳು, ಆಡಿಯೋ ಪ್ಲೇಯರ್ ಇದೆ. ಅವಳಿಗೆ ತಿನ್ನಲು, ಕುಡಿಯಲು ಎಲ್ಲಾ ರೀತಿಯ ಐಟಂಗಳಿವೆ. ಅವಳು ಆದರೂ ಸಹ ಒಂದು ರೀತಿ ಭಯ, ಆತಂಕಗೊಂಡಿದ್ದಾಳೆ. ಒಂಟಿಯಾಗಿರೋದ್ರಿಂದ ತಲೆಕೆಡುತ್ತಿದೆ. ಎಷ್ಟುಕಾಲ ಈ ರೀತಿ ಇರಲು ಸಾಧ್ಯ?

ಅವಳು ಮೊಬೈಲ್‌ಗಾಗಿ ವ್ಯಾನಿಟಿ ಬ್ಯಾಗನ್ನು ನೋಡಿದಳು. ಹತ್ತು ಸಾವಿರ ಹಣ ಇದೆ. ಅಗತ್ಯವಾದ ವಸ್ತುಗಳಿವೆ.

ಆಗ ನೆನಪಾಯಿತು. ಅವಳು ಮೊಬೈಲ್ ಅನ್ನು ಬೆಡ್ ರೂಮಿನ ಟೇಬಲ್ ಲಾಕರ್ ಮೇಲೆ ಇಟ್ಟು ಮರೆತಿದ್ದಳು. ಸ್ನಾನ ಮಾಡಿ ಬಂದ ಮೇಲೆ ಡ್ರೆಸ್ ಮಾಡಿಕೊಂಡು ವ್ಯಾನಿಟಿ ಬ್ಯಾಗನ್ನು ಎತ್ತಿಕೊಂಡು ಹೊರಗೆ ಬಂದಿದ್ದಳು.

'ಶಾಪಿಂಗ್ ಮಾಡಲು ಹೋಗಿ ಬರ್ತೀನಿ' ಎಂದು ಮನೆಯವರಿಗೆ ಹೇಳಿದ್ದಳು.

ನಂತರ ಏನಾಯಿತು?

●●●

ಪೊಲೀಸರು ಅವಳ ಫೋಟೋ ಮತ್ತು ಅಗತ್ಯ ಮಾಹಿತಿಯನ್ನು ಕಂಟ್ರೋಲ್ ರೂಮಿಗೆ ಕಳಿಸಿದ್ದಾರೆ.

ಹುಡುಕಾಟ ಪ್ರಾರಂಭವಾಗಿದೆ.

ರಾಜ ಬಹದ್ದೂರ್ ಫೋನ್ ಮಾಡಿ ತನಿಖೆಯ ಬಗ್ಗೆ ವಿಚಾರಿಸಿಕೊಂಡರು.

ನೀಲಿಮಾಳ ಆತ್ಮೀಯ ಗೆಳತಿ ಪಲ್ಲವಿ. ಅವಳನ್ನು ಭೇಟಿ ಮಾಡಿ ವಿಚಾರಿಸಿದ್ದರು. ನೀಲಿಮಾಗೆ ಶತ್ರುಗಳು ಇರಲಿಲ್ಲ. ಸೌಂದರ್ಯ ಮತ್ತು ಶ್ರೀಮಂತಿಕೆ ಇದ್ದರೂ ಅಹಂಕಾರ ಇರಲಿಲ್ಲ. ಅವಳು ಎಲ್ಲರೊಂದಿಗೂ ಸ್ನೇಹಭಾವದಿಂದ ಇರುತ್ತಿದ್ದಳಂತೆ.''

''ಲವ್ ವಿಚಾರ ಏನಂತೆ?''

''ಅವಳಿಗೆ ತಿಳಿದಿರುವಂತೆ ನೀಲಿಮಾ ಯಾರನ್ನೂ ಲವ್ ಮಾಡುತ್ತಿರಲಿಲ್ಲವಂತೆ. ಆ ರೀತಿ ಲವ್ ಮಾಡಿದ್ದರೆ ಪಲ್ಲವಿಗೆ ಮೊದಲು ತಿಳಿಸಿ ಅಭಿಪ್ರಾಯ ತಿಳಿದುಕೊಳ್ಳುತ್ತಿದ್ದಳಂತೆ.'

''ಬೇರೆ ಯಾವ ಸುಳಿವೂ ಸಿಗಲಿಲ್ವ?''

''ಇಲ್ಲ... ಇಲ್ಲ ಸಾರ್.''

''ಸ್ವಲ್ಪ ಬೇರೆ ಬೇರೆ ಆ್ಯಂಗಲ್‌ನಲ್ಲಿ ಆಲೋಚನೆ ಮಾಡಿ ಪತ್ತೆದಾರಿ ಕೆಲಸ ಮಾಡಿ.''

''ಸಾರ್... ಮುಖ್ಯವಾದ ವಿಚಾರ ತಿಳಿಸಬೇಕು.''

''ಅದನ್ನು ಮೊದಲೇ ಹೇಳಬಾರದಿತ್ತಾ? ಸರಿ... ಅದೇನು ಅಂತ ಹೇಳಿ.''

''ಒಂದು ವೇಳೆ ಹಣದ ಉದ್ದೇಶದಿಂದ ಯಾರಾದರೂ ಕಿಡಾನಪ್ ಮಾಡಿದ್ದರೆ ಬೇಗ ಫೋನ್ ಮಾಡಲಿಲ್ಲ. ನಿಮ್ಮಲ್ಲಿ ಮಗಳ ಬಗ್ಗೆ ಭಯ, ಆತಂಕ ಜಾಸ್ತಿ ಮಾಡಲು ಸತಾಯಿಸುತ್ತಾರೆ. ನೀವು ಹೆದರಿದಷ್ಟು ಜಾಸ್ತಿ ಹಣ ಡಿಮ್ಯಾಂಡ್ ಮಾಡಲು ಅವರಿಗೆ ಅವಕಾಶ ಸಿಗುತ್ತದೆ.''

''ಇಲ್ಲಿಯತನಕ ಫೋನ್ ಬಂದಿಲ್ಲ.''

''ಸಾರ್... ಫೋನ್ ಕಾಲ್ ಬಂದರೆ ರೆಕಾರ್ಡ್ ಮಾಡಿಕೊಳ್ಳಿ. ಅವರು ಎಷ್ಟೇ ಡಿಮ್ಯಾಂಡ್ ಮಾಡಿದರೂ ಒಪ್ಪಿಕೊಳ್ಳಿ. ಫೋನ್ ನಂಬರ್ ಮತ್ತು ಸಂಭಾಷಣೆಯ ಧ್ವನಿಯ ಜಾಡನ್ನು ಹಿಡಿದು ಆ ಕಿಡ್ನಾಪರ್‌ನ ಪತ್ತೆ ಮಾಡಲು ಅವಕಾಶ ಸಿಗಬಹುದು.''

''ಆಗಲಿ... ರೆಕಾರ್ಡ್ ಮಾಡ್ತೀನಿ.''

●●●

ಮಹೇಂದ್ರ ಬಹದ್ದೂರ್ ಈಗ ಹತ್ತು ಮಂದಿ ಕೆಲಸಗಾರರನ್ನು ನೇಮಿಸಿದನು. ಆ ಊರು ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ತಿರುಗಾಡಬೇಕು. ಅನುಮಾನ ಬಂದ ಕಡೆ ಎಚ್ಚರಿಕೆಯಿಂದ ಗಮನಿಸಬೇಕು. ಗಲಾಟೆಗೆ ಅವಕಾಶ ಕೊಡಬಾರದು. ಮೊದಲು ನನಗೆ ಮೆಸೇಜ್ ಕೊಡಿ... ಏನು ಮಾಡಬೇಕು ಅಂತ ನಾನು ಹೇಳ್ತೀನಿ ಎಂದು ಆವೇಶ ನೀಡಿದನು.

ಅವನು ಸಹ ಗೆಳೆಯರ ಜೊತೆ ಕಾರಲ್ಲಿ ಅಕ್ಕನನ್ನು ಹುಡುಕಲು ಹೋಗುತ್ತಿದ್ದಾನೆ. ಕಾಲಿನ ವೇಗ ಕಡಿಮೆಯಾಗಿದೆ.

ಅವನಿಗೆ ಕುತೂಹಲದ ಜೊತೆಗೆ ಅನುಮಾನ ಇರೋದು. ಆರ್.ಹೆಚ್. ಮೇಲೆ 944ನಿಂದ ಪ್ರಾರಂಭ ಆಗಿದೆ. ಆದರೆ ಪೂರ್ತಿ ಫೋನ್ ನಂಬರ್ ಇರಲಿಲ್ಲ. ಟೆಕ್ನಿಕಲ್ ಆಗಿ ಪ್ಲೇ ಮಾಡಿ ಉಳಿದ ಏಳು ಅಂಕೆಗಳನ್ನು ಡಿಲೀಟ್ ಮಾಡಿದ್ದಳು.

ಯಾರು ಈ ಆರ್.ಹೆಚ್.?

ಅವನ್ಯಾಕೆ ಇವಳಿಗೆ ಫೋನ್ ಮಾಡಿದ್ದ?

ಇದು ತಲೆ ಕೊರೆಯುತ್ತಿದೆ.

ಏನು... ಏನು ಮಾಡಲಿ?

●●●

ಮಗಳು ಕಣ್ಮರೆಯಾಗಿ ಮುವತ್ತಾರು ಗಂಟೆಗಳಾಗಿದ್ದರೂ ಸಹ ಮಾಹಿತಿ ಇರಲಿಲ್ಲ. ತೆಲಂಗಾಣದ ಪ್ರಭಾವಶಾಲಿ ರಾಜಕಾರಣಿಯೊಬ್ಬರು ಈ ಕುಟುಂಬದವರೊಂದಿಗೆ ಸಂಬಂಧ ಬೆಳೆಸಲು ಅಪೇಕ್ಷಿಸಿ ಫೋನ್ ಸಂಪರ್ಕ ಬೆಳೆಸಿದ್ದಾರೆ. ಹಾಗಾಗಿ ಇವರು ತಲೆಕೆಡಿಸಿಕೊಂಡಿದ್ದಾರೆ. ಮಗಳು ಕಿಡ್ನಾಪ್ ಆಗಿರುವ ಸಂಗತಿಯನ್ನು ಗೌಪ್ಯವಾಗಿಡಲು ಹರಸಾಹಸ ಮಾಡುತ್ತಿದ್ದಾರೆ.

ತೂತು ಪಾತ್ರೆಯಲ್ಲಿ ನೀರು ನಿಲ್ಲಲು ಹೇಗೆ ಸಾಧ್ಯ? ಗಾಳಿ ವೇಗದಲ್ಲಿ ಸುದ್ದಿ ಹತ್ತಾರು ಹಳ್ಳಿಗಳಲ್ಲಿ ಹಬ್ಬಿದೆ. ಆದರೆ ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರ ಆಗದ ರೀತಿಯಲ್ಲಿ ಎಚ್ಚರಿಕೆ ವಹಿಸಿದ್ದಾರೆ.

ಸಂಜೆ ಆರು ಗಂಟೆ. ಅವರು ಏಕಾಂತ ಕೊಠಡಿಯಲ್ಲಿ ಕುಳಿತು ಬೀಡಾ ಮತ್ತು ಹೊಗೆಸೊಪ್ಪನ್ನು ಜಗಿಯುತ್ತಿದ್ದಾರೆ.

ಫೋನ್ ಕಾಲ್ ಬಂದಿತು. ಅದು ಪರ್ಸನಲ್ ನಂಬರ್. ಇದು ಕುಟುಂಬದ ಹತ್ತಿರದ ಸಂಬಂಧಿಕರಿಗೆ ಮಾತ್ರ ಗೊತ್ತಿದೆ. ಆದರೆ ಈಗ ಫೋನ್ ಕಾಲ್ ಬಂದಿರೋದು ಯಾವುದೋ ಅನ್‌ನೋನ್ ನಂಬರ್‌ನಿಂದ.

''ಹಲೋ... ಯಾರದು?''

ಕೂಡಲೇ ಪ್ರತಿಕ್ರಿಯೆ ಬರಲಿಲ್ಲ.

''ಯಾಕೆ ಮಾತಾಡುತ್ತಿಲ್ಲ?''

''ಸಡನ್ ಆಗಿ ವಿಷಯ ತಿಳಿಸಿದರೆ ನಿಮಗೆ ಆಘಾತವಾಗಿ ಹಾರ್ಟ್ ಅಟ್ಯಾಕ್ ಆಗಬಹುದು ಅಂತ ಮಾತಾಡಲಿಲ್ಲ.''

''ಯಾರು... ಯಾರು ನೀನು? ನೀನು ಯಾರ ಜೊತೆ ಮಾತಾಡುತ್ತಿದ್ದೀಯ ಅಂತ ಗೊತ್ತಿದೆ ತಾನೆ?''

''ಗೊತ್ತಿದೆ ರಾಜಾ ಬಹದ್ದೂರ್.''

''ನಿನಗೆ ಈ ನಂಬರ್ ಯಾರು ಕೊಟ್ರು?''

''ನಿಜ ಹೇಳಿದರೆ ಗಾಬರಿ ಆಗುತ್ತೆ.''

''ತಲೆಹರಟೆ ಸಾಕು.''

''ನಿನ್ನ ಮಗಳು... ಮುದ್ದಿನ ಮಗಳು ನನಗೆ ಕೊಟ್ಟಿದ್ದಾಳೆ.''

ಅವರೀಗ ಗಾಬರಿಯಾದರು.''

''ವಾಟ್... ಏನಂದೆ?''

''ನಿನ್ನ ಮಗಳು ನನ್ನ ಹತ್ತಿರ ಇದ್ದಾಳೆ. ಅವಳನ್ನು ಹೆದರಿಸಿ ಕಾಡಿಸಿ ನಿನ್ನ ಪರ್ಸನಲ್ ನಂಬರ್ ತಗೊಂಡೆ.''

''ಅಂದರೆ... ನೀನು... ನೀನು...''

''ನಿನ್ನ ಮಗಳ ಕಿಡ್ನಾಪರ್.''

ರೆಕಾರ್ಡ್ ಬಟನ್ ಒತ್ತಿದರು.

''ನಿನ್ನ ಮಗಳು ನನ್ನ ಬಂಧನದಲ್ಲಿರುವ ವೀಡಿಯೋ ಕ್ಲಿಪ್ ಕಳುಸ್ತೀನಿ.''

ಫೋನ್ ಲಿಂಕ್ ಕಟ್ ಆಗಿದೆ.

ವೀಡಿಯೋ ಕ್ಲಿಪ್ ವಾಟ್ಸಾಪ್ ಮಾಡಿದರು. ಅವರು ಪ್ಲೇ ಮಾಡಿದರು.

ಮಂದವಾದ ಬೆಳಕು ಹರಡಿರುವ ರೂಮಿನಲ್ಲಿ ನೀಲಿಮ. ಹಗ್ಗದಿಂದ ಬಂಧಿಸಲಾಗಿದೆ. ಅವಳು ಅಳುತ್ತಿದ್ದಾಳೆ.

☞ 10

### ಮೂಡಲಗಿ ಸಿಪಿಐ ಶ್ರೀಶೈಲ ಬ್ಯಾಕೋಡ ನೇತೃತ್ವದಲ್ಲಿ ನಡೆದ ಯಶಸ್ವಿ ಕಾರ್ಯಾಚರಣೆ...

# ಮನೆಗಳ ಬೀಗ ಮುರಿದು ಸದ್ದಿಲ್ಲದೇ ಚಿನ್ನಾಭರಣ ಕದಿಯುತ್ತಿದ್ದ ಐನಾತಿ ಕಳ್ಳರಿಬ್ಬರ ಬಂಧನ ; ಬಂಧಿತರಿಂದ 9.60 ಲಕ್ಷ ರೂ. ಸ್ವತ್ತು ವಶ

**ಮೈ ಮುರಿದು ನಡು ಬಗ್ಗಿಸಿ ದುಡಿದು ತಿನ್ನಲಾರದ ಮಹಾ ಹರಾಮಿ ತರುಣರಿಬ್ಬರು ಊರಿನಲ್ಲಿ ಅಂಡಲೆಯುತ್ತಿದ್ದರು. ತಮ್ಮ ಚೈನಿಗಾಗಿ ದುಡ್ಡಿಗಾಗಿ ಚಡಪಡಿಸುತ್ತಿದ್ದರು. ಇದಕ್ಕಾಗಿ ಗ್ರಾಮೀಣ ಪ್ರದೇಶಗಳಲ್ಲಿನ ಬೀಗ ಹಾಕಿದ ಮನೆಗಳನ್ನು ಟಾರ್ಗೆಟ್ ಮಾಡುತ್ತಿದ್ದರು. ಯಾರಿಗೂ ಗೊತ್ತಾಗದಂತೆ ಬೀಗ ಮುರಿದು ಮನೆ ಪ್ರವೇಶಿಸಿ ಚಿನ್ನಾಭರಣಗಳನ್ನು ಕದ್ದುಕೊಂಡು ಸದ್ದಿಲ್ಲದೇ ಪರಾರಿಯಾಗುತ್ತಿದ್ದರು. ಕಳ್ಳತನವಾಗಿದ್ದ ಮನೆಯ ಮಾಲೀಕರು ನೀಡಿದ ದೂರಿನ ಹಿಂದೆ ಬಿದ್ದ ಚತುರ ಮತ್ತು ಧಾಡಸಿ ಸಿಪಿಐ ಶ್ರೀಶೈಲ ಬ್ಯಾಕೋಡ, ಪಿಎಸ್ಐಗಳಾದ ಆನಂದ ಬಿ., ವ್ಹಿ.ವ್ಹಿ. ಉತ್ರೇಶ್ವರ ಮತ್ತು ಸಿಬ್ಬಂದಿಗಳು ಡೈನಾಮಿಕ್ ಡಿವೈಎಸ್ಪಿ ಡಿ.ಹೆಚ್. ಮುಲ್ಲಾರವರ ನಿರ್ದೇಶನದಲ್ಲಿ ಖಚಿತ ಮಾಹಿತಿ ಆಧರಿಸಿ ಇಬ್ಬರು ಐನಾತಿ ತರುಣರನ್ನು ಬಂಧಿಸಿ ಅವರಿಂದ ಎರಡು ಮನೆಗಳ್ಳತನ ಪತ್ತೆ ಮಾಡಿ 9.60 ಲಕ್ಷ ರೂ.ಗಳ ಮೌಲ್ಯದ ಚಿನ್ನಾಭರಣ ಮತ್ತು ಕಳ್ಳತನಕ್ಕೆ ಬಳಸಿದ ಆಟೋ ಜಪ್ತಿ ಮಾಡಿಕೊಂಡು ಜೈಲಿಗಟ್ಟಿದ ಪ್ರಕರಣ ಬೆಳಗಾವಿ ಜಿಲ್ಲೆಯ ಗೋಕಾಕ ಪೊಲೀಸ್ ಉಪವಿಭಾಗದ ಮೂಡಲಗಿ ತಾಲ್ಲೂಕಿನ ಕುಲಗೋಡ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**


ಚಿನ್ನಾಭರಣ ಕದಿಯುತ್ತಿದ್ದ ಕಳ್ಳರಾದ ರಾಘವೇಂದ್ರ ರಾಮು ರೇವಣಕರ, ಓಂಕಾರ ದಯಾನಂದ ಜಾಧವ


**ನೋ**ಡಲು ಸಂಭಾವಿತರು, ಸ್ಪುರದ್ರೂಪಿಗಳಂತೆ ಕಾಣುತ್ತಿದ್ದ ಮಹಾ ಹರಾಮಿ ಕಳ್ಳರಿಬ್ಬರು ಉಂಡಾಡಿ ಗುಂಡರಾಗಿ ಗಂಡರ ಗೂಳಿಯಂತೆ ತಿರುಗುತ್ತಿದ್ದರು. ತಮ್ಮ ಮೋಜು-ಮಜಾ, ಮಸ್ತಿಗಾಗಿ ಹೇಗಾದರೂ ಮಾಡಿ ಹಣ ಹೊಂದಿಸಬೇಕೆಂದು ದುಷ್ಟ ವಿಚಾರಗಳನ್ನು ಹೊಂದಿಕೊಂಡು ಸಂಚು ರೂಪಿಸಿದರು. ಗ್ರಾಮೀಣ ಪ್ರದೇಶಗಳ ಬೀಗ ಹಾಕಿದ್ದ ಮನೆಗಳನ್ನೇ ಟಾರ್ಗೆಟ್ ಮಾಡಿಕೊಂಡು ಸದ್ದಿಲ್ಲದೇ ಮನೆಯ ಬೀಗ ಮುರಿದು ಒಳನುಗ್ಗಿ ಚಿನ್ನಾಭರಣ ಕದ್ದು ಪರಾರಿಯಾಗುತ್ತಿದ್ದರು. ಇಂತಹ ಖತರ್‌ನಾಕ್ ಐನಾತಿ ಜೋಡಿಯೊಂದನ್ನು ಹೆಡೆಮುರಿ ಕಟ್ಟಿದ ಟಫ್ ಕಾಪ್ ಶ್ರೀಶೈಲ ಬ್ಯಾಕೋಡ ಮತ್ತು ಪಿಎಸ್ಐಗಳಾದ ಆನಂದ ಬಿ., ವ್ಹಿ.ವ್ಹಿ. ಉತ್ರೇಶ್ವರ ಮತ್ತು ಸಿಬ್ಬಂದಿಗಳು ಬಂಧಿತರಿಂದ ಎರಡು ಮನೆಗಳ್ಳತನ ಪತ್ತೆ ಮಾಡಿ 9.60 ಲಕ್ಷ ರೂ. ಮೌಲ್ಯದ 113 ಗ್ರಾಂ ಚಿನ್ನಾಭರಣ ಮತ್ತು ಕೃತ್ಯಕ್ಕೆ ಬಳಸಿದ ಆಟೋ ಒಂದನ್ನು ವಶಪಡಿಸಿಕೊಂಡಿದ್ದಾರೆ.


ಎಸ್ಪಿ ಡಾ. ಭೀಮಾಶಂಕರ ಗುಳೇದ


ಹೆಚ್ಚುವರಿ ಎಸ್ಪಿ ಶ್ರುತಿ ಎನ್.ಎಸ್.


ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ


ಡಿವೈಎಸ್ಪಿ ಡಿ.ಹೆಚ್. ಮುಲ್ಲಾ


ಸಿಪಿಐ ಶ್ರೀಶೈಲ ಬ್ಯಾಕೋಡ

**ಕೌಜಲಗಿಯಲ್ಲಿ ಕಳ್ಳತನವಾಗಿತ್ತು...**

ಮೂಡಲಗಿ ತಾಲ್ಲೂಕಿನ ಕುಲಗೋಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಕೌಜಲಗಿ ಗ್ರಾಮದಲ್ಲಿ ದಿನಾಂಕ 27-09-2024ರಂದು ಪತ್ರೆಪ್ಪ ರಾಚಪ್ಪ ಕುಲಗೋಡ ಎಂಬುವರು ಮನೆಗೆ ಬೀಗ ಹಾಕಿಕೊಂಡು ಹೊರ ಹೋದಾಗ ಅವರ ಮನೆಯ ಬೀಗ ಮುರಿದು ಒಳನುಗ್ಗಿ ಬೆಡ್‌ರೂಮ್‌ನಲ್ಲಿದ್ದ ಬೀರುವಿನ ಬೀಗ ಮುರಿದು 3.25 ಲಕ್ಷ ರೂ.ಗಳ 50 ಗ್ರಾಂ ತೂಕದ ಚಿನ್ನಾಭರಣಗಳನ್ನು ಅದ್ಯಾರೋ ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿದ್ದರು. ಹೊರಗೆ ಹೋದ ಕುಲಗೋಡ ಕುಟುಂಬಸ್ಥರು ಬಂದು ನೋಡಿದಾಗ ಕಳ್ಳತನ ಗೊತ್ತಾಗಿ ಅವರೆಲ್ಲ ಕಂಗಾಲಾಗಿದ್ದರು.

**ಪೊಲೀಸರಿಗೆ ದೂರು...**

ಮನೆ ಕಳ್ಳತನವಾಗಿದ್ದ ಪತ್ರೆಪ್ಪ ರಾಚಪ್ಪ ಕುಲಗೋಡ ಅವರು ನೇರವಾಗಿ ದಿನಾಂಕ 30-09-2024ರಂದು ಧಾವಿಸಿ ಬಂದು ಅಂದು ಕರ್ತವ್ಯದ ಮೇಲಿದ್ದ ದಕ್ಷ ಪಿಎಸ್ಐ ಆನಂದ ಅವರನ್ನು ಕಂಡು ನಡೆದಿದ್ದ ಸಂಗತಿ ತಿಳಿಸಿ ದೂರನ್ನು ನೀಡಿದರು. ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದ ಪಿಎಸ್ಐ ಆನಂದ ಅವರು ತಕ್ಷಣ ವಿಷಯವನ್ನು ಮೂಡಲಗಿ ಸಿಪಿಐ ಶ್ರೀಶೈಲ ಬ್ಯಾಕೋಡ, ಗೋಕಾಕದ ಡಿವೈಎಸ್ಪಿ ಡಿ.ಹೆಚ್. ಮುಲ್ಲಾ ಅವರಿಗೆ ತಿಳಿಸಿ ಅವರ ನಿರ್ದೇಶನದಂತೆ ಪ್ರಕರಣವನ್ನು ಕ್ರೈಂ ನಂ. 98/2024 ಕಲಂ 305, 331(1) ಬಿಎನ್‌ಎಸ್ ನೇದ್ದಕ್ಕೆ ದಾಖಲಿಸಿಕೊಂಡರು. ಸುದ್ದಿ ತಿಳಿಯುತ್ತಿದ್ದಂತೆ ಶರವೇಗದಲ್ಲಿ ಸಿಪಿಐ ಶ್ರೀಶೈಲ ಬ್ಯಾಕೋಡ ಕುಲಗೋಡ ಪೊಲೀಸ್ ಠಾಣೆಗೆ ಭೇಟಿ ನೀಡಿದರು. ನಂತರ ಪಿಎಸ್ಐಗಳಾದ ಆನಂದ ಬಿ., ಹೆಚ್ಚುವರಿ ಪಿಎಸ್ಐ ವ್ಹಿ.ವ್ಹಿ. ಉತ್ರೇಶ್ವರ ಮತ್ತು ಸಿಬ್ಬಂದಿಗಳೊಂದಿಗೆ ಘಟನಾ ಸ್ಥಳಕ್ಕೆ ಬೇಟಿ ನೀಡಿ ಕುಲಂಕುಷವಾಗಿ ಪರಿಶೀಲಿಸಿದರು. ಪಂಚನಾಮೆ ಸಾಕ್ಷಿಗಳ ಹೇಳಿಕೆ ಪಡೆದು ಸಿಪಿಐ ಶ್ರೀಶೈಲ ಬ್ಯಾಕೋಡ, ಡಿವೈಎಸ್ಪಿ ಡಿ.ಹೆಚ್. ಮುಲ್ಲಾ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್. ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರೊಂದಿಗೆ ಸಮಾಲೋಚಿಸಿ ಅವರ ನಿರ್ದೇಶನಗಳನ್ನು ಪಡೆದುಕೊಂಡರು.

**ಬೆಳಗಾವಿ**
✍ ಮನ್ನಾಪೂರ

**ವಿಶೇಷ ತನಿಖಾ ತಂಡ ರಚನೆ...**

ಚತುರತನ ಮತ್ತು ಧಾಡಸಿತನಕ್ಕೆ ಹೆಸರಾದ ಸಿಪಿಐ ಶ್ರೀಶೈಲ ಬ್ಯಾಕೋಡ ಅವರು ತಡ ಮಾಡದೇ ಪಿಎಸ್ಐಗಳಾದ ಆನಂದ ಬಿ., ವ್ಹಿ.ವ್ಹಿ. ಉತ್ರೇಶ್ವರ, ಸಿಬ್ಬಂದಿಗಳಾದ ಎಂ.ಬಿ. ಕರಣಿ, ವೈ.ಎಂ. ಸಾಂಗಲಿ, ಎಸ್.ವ್ಹಿ. ಹಣಜಿ, ಎಂ.ಬಿ. ಆಡಿನ, ಕೆ.ಸಿ. ಬಾಗಲಿ, ಮಾರುತಿ ಕುರೆನ್ನವರ, ಎಸ್.ಎನ್. ಬಡಬಡೆ, ಎಲ್.ಟಿ. ಪೂಜೇರಿ, ಎಸ್.ಎಫ್. ಮಳಲಿ, ವ್ಹಿ.ಎಲ್. ಧೂಳಪ್ಪನವರ, ಎ.ಹೆಚ್. ವೇಷಧಾರಿ, ಬೆಳಗಾವಿಯ ಟೆಕ್ನಿಕ್ ಸೆಲ್‌ನ ವಿನೋದ ಠಕ್ಕನ್ನವರ ಒಳಗೊಂಡಂತೆ ಒಂದು ವಿಶೇಷ ತಂಡವನ್ನು ರಚಿಸಿ ಶತಾಯ-ಗತಾಯ ಕಳ್ಳರನ್ನು ಹೆಡೆಮುರಿ ಕಟ್ಟಲು ನಿರ್ದೇಶನ ನೀಡಿ ತಂಡದ ನೇತೃತ್ವವನ್ನು ಸ್ವತಃ ತಾವೇ ವಹಿಸಿಕೊಂಡರು.

**ಕಲಾರಕೊಪ್ಪದಲ್ಲಿ ಮತ್ತೊಂದು ಕಳ್ಳತನ...**

ಕುಲಗೋಡ ಪೊಲೀಸರ ಕಾರ್ಯಾಚರಣೆಗೆ ಇಳಿದು ಕಳ್ಳರ ಪತ್ತೆಗೆ ಜಾಲ ಹೆಣೆಯುತ್ತಿರುವಾಗಲೇ ಕುಲಗೋಡ ಪೊಲೀಸ್ ಠಾಣೆ ವ್ಯಾಪ್ತಿಯ ಕಲಾರಕೊಪ್ಪ ಗ್ರಾಮದಲ್ಲಿ ಶಿವರಾಯಿ ಅಗನೇಶ್ವರ ಎಂಬುವವರ ಮನೆ ಬೀಗ ಮುರಿದು 63 ಗ್ರಾಂ ಚಿನ್ನಾಭರಣ ಲೂಟಿ ಮಾಡಲಾಗಿತ್ತು. ಈ ಘಟನೆಯಿಂದ ಸಿಪಿಐ ಶ್ರೀಶೈಲ ಬ್ಯಾಕೋಡ, ಪಿಎಸ್ಐಗಳಾದ ಆನಂದ ಬಿ., ವ್ಹಿ.ವ್ಹಿ. ಉತ್ರೇಶ್ವರ ಟೀಂ ಅಲರ್ಟ್ ಆಗಿಬಿಟ್ಟಿತು. ಕಳ್ಳರು ಬಾಲ ಬಿಚ್ಚುವುದರೊಳಗೆ ಅವರ ಕೈಗೆ ಕೊಳ ತೊಡಿಸಲು ನಿರ್ಧರಿಸಿ ವಿಶೇಷ ತನಿಖಾ ತಂಡಕ್ಕೆ ಖಡಕ್ ಆದ ನಿರ್ದೇಶನ ನೀಡಿ ಹುರಿದುಂಬಿಸಿದರು.


ಪಿಎಸ್ಐ (ಕಾ.ಸು) ಆನಂದ ಬಿ.


ಹೆಚ್ಚುವರಿ ಪಿಎಸ್ಐ ವ್ಹಿ.ವ್ಹಿ. ಉತ್ರೇಶ್ವರ

**ಐನಾತಿ ಕಳ್ಳರಿಬ್ಬರ ಬಂಧನ...**

ಅಂದುಕೊಂಡ ಹಾಗೇ ವಿಶೇಷ ತನಿಖಾ ತಂಡ ಬಿರುಸಿನ ಕಾರ್ಯಾಚರಣೆಗೆ ಇಳಿಯಿತು. ಕೌಜಲಗಿ ಮತ್ತು ಕಲಾರಕೊಪ್ಪದಲ್ಲಿ ನಡೆದ ಎರಡು ಕಳ್ಳತನಗಳನ್ನು ಒಂದೇ ಗ್ಯಾಂಗ್‌ನ ಕಳ್ಳರು ಮಾಡಿದ್ದರು. ಅದಾಗಲೇ ಘಟನಾ ಸ್ಥಳಗಳಲ್ಲಿ ದೊರೆತ ಕೆಲವೊಂದು ತಾಂತ್ರಿಕ ಗುರುತುಗಳು ವಿಶೇಷ ತನಿಖಾ ತಂಡಕ್ಕೆ ಅನುಕೂಲಕರವಾದವು. ಅದಾಗಲೇ ಕಳ್ಳರ ಕುಂಡಲಿಯನ್ನು ತಮ್ಮ ಅಂಗೈಲಿ ಇರಿಸಿಕೊಂಡು ತನಿಖಾ ತಂಡ ಖಚಿತ ಮಾಹಿತಿ ಆಧರಿಸಿ ಕಳ್ಳರ ಬೆನ್ನು ಬಿದ್ದಿತ್ತು. ಕಳೆದ ವಾರದಲ್ಲಿ ಗೋಕಾಕ ನಗರದ ಬ್ರಾಹ್ಮಣ ಗಲ್ಲಿಯ ಓಂಕಾರ ದಯಾನಂದ ಜಾದವ (21 ವ), ಬಸವಣ್ಣ ಗಲ್ಲಿಯ ರಾಘವೇಂದ್ರ ರಾಮು ರೇವಣಕರ (22 ವ) ಎಂಬಿಬ್ಬರನ್ನು ವಶಕ್ಕೆ ತೆಗೆದುಕೊಂಡು


ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ಸಿಬ್ಬಂದಿ ಎಂ.ಬಿ. ಕರಣಿ, ಮಾರುತಿ ಕುರೆನ್ನವರ, ಎಸ್.ಎನ್. ಬಡಬಡೆ, ಕೆ.ಸಿ. ಬಾಗಲಿ, ಎಂ.ಬಿ. ಆಡಿನ, ವಿನೋದ ಠಕ್ಕನ್ನವರ


☞ 11

**ಕಿಡ್ನಿ ವೈಫಲ್ಯದಿಂದ ಹುಷಾರಿಲ್ಲದೆ ಹಾಸಿಗೆ ಹಿಡಿದಿದ್ದ ಮಹಿಳೆಯ ಆರೈಕೆ ಮಾಡಲು ಬರುತ್ತಿದ್ದ ಯುವತಿಯೊಬ್ಬಳು ಆಕೆಯ ಬಾಡಿ ಬಿಲ್ಡರ್‌ನ ಮೈಕಟ್ಟಿಗೆ ಮನಸೋತು ಪ್ರೀತಿಗೆ ಬಿದ್ದ ಅವಳು, ನನ್ನನ್ನು ಮದುವೆಯಾದರೆ ನಿನ್ನ ಹೆಂಡತಿಗೆ ನನ್ನ ಕಿಡ್ನಿಯೊಂದನ್ನು ದಾನವಾಗಿ ಕೊಡುತ್ತೀನಿ ಮದುವೆಯಾಗ್ತೀಯಾ ಎಂದವಳ ಮನೆಗೆ ಹೋಗಿ ಹೆಣ್ಣು ಕೇಳಿದಕ್ಕೆ ರಸ್ತೆಯಲ್ಲಿ ಅಟ್ಟಾಡಿಸಿಕೊಂಡು ಹೋಗಿ ದೊಣ್ಣೆ ಮತ್ತು ಕಲ್ಲುಗಳಿಂದ ಹೊಡೆದು ಸಾಯಿಸಿ ಪರಾರಿಯಾಗಿದ್ದ ನಾಲ್ವರು ಆರೋಪಿಗಳನ್ನು ಗಲ್‌ಪೇಟೆ ಠಾಣೆ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.**



ಕೊಲೆಯಾದ ಉಸ್ಮಾನ್

# ಹೆಣ್ಣು ಕೇಳಿದಕ್ಕೆ ಹರಿಯಿತು ಬಾಡಿ ಬಿಲ್ಡರ್‌ನ ನೆತ್ತರು!


ಕೋಲಾರ
ಕೋಲಾರ ಮಂಜು


ಉಸ್ಮಾನ್ ಬದುಕಿದ್ದಾಗ

**ಕೋ**ಲಾರದ ರಹಮತ್‌ನಗರ ಆಕ್ಸಾ ಮಸೀದಿ ಹತ್ತಿರ ವಾಸವಾಗಿರುವ ಲೇಟ್ ಮೊಹಮದ್‌ರವರ ಮಗ ದಿನಸಿ ಅಂಗಡಿ ವ್ಯಾಪಾರ ಮಾಡುವ ಹಮ್ಸಾ (62) ರಹಮತ್ ಉನ್ನಿಸಾ ದಂಪತಿಗಳಿಗೆ ಮೊಹಿನುದ್ದೀನ್, ಫಾತಿಮಾ, ಉಸ್ಮಾನ್, ಷಾಬುದ್ದೀನ್ ಎಂಬ ನಾಲ್ಕು ಜನ ಮಕ್ಕಳಿದ್ದು, ಇವರೆಲ್ಲರಿಗೂ ಮದುವೆಗಳಾಗಿ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ. ಇವರಲ್ಲಿ ಮೂರನೇ ಮಗ ಉಸ್ಮಾನ್ ಪಿಯುಸಿವರೆಗೂ ಓದಿಕೊಂಡಿದ್ದು, ಹೈಸ್ಕೂಲ್‌ನಲ್ಲಿ ಓದುತ್ತಿರುವಾಗಲೇ ಗರಡಿ ಮನೆಗೆ ಹೋಗಿ ಕುಸ್ತಿ ಕಲಿಯುತ್ತಿದ್ದು ಇದರ ಜೊತೆಗೆ ಜಿಮ್‌ಗೆ ಹೋಗುತ್ತಾ ದೇಹವನ್ನು ದಂಡಿಸಿ ಉತ್ತಮ ಮೈಕಟ್ಟನ್ನು ಬೆಳೆಸಿಕೊಂಡಿದ್ದು, ಸಾಕಷ್ಟು ಬಾಡಿ ಬಿಲ್ಡಿಂಗ್ ಶೋಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದನು. ಜೀವನೋಪಾಯಕ್ಕಾಗಿ ಬೆಂಗಳೂರಿನ ಆಕ್ಸಿಸ್‌ನಲ್ಲಿ ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದರು. ಸುಮಾರು ಹತ್ತು ವರ್ಷಗಳಿಂದ ನೂರ್ ನಗರದ ವಾಸಿ ಜಬೀನ್‌ತಾಜ್ ಎನ್ನುವವರನ್ನು ಪ್ರೀತಿಸುತ್ತಾ ಇದ್ದು, ಕಳೆದ ಐದು ವರ್ಷದ ಹಿಂದೆ ಎರಡು ಮನೆಯವರ ಒಪ್ಪಿಗೆ ಮೇರೆಗೆ ಮದುವೆಯಾಗಿ ನೂತನ ದಂಪತಿಗಳು ನೂರ್‌ನಗರದಲ್ಲಿ ವಾಸವಾಗಿದ್ದರು. ಇವರಿಗೆ 4 ವರ್ಷದ ಮಹಮದ್ ಆನಸ್ ಎಂಬ ಮಗನಿರುತ್ತಾನೆ. ಉಸ್ಮಾನ್ ತನಗೆ ಬರುವ ಸಂಬಳದಲ್ಲಿ ಹೆಂಡತಿ ಮತ್ತು ಮಗನೊಂದಿಗೆ ಸುಖವಾಗಿ ಜೀವನ ಮಾಡಿಕೊಂಡಿರಬೇಕಾದರೆ ಎರಡು ವರ್ಷಗಳ ಹಿಂದೆ ತನ್ನ ಹೆಂಡತಿ ಜಬೀಸ್‌ತಾಜ್‌ಳ ಎರಡು ಕಿಡ್ನಿಗಳು ವಿಫಲವಾಗಿ ಸಾಕಷ್ಟು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಿದ್ದು, ಒಂದು ವರ್ಷದಿಂದ ಡಯಾಲಿಸಿಸ್ ಮಾಡಿಸುತ್ತಿದ್ದರು. ತನ್ನ ಹೆಂಡತಿಯ


ಎಸ್ಪಿ ಬಿ. ನಿಖಿಲ್


ಎಎಸ್ಪಿ ರವಿಶಂಕರ್


ಡಿವೈಎಸ್ಪಿ ಎಂ.ಹೆಚ್. ನಾಗ್ತೆ

ಆರೋಗ್ಯ ಸಮಸ್ಯೆಯಿಂದ ಗಂಡ ಉಸ್ಮಾನ್ ಸರಿಯಾಗಿ ಕೆಲಸಕ್ಕೆ ಹೋಗಲಾಗದೆ ಕೆಲಸ ಬಿಟ್ಟು ಕೋಲಾರದಲ್ಲಿಯೇ ಸಣ್ಣಪುಟ್ಟ ಕೆಲಸ ಮಾಡಿಕೊಂಡು ಹೆಂಡತಿ, ಮಗನನ್ನು ನೋಡಿಕೊಂಡಿದ್ದನು. ಉಸ್ಮಾನ್ ಮನೆ ಪಕ್ಕದಲ್ಲಿ ಸಿಮ್ರಾನ್ ಎನ್ನುವ ಯುವತಿಯ ಕುಟುಂಬವು ವಾಸವಾಗಿದ್ದು, ಜಬೀನ್‌ತಾಜ್‌ಗೆ ಕಿಡ್ನಿ ವೈಫಲ್ಯದಿಂದ ಹುಷಾರಿಲ್ಲದೆ ಹಾಸಿಗೆ ಹಿಡಿದಿರುವ ಹೆಂಡತಿಯ ಆರೈಕೆಯನ್ನು ಗಂಡ ಉಸ್ಮಾನ್ ಮಾಡುತ್ತಿರುವುದನ್ನು ಹತ್ತಿರದಿಂದ ನೋಡುತ್ತಿದ್ದ ಸಿಮ್ರಾನ್‌ಳು ಇವರ ಮನೆಗೆ ಬಂದು ಹೋಗುತ್ತಾ ಜಬೀನ್ ತಾಜ್‌ಳ ಆರೈಕೆ ಮಾಡುತ್ತಿದ್ದಳು. ಕಷ್ಟದಲ್ಲಿರುವ ನಮಗೆ ಸಹಾಯಕ್ಕೆ ಯಾರು ಇಲ್ಲವಲ್ಲ ದೇವರೇ ಎನ್ನುತ್ತಿರುವಾಗ ಪಕ್ಕದ ಮನೆ ಸಿಮ್ರಾನ್ ಬಂದು ಸೇವೆ ಮಾಡುತ್ತಾ ಜಬೀನ್ ತಾಜ್‌ಗೆ ಹತ್ತಿರವಾಗುತ್ತಾ ಹೋದಳು. ಇದೇ ರೀತಿ ಮನೆಗೆ ಬಂದು ಹೋಗುವಾಗ ಜಬೀನ್‌ತಾಜ್‌ಳ ಗಂಡ ಬಾಡಿ ಬಿಲ್ಡರ್ ಉಸ್ಮಾನ್‌ನ ಮೈಕಟ್ಟಿಗೆ ಮನಸೋತ ಸಿಮ್ರಾನ್ ಅವನನ್ನು ಲವ್ ಮಾಡಲು ಪ್ರಾರಂಭಿಸಿದಳು. ಸಿಮ್ರಾನ್ ಳು ಜಬೀನ್‌ತಾಜ್‌ಳ ಆರೋಗ್ಯದ ಬಗ್ಗೆ ಕಾಳಜಿ ವಹಿಸುವ ಜೊತೆಗೆ ಉಸ್ಮಾನ್‌ನ ಕಷ್ಟ, ಸುಖದಲ್ಲಿ ಭಾಗಿಯಾಗುತ್ತಿದ್ದಳು. ಹೆಂಡತಿ ಜಬೀನ್‌ತಾಜ್ ಅನಾರೋಗ್ಯದ ಕಾರಣ ಹಾಸಿಗೆ ಹಿಡಿದಾಗಿನಿಂದ ದಾಂಪತ್ಯ ಸುಖದಿಂದ ದೂರವಾಗಿದ್ದ ಉಸ್ಮಾನ್‌ಗೆ ಸಿಮ್ರಾನ್‌ಳ ಸನಿಹ ಬೇಕಾಗಿತ್ತು. ಅದಕ್ಕೆ ಅವನು ಸಹ ದಿನ ಕಳೆದಂತೆ ಅವಳ ಮೋಹಪಾಶಕ್ಕೆ ಬಿದ್ದು ಲವ್ ಮಾಡಲು ಪ್ರಾರಂಭಿಸಿದನು. ಸಿಮ್ರಾನ್ ಆರು ತಿಂಗಳಿಂದ ಜಬೀನ್‌ತಾಜ್‌ಳ ಮನೆಗೆ ಬಂದು ಅವಳ ಆರೈಕೆ ಮಾಡುವುದಕ್ಕಿಂತ ಗಂಡ ಉಸ್ಮಾನ್‌ನ ಜೊತೆ ಹೆಚ್ಚು ಸಮಯ ಕಳೆಯುತ್ತಿದ್ದಳು. ಮನೆಯಲ್ಲಿ


ಸಿಪಿಐ ಎಂ.ಜೆ. ಲೋಕೇಶ್


ಪಿಎಸ್‌ಐ ಅರುಣ್‌ಗೌಡ ಪಾಟೀಲ್

ಸಿಮ್ರಾನ್ ಮತ್ತು ಗಂಡ ನಡೆದುಕೊಳ್ಳುತ್ತಿರುವ ರೀತಿಯಿಂದ ಪತ್ನಿ ಜಬೀನ್‌ತಾಜ್‌ಗೆ ಅನುಮಾನ ಬಂದು ಅವಳೊಂದಿಗಿನ ರೀತಿ, ನೀತಿಗಳನ್ನು ಬದಲಿಸಿಕೊಳ್ಳುವಂತೆ ಗಂಡನಿಗೆ ಹೇಳಿದಳು. ಅದಕ್ಕೆ ಉಸ್ಮಾನ್ ಹಾಸಿಗೆಯಲ್ಲಿ ಮಲಗಿರುವ ನಿನಗೆ ಏನು ಗೊತ್ತಾಗುವುದಿಲ್ಲ. ನನ್ನ ಹಾಗೂ ಅವಳ ಮಧ್ಯೆ ಏನು ನಡೆಯುತ್ತಿಲ್ಲವೆಂದು ಹೇಳಿದನು. ಆಗ ಜಬೀನ್ ತಾಜ್ ಮನೆಯಲ್ಲಿ ನಡೆಯುತ್ತಿರುವ ವಿಚಾರದ ಬಗ್ಗೆ ತನ್ನ ತವರುಮನೆಯವರಿಗೆ ಫೋನ್ ಮಾಡಿ ಹೇಳಿದಳು. ತಕ್ಷಣ ತಂದೆ, ತಾಯಿ ಮತ್ತು ಕುಟುಂಬದವರೊಂದಿಗೆ ಬಂದು ಅಳಿಯ ಮತ್ತು ಸಿಮ್ರಾನ್‌ಗೆ ಬುದ್ಧಿ ಹೇಳಿದರಲ್ಲದೆ ಇನ್ನು ಮುಂದೆ ನಿನ್ನಿಂದ ಯಾವ ಸಹಾಯವು ಬೇಡ ಎಲ್ಲವನ್ನು ನಮ್ಮ ಅಳಿಯನೇ ನೋಡಿಕೊಳ್ಳುತ್ತಾನೆಂದು ಹೇಳಿ ಕಳುಹಿಸಿಬಿಟ್ಟರು. ನಂತರ ಸಿಮ್ರಾನ್ ಜಬೀನ್‌ತಾಜ್‌ಳ ಮನೆಗೆ ಬರದಿದ್ದರೂ ಉಸ್ಮಾನ್ ಜೊತೆ ಫೋನ್ ಸಂಪರ್ಕದಲ್ಲಿದ್ದಳು. ಈ ವಿಚಾರ ಸಿಮ್ರಾನ್‌ಳ ಮನೆಯವರಿಗೆ ಗೊತ್ತಾಗಿ ವಿಚಾರಿಸಲಾಗಿ ಉಸ್ಮಾನ್ ನನ್ನನ್ನು ಪ್ರೀತಿಸುತ್ತಿದ್ದಾನೆ, ನಾನೂ ಸಹ ಅವನನ್ನು ಪ್ರೀತಿಸುತ್ತಿದ್ದೇನೆ. ಜಬೀನ್‌ತಾಜ್‌ಳ ಎರಡು ಕಿಡ್ನಿಗಳು ವಿಫಲವಾಗಿ ಡಯಾಲಿಸಿಸ್ ಮಾಡುತ್ತಿದ್ದಾರೆ. ಅವಳು ಹೆಚ್ಚು ದಿನ ಬದುಕುವುದಿಲ್ಲ. ಅದಕ್ಕೆ ನಾನು ಉಸ್ಮಾನ್‌ನನ್ನು ಮದುವೆಯಾಗಬೇಕೆಂದು ಕೊಂಡಿರುವೆ. ಉಸ್ಮಾನ್‌ನನ್ನು ಕರೆಸಿ ಮಾತನಾಡಿ ಎಂದು ಹೇಳಿದಳು. ಅದರಂತೆ ಉಸ್ಮಾನ್‌ನನ್ನು ಮನೆಗೆ ಕರೆಸಿ ಮಗಳು ನಿನ್ನನ್ನು ಇಷ್ಟಪಡುತ್ತಿರುವುದಾಗಿ ಹೇಳಿದ್ದಾಳೆ. ಮೊದಲಿಗೆ ನಿಮ್ಮ ಮನೆಯವರನ್ನು ಒಪ್ಪಿಸಿ ಹೆಣ್ಣು ಕೇಳಲು ಕರೆದುಕೊಂಡು ಬಾ ನಂತರ ಮದುವೆ ಮಾತುಕತೆ ನಡೆಸೋಣ ಎಂದು ಹೇಳಿದರು.

### ಕಿಡ್ನಿ ಕೊಡುತ್ತೀನಿ ಮದುವೆ ಮಾಡಿಕೋ

ಉಸ್ಮಾನ್ ಪ್ರೀತಿ, ಪ್ರೇಮ ಎಂದು ಹೇಳಿಕೊಂಡು ಯಾರ ಬಳಿಯೂ ಮದುವೆ ಬಗ್ಗೆ ಮಾತನಾಡದೆ ಇರುವುದನ್ನು ನೋಡಿದ ಸಿಮ್ರಾನ್‌ಳು, ಪತ್ನಿ ಜಬೀನ್ ತಾಜ್‌ಳು ಬೇಗ ಗುಣಮುಖಳಾಗಿ ಎಲ್ಲರಂತೆ ಓಡಾಡಿಕೊಂಡು ಇರಬೇಕಾದರೆ ಅದಕ್ಕೆ ನಾನೊಂದು ಕಿಡ್ನಿಯನ್ನು ಕೊಡುತ್ತೇನೆ. ಅದರ ಪ್ರತಿಫಲವಾಗಿ ನನ್ನನ್ನು ಮದುವೆಯಾಗಬೇಕೆಂದು ಉಸ್ಮಾನ್‌ಗೆ ಜಬೀನ್‌ತಾಜ್‌ಳ ಮುಂದೆ ಹೇಳಿದಳು. ಅದಕ್ಕೆ ಉಸ್ಮಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಿನ್ನ ಕಿಡ್ನಿ ಪತ್ನಿ ಜಬೀನಾಳಿಗೆ ಮ್ಯಾಚ್ ಆಗುತ್ತದೆ ಎನ್ನುವುದರ ಬಗ್ಗೆ ಪರೀಕ್ಷೆ ಮಾಡಿಸೋಣವೆಂದು ಹೇಳಿ ಮನೆಯಿಂದ ಹೊರಟುಬಿಟ್ಟನು. ಸಿಮ್ರಾನ್ ತನ್ನ ಗಂಡನೊಂದಿಗೆ ಎರಡನೇ ಮದುವೆಯಾಗುವ ಮಾತಿನಿಂದ ಬೇಸರಗೊಂಡು ಮದುವೆಗೆ ವಿರೋಧ ವ್ಯಕ್ತಪಡಿಸಿದಳಲ್ಲದೆ, ವಿಚಾರವನ್ನು ತನ್ನ ತಂದೆ, ತಾಯಿಗೆ ತಿಳಿಸಿದಳು. ಮಗಳಿಂದ ಅಳಿಯನನ್ನು ದೂರ ಮಾಡಲು ನೋಡುತ್ತಿರುವ ಸಿಮ್ರಾನ್‌ಳ ಬಗ್ಗೆ ಕೋಪಗೊಂಡ ತಂದೆಯು ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ದೂರು ನೀಡಿದರು. ಆಗ ಪೊಲೀಸರು ಸಿಮ್ರಾನ್‌ಳ ಮನೆಯವರನ್ನು ಠಾಣೆಗೆ ಕರೆಸಿ ವಿಚಾರಣೆ ಮಾಡುವಾಗ ಸಿಮ್ರಾನ್‌ಳ ಮನೆಯವರು ಜಬೀನ್‌ತಾಜ್‌ಳ ಮನೆಯವರ ಮೇಲೆ ಪೊಲೀಸರ ಮುಂದೆಯೇ ಹಲ್ಲೆ ಮಾಡಲು ಮುಂದಾದರು. ಆಗ ಪೊಲೀಸರು ಎರಡು ಕಡೆಯವರನ್ನು ಸಮಾಧಾನಪಡಿಸಿ ಉಸ್ಮಾನ್‌ಳಿಗೆ ಮದುವೆಯಾಗಿ ಹೆಂಡತಿ, ಮಗುವಿರುವಾಗ


ಲವರ್‌ನೊಂದಿಗೆ ಮೃತ ಉಸ್ಮಾನ್



ಮತ್ತೊಂದು ಮದುವೆಯಾಗುವಂತೆ ಪೀಡುಸುವುದು ತಪ್ಪಾಗುತ್ತದೆ ಎಂದು ಹೇಳಿದರು. ಆಗ ಉಸ್ಮಾನ್ ನಾನು ಅವಳನ್ನು ಪ್ರೀತಿಸುತ್ತಿದ್ದೇನೆ, ಅವಳೂ ನನ್ನನ್ನು ಪ್ರೀತಿಸುತ್ತಿದ್ದಾಳೆ. ಅವರ ಮನೆಯವರೂ ಸಹ ಮದುವೆ ಮಾಡುವುದಾಗಿ ಹೇಳಿದ್ದಾರೆ ಎಂದನು. ಈ ವಿಷಯವನ್ನು ತಿಳಇದುಕೊಂಡ ಜಬೀನ್‌ತಾಜ್‌ಳ ತಂದೆ, ತಾಯಿ ಮತ್ತು ಕುಟುಂಬದವರು ಸಿಮ್ರಾನ್‌ಳನ್ನು ಮದುವೆಯಾಗುವುದಾಗಿ ಹೇಳುತ್ತಿರಬೇಕಾದರೆ ಮಗಳ ಮತ್ತು ಮೊಮ್ಮಗನನ್ನು ನಮ್ಮ ಮನೆಗೆ ಕರೆದುಕೊಂಡು ಹೋಗುವುದಾಗಿ ಹೇಳಿದರು. ಪೊಲೀಸರು ಎರಡು ಕಡೆಯವರ ಮಧ್ಯೆ ರಾಜೀ ಸಂಧಾನ ಮಾಡಲು ಪ್ರಯತ್ನಿಸಿದರು. ಆದರೆ ಸಂಧಾನ ವಿಫಲವಾಗಿದ್ದರಿಂದ ಪೊಲೀಸರಿಗೆ ಹೇಳಿ ಹೊರಟುಬಿಟ್ಟರು.


ಪ್ರಮುಖ ಆರೋಪಿ ಜಮೀಲ್ ಪಾಷಾ


ಆರೋಪಿಗಳಾದ ಸೈಯದ್ ಸಲ್ಮಾನ್ ಅಲಿಯಾಸ್ ರಾಜ, ಆಫ್ರಿದ್‌ಖಾನ್ ಅಲಿಯಾಸ್ ಅಪ್ಪು, ನಜೀರ್‌ಖಾನ್


ಸಿಮ್ರಾನ್ ಮನೆಯವರು ಉಸ್ಮಾನ್‌ನನ್ನು ನಂಬಿಕೊಂಡು ಪೊಲೀಸ್ ಠಾಣೆಗೆ ಬಂದಿದ್ದಕ್ಕೆ ಎಲ್ಲರ ಮುಂದೆ ನಮಗೆ ಅವಮಾನವಾಗಿದೆ. ಅದಕ್ಕೆ ಉಸ್ಮಾನ್‌ನ ಸಹವಾಸ ಬಿಟ್ಟು ಬಿಡುವಂತೆ ಹೇಳಿದ ತಂದೆ, ತಾಯಿ ಮತ್ತು ಕುಟುಂಬದವರು ಅವಳನ್ನು ಮನೆಗೆ ಕರೆದುಕೊಂಡು ಹೋದರು. ಕೆಲವು ದಿನಗಳ ನಂತರ ಹೆಂಡತಿ ಮತ್ತು ಮಗನನ್ನು ಬಿಟ್ಟಿರಲಾರದೆ ಉಸ್ಮಾನ್ ಹೆಂಡತಿಯ ತವರುಮನೆಗೆ ಹೋಗಿ ಕಿಡ್ನಿ ಖಾಯಿಲೆಯಿಂದ ಹಾಸಿಗೆ ಹಿಡಿದಿರುವ ಜಬೀನ್‌ತಾಜ್‌ಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾಳೆ ಜೊತೆಗೆ ಕಿಡ್ನಿಯನ್ನು ದಾನವಾಗಿ ಕೊಡುತ್ತೇನೆಂದು ಹೇಳಿದ್ದಳು. ಅದಕ್ಕೆ ಅವಳನ್ನು ಮದುವೆಯಾಗಬೇಕೆಂದುಕೊಂಡಿದ್ದೆ. ನಿಮ್ಮಗಳಿಗೆ ಇಷ್ಟವಿಲ್ಲದ ಮೇಲೆ ಯಾವ ಸಿಮ್ರಾನ್‌ಳ ಸಹವಾಸ ನನಗೆ ಬೇಡ, ಹೆಂಡತಿ, ಮಗುವನ್ನು ನನ್ನ ಜೊತೆ ಕಳುಹಿಸಿಕೊಡಿ ಅವರನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆಂದು ಹೇಳಿದನು. ಅದಕ್ಕೆ ಜಬೀನ್‌ತಾಜ್‌ಳ ತಂದೆ, ತಾಯಿಯು ಅವಳನ್ನು ಕಳುಹಿಸಿ ಕೊಡುವುದಿಲ್ಲ. ನೋಡಬೇಕೆಂದಾಗ ಬಂದು ನೋಡಿಕೊಂಡು ಹೋಗಿ, ಅದು ಬಿಟ್ಟು ಹೆಂಡತಿ, ಮಗು ಬೇಕೆಂದು ಬಂದರೆ ನಿನ್ನನ್ನು ಮನೆಗೆ ಸೇರಿಸುವುದಿಲ್ಲವೆಂದು ಬೈದು ಕಳುಹಿಸಿದರು. ಮದುವೆ ಮಾಡಿಕೊಳ್ಳುತ್ತೇನೆಂದು ಹೇಳಿದಕ್ಕೆ ಹೆಂಡತಿ, ಮಗ ದೂರವಾದರು ಜೊತೆಗೆ ಲವರ್ ಸಿಮ್ರಾನ್‌ಳನ್ನು ನನ್ನಿಂದ ದೂರ ಮಾಡಿದರೆಂದು ಬೇಸರದಿಂದಲೇ ಉಸ್ಮಾನ್ ಒಂಟಿಯಾಗಿ ಮನೆಯಲ್ಲಿ ಕಾಲ ಕಳೆಯುತ್ತಿದ್ದನು.

### ಉಸ್ಮಾನ್ ಸಾವಿನ ಬಗ್ಗೆ ದೂರು

ರಹಮತ್‌ನಗರದ ವಾಸಿ ಹಮ್ಸಾರವರು ಜನವರಿ 5ರಂದು ಬೆಲಗಿನ ಜಾವ ನಗರದ ಗಲ್ ಪೇಟೆ ಪೊಲೀಸ್ ಠಾಣೆಗೆ ಹಾಜರಾಗಿ ನೆನ್ನೆರಾತ್ರಿ 11.30ರಲ್ಲಿ ನನ್ನ ಮಗ ಎ.ವಿ. ಉಸ್ಮಾನ್ (30)ರವರ ಸ್ನೇಹಿತ ನಾರಾಯಣಮೂರ್ತಿರವರ ಮಗ ದ್ವಿತೀಯ ಪಿಯುಸಿಯಲ್ಲಿ ವ್ಯಾಸಂಗ ಮಾಡುತ್ತಿರುವ ದರ್ಶನ್ (18)ರವರು ನನ್ನ ಮೊಬೈಲ್‌ಗೆ ಕರೆ ಮಾಡಿ ನಿಮ್ಮ ಮಗ ಉಸ್ಮಾನ್‌ನನ್ನು ನೂರ್‌ನಗರದ ವಾಸಿಗಳಾದ ಜಮೀರ್ ಪಾಷಾ, ಸೈಯದ್ ಸಲ್ಮಾನ್, ಆಫ್ರಿದ್ ಖಾನ್, ನಜೀರ್‌ಖಾನ್ ಮತ್ತು ಇತರರು ಸೇರಿಕೊಂಡು ಹೊಡೆದಿದ್ದು, ಗಾಯಾಳು ಉಸ್ಮಾನ್‌ನನ್ನು ಕೋಲಾರ ನಗರದ ಎಸ್‌ಎನ್‌ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿದ್ದು, ಕೂಡಲೇ ನನ್ನ ಮಕ್ಕಳಾದ ಶಾಬುದ್ದೀನ್ ಷಾಹೀದ್ ಮತ್ತಿತರರನ್ನು ಕರೆದುಕೊಂಡು ಹೋಗಿ ನೋಡಲಾಗಿ ನನ್ನ ಮಗನನ್ನು ಪರೀಕ್ಷಿಸಿದ ವೈದ್ಯರು ಮೃತಪಟ್ಟಿರುವುದಾಗಿ ತಿಳಿಸಿದರು. ನನ್ನ ಸೊಸೆ ಜಬೀನ್‌ತಾಜ್‌ಗೆ ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದು, ಸಂಬಂಧಿ ಸಿಮ್ರಾನ್ ಎಂಬ ಯುವತಿಯು ಮನೆಗೆ ಬಂದು ಅವಳ ಸೇವೆ ಮಾಡಿ ಹೋಗುತ್ತಿದ್ದಳು. ಆಗ ನನ್ನ ಮಗ ಉಸ್ಮಾನ್ ಹಾಗೂ ಸಿಮ್ರಾನ್ ನಡುವೆ ಪ್ರೀತಿ ಬೆಳೆದು ಇಬ್ಬರು ಮದುವೆಯಾಗುವ ಮಟ್ಟಕ್ಕೆ ಹೋಗಿದ್ದರು. ಈ ವಿಷಯವನ್ನು ತಿಳಿದುಕೊಂಡ ಸಿಮ್ರಾನ್ ರವರ ಮನೆಯವರು ಕಳೆದ ಆರು ತಿಂಗಳ ಹಿಂದೆ ನನ್ನ ಮಗನೊಂದಿಗೆ ಜಗಳ ಮಾಡಿ ಇನ್ನೊಂದು ಸಾರಿ ನಮ್ಮ ಮಗಳ ಜೊತೆ ಮಾತನಾಡುವುದಾಗಲಿ ಅಥವಾ ತಿರುಗಾಡುವುದನ್ನು ನೋಡಿದರೆ ನಿನ್ನನ್ನು ಸಾಯಿಸುವುದಾಗಿ ಧಮಕಿ ಹಾಕಿದ್ದರು. ಇದರ ಜೊತೆಗೆ ಸಿಮ್ರಾನ್‌ಳನ್ನು ಪ್ರೀತಿಸುವ ವಿಚಾರದಲ್ಲಿ ಜಬೀನ್‌ತಾಜ್‌ಳ ಮನೆಯವರು ಈಗ್ಗೆ ಒಂದು ತಿಂಗಳ ಹಿಂದೆ ಜಗಳ ಮಾಡಿಕೊಂಡು ಮಗಳು ಹಾಗೂ ಮೊಮ್ಮಗನನ್ನು ಮನೆಗೆ ಕರೆದುಕೊಂಡು ಹೋಗಿದ್ದರು. ಹೀಗಿರುವಲ್ಲಿ ಜನವರಿ 4ರಂದು ರಾತ್ರಿ ನನ್ನ ಮಗ ಉಸ್ಮಾನ್ ಲವರ್ ಸಿಮ್ರಾನ್ ರವರ ಮನೆಗೆ ಹೋಗಿ ನಾನು ಮತ್ತು ಸಿಮ್ರಾನ್ ಇಬ್ಬರು ಪರಸ್ಪರ ಪ್ರೀತಿಸುತ್ತಿದ್ದು, ಸಿಮ್ರಾನ್‌ರವರನ್ನು ನನಗೆ ಕೊಟ್ಟು ಮದುವೆ ಮಾಡಿ ಕೊಡಬೇಕೆಂತ ಹೇಳಲು ಹೋದಾಗ ರಾತ್ರಿ ಸುಮಾರು 10.30 ಗಂಟೆ ಸಮಯದಲ್ಲಿ ಸಿಮ್ರಾನ್‌ರವರ ಸಂಬಂಧಿಗಳಾದ ನೂರ್‌ನಗರದ ವಾಸಿಗಳಾದ ಪ್ಯಾರೇಜಾನ್‌ರವರ ಮಗ ಆಟೋ ಡ್ರೈವರ್ ಜಮೀರ್‌ಪಾಷ (35), ಸೈಯದ್ ಅತ್ತಾವುಲ್ಲಾರವರ ಮಗ ವ್ಯಾಪಾರ ಮಾಡುವ ಸೈಯದ್ ಸಲ್ಮಾನ್ ಅಲಿಯಾಸ್ ರಾಜ (26), ನಜೀರ್‌ಖಾನ್‌ರವರ ಮಗ ಎಪಿಎಂಸಿ ಟಮೋಟ ಮಾರ್ಕೆಟ್‌ನಲ್ಲಿ ಕೆಲಸ ಮಾಡುವ ಆಫ್ರಿದ್‌ಖಾನ್ ಅಲಿಯಾಸ್ ಅಪ್ಪು (21), ಲೇಟ್ ಅಮೀರ್‌ಜಾನ್‌ರವರ ಮಗ ವೆಲ್ಡಿಂಗ್ ಕೆಲಸ ಮಾಡುವ ನಜೀರ್‌ಖಾನ್ (62) ಸೇರಿದಂತೆ ಅವರ ಮನೆಯವರು ನನ್ನ ಮಗ ಉಸ್ಮಾನ್‌ನನ್ನು ಸಾಯಿಸಬೇಕೆಂಬ ಉದ್ದೇಶದಿಂದ ಅವನ ಮೇಲೆ ಜಗಳ ತೆಗೆದು, ಬಟ್ಟೆಗಳನ್ನು ಹರಿದು ಹಾಕಿ ದೊಣ್ಣೆ ಮತ್ತು ಕಲ್ಲುಗಳು ಸೇರಿದಂತೆ ಇತರ ಆಯುಧಗಳಿಂದ ತಲೆ ಮತ್ತು ಇತರ ಕಡೆಗಳಲ್ಲಿ ಹೊಡೆದು ಗಾಯಗೊಳಿಸಿದ್ದು ಇದರಿಂದ ಉಸ್ಮಾನ್‌ಗೆ ಪ್ರಜ್ಞೆ ತಪ್ಪಿದ್ದು ಜಿಮ್‌ನ ಸ್ನೇಹಿತ ದರ್ಶನ್ ಮತ್ತು ಇತರರು ಸೇರಿಕೊಂಡು ಪೈಲ್ವಾನ್ ಆಟೋದಲ್ಲಿ ಆಸ್ಪತ್ರೆಗೆ ಸಾಗಿಸಿದ್ದು, ಅಲ್ಲಿ ಮಗ ಉಸ್ಮಾನ್ ಮೃತಪಟ್ಟಿರುವುದಾಗಿ ಹೇಳಿದರು. ಉದ್ದೇಶಪೂರ್ವಕವಾಗಿ ಎಲ್ಲರೂ ಸೇರಿಕೊಂಡು ನನ್ನ ಮಗನನ್ನು ಆಯುಧಗಳಿಂದ ಹೊಡೆದು ಸಾಯಿಸಿ ಪರಾರಿಯಾಗಿರುವ ಆರೋಪಿಗಳನ್ನು ಪತ್ತೆ ಮಾಡಿ ಅವರ ಮೇಲೆ ಕಾನೂನು ಕ್ರಮ ಜರುಗಿಸುವಂತೆ ಕೋರಿ ನೀಡಿದ ದೂರಿನ ಮೇರೆಗೆ ಗಲ್‌ಪೇಟೆ ಪೊಲೀಸ್ ಠಾಣೆಯ ಪಿಎಸ್‌ಐ ಅರುಣ್‌ಗೌಡ ಪಾಟೀಲ್‌ರವರು ಪ್ರ. ಸಂಖ್ಯೆ 02/2025 ಕಲಂ 103, 115(2), 118(1) ರೆಡ್‌ವಿತ್ 3(5) ಬಿಎನ್‌ಎಸ್ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ತನಿಖೆಗಾಗಿ ಹಿರಿಯ ಅಧಿಕಾರಿಗಳಿಗೆ ಪ್ರಕರಣದ ವರದಿಯನ್ನು ಸಲ್ಲಿಸಿರುತ್ತಾರೆ. ಸ್ಥಳಕ್ಕೆ ಎಸ್ಪಿ ಬಿ. ನಿಖಿಲ್ ಎಎಸ್ಪಿಗಳಾದ ರವಿಶಂಕರ್, ಜಗದೀಶ್, ಡಿವೈಎಸ್ಪಿ ಎಂ.ಹೆಚ್. ನಾಗ್ತೆ, ಪಿಐ ಎಂ.ಜೆ. ಲೋಕೇಶ್, ಸಿಬ್ಬಂದಿ ವರ್ಗ, ಶ್ವಾನದಳ ಹಾಗೂ ಬೆರಳಚ್ಚು ತಜ್ಞರೊಂದಿಗೆ ಸ್ಥಳಕ್ಕೆ ಹಾಜರಾಗಿ ಪಂಚರಾದ ಖಾಕಿಷಾ ಮೊಹಲ್ಲಾದ ವಾಸಿ ಖಲೀಲ್‌ರವರ ಮಗ ಮರ ಕೆಲಸ ಮಾಡುವ ಮೊಹಮದ್ ಸಲ್ಮಾನ್ (27) ದೂರುದಾರ ಮೃತನ ತಂದೆ ಹಮ್ಸಾ ಹಾಗೂ ಸ್ಥಳೀಯರ ಸಮ್ಮುಖದಲ್ಲಿ ಸ್ಥಳದ ಮಹಜರ್ ನಡೆಸಿದ ಮೇಲೆ ಎಸ್‌ಎನ್‌ಆರ್ ಆಸ್ಪತ್ರೆಯ ಶವಗಾರಕ್ಕೆ ಭೇಟಿ ನೀಡಿ ಮೃತದೇಹದ ತನಿಕೆ ಕೈಗೊಂಡ ಮೇಲೆ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಶವಪರೀಕ್ಷೆ ನಡೆಸಿದ ನಂತರ ಶವವನ್ನು ಮೃತ ಸಂಬಂಧಿಕರಿಗೆ ನೀಡಲಾಯಿತು.


ಇದೇ ರಸ್ತೆಯಲ್ಲಿ ಉಸ್ಮಾನ್‌ನನ್ನು


ಮೃತ ಉಸ್ಮಾನ್‌ನ ಪತ್ನಿ ಜಬೀನ್‌ತಾಜ್ ಹಾಗೂ ಮಗ ಮಹಮದ್ ಆನಸ್


ಉಸ್ಮಾನ್‌ನ ತಂದೆ ಹಮ್ಸಾ

### ಅಟ್ಟಾಡಿಸಿ ಕೊಂದರು

ಉಸ್ಮಾನ್‌ನನ್ನು ಕೊಲೆ ಮಾಡಿ ಪರಾರಿಯಾಗಿರುವ ಆರೋಪಿಗಳ ಪತ್ತೆಗಾಗಿ ಎಸ್ಪಿ ಬಿ. ನಿಖಿಲ್, ಡಿವೈಎಸ್ಪಿ ನಾಗ್ತೆರವರ ಮಾರ್ಗದರ್ಶನದಲ್ಲಿ ಪಿಐ ಎಂ.ಜೆ. ಲೋಕೇಶ್ ರವರ ನೇತೃತ್ವದಲ್ಲಿ ಪಿಎಸ್‌ಐ ಅರುಣ್‌ಗೌಡ ಪಾಟೀಲ್, ಎಎಸ್‌ಐ ಮುನಿವೆಂಕಟಸ್ವಾಮಿ, ಸಿಬ್ಬಂದಿ ವರ್ಗವರಾದ ವಾಸು, ಶಫಿವುಲ್ಲಾ, ರಂಗೇಗೌಡ, ರಾಜಣ್ಣ, ನವಾಜ್ ಪಾಷ, ವಿಠಲ್ ಕುಂಬಾರ, ಕೇಶವಮೂರ್ತಿ, ಮರೇಗೌಡ ಮುಂತಾದವರ ತಂಡವನ್ನು ರಚಿಸಲಾಗಿದ್ದು, ಮೊದಲಿಗೆ ದೂರುದಾರ ಮೃತನ ತಂದೆ ಹಮ್ಸಾ, ಸಾಕ್ಷಿದಾರರಾದ ಮೊಹಮದ್ ಸಲ್ಮಾನ್ ಮತ್ತು ದರ್ಶನ್ ಮುಂತಾದವರಿಂದ ಪ್ರಕರಣಕ್ಕೆ ಸಂಬಂಧಿಸಿದಂತೆ ಹೇಳಿಕೆಗಳನ್ನು ಪಡೆದುಕೊಂಡ ಕ್ರೈಂ ತಂಡವು ಆರೋಪಿಗಳ ಪತ್ತೆಗಾಗಿ ಕ್ರಮ ಕೈಗೊಂಡಿದ್ದು, ಪೊಲೀಸ್ ಬಾತ್ಮೀದಾರರು ನೀಡಿದ ಸುಳಿವಿನ ಮೇರೆಗೆ ಜನವರಿ 6ರಂದು ಬೆಳಿಗ್ಗೆ 8.30 ಗಂಟೆ ಸಮಯದಲ್ಲಿ ಆರೋಪಿ ಎ1 ಜಮೀರ್ ಪಾಷ (35) ಹಾಗೂ ಆರೋಪಿ ಎ2 ಸೈಯದ್ ಸಲ್ಮಾನ್ ಅಲಿಯಾಸ್ ರಾಜ ಇವರನ್ನು ನಗರದ ಅರಹಳ್ಳಿ ಗೇಟ್ ಬಳಿ ಬಂಧಿಸಲಾಯಿತು. ಇದೇ ದಿನ ಮಧ್ಯಾಹ್ನ 2.30 ಗಂಟೆಯಲ್ಲಿ ಆರೋಪಿ ಎ3 ಆಫ್ರಿದ್‌ಖಾನ್ ಅಲಿಯಾಸ್ ಅಪ್ಪು (21) ಹಾಗೂ ಆರೋಪಿ ಎ4 ನಜೀರ್‌ಖಾನವ (62)ರವರನ್ನು ಕೋಲಾರ ತಾಲ್ಲೂಕಿನ ಸಂಗೋಂಡಹಳ್ಳಿಯ ಸಮೀಪ ಇರುವ ಈದ್ಗಾ ಮೈದಾನದ ಬಳಿ ಬಂಧಿಸಿ ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಯಿತು. ಉಸ್ಮಾನ್ ಪತ್ನಿ ಜಬೀನ್‌ತಾಜ್‌ಳಿಗೆ

☞ 12


ಉಸ್ಮಾನ್ ಮನೆ ಮುಂದೆ ಸೇರಿರುವ ಸಂಬಂಧಿಕರು


ಪೊಲೀಸರಿಗೆ ಹೇಳಿಕೆ ನೀಡುತ್ತಿರುವ ಸಾಕ್ಷಿದಾರರು


ಶವಾಗಾರದ ಮುಂದೆ ಸಂಬಂಧಿಕರು ಸೇರಿರುವುದು

**6** ☜

''ಡ್ಯಾಡಿ... ಡ್ಯಾಡಿ... ಇವನ್ಯಾರೋ ಗೊತ್ತಿಲ್ಲ. ನನಗೆ ಟಾರ್ಚರ್ ಮಾಡುತ್ತಿದ್ದಾನೆ. ನೀರು, ತಿಂಡಿ, ಊಟ ಸರಿಯಾಗಿ ಕೊಡುತ್ತಿಲ್ಲ. ಇಲ್ಲಿಗೆ ಬಂದಾಗಲಿಂದ ಈ ರೀತಿ ಹಗ್ಗದಿಂದ ಬಂಧಿಸಿದ್ದಾನೆ.

ನನ್ನಪ್ರಾಣ ತೆಗೆಯುತ್ತಾನೆ. ಡ್ಯಾಡಿ ನನ್ನನ್ನು ಉಳಿಸಿಕೊಳ್ಳಿ. ಈ ನರಕದಲ್ಲಿ ನಾನು ಇರಲಾರೆ. ಅಯ್ಯೋ... ಅಮ್ಮಾ... ನನ್ನಿಂದ ಆಗುತ್ತಿಲ್ಲ... ಆಗುತ್ತಿಲ್ಲ...

ವೀಡಿಯೋ ದೃಶ್ಯ ಕೊನೆಗೊಂಡಿದೆ.

ಅವನು ಫೋನ್ ಮಾಡಲಿಲ್ಲ.

ನರಕಯಾತನೆ ಅನುಭವಿಸುತ್ತಿರುವ ಮಗಳ ಸ್ಥಿತಿ ಕಂಡು ಸಹಿಸಲಾಗುತ್ತಿಲ್ಲ. ಫೋನಿನ ಸಂಭಾಷಣೆ ಮತ್ತು ವೀಡಿಯೋ ಕ್ಲಿಪ್ ಅನ್ನು ಪೊಲೀಸರಿಗೆ ವಾಟ್ಸಾಪ್ ಮಾಡಿದರು.

●●●

ಮಹೇಂದ್ರ ಬಹದ್ದೂರ್ ಫೋನ್ ಮಾಡಿದ್ದಾನೆ. ತಂದೆಯಿಂದ ಈ ಸಂಗತಿ ತಿಳಿದ ಕೂಡಲೇ ಉದ್ವಿಗ್ನನಾದನು.

ಅವನು ಅಸಹಾಯಕನಾಗಿದ್ದಾನೆ!

ಆರ್.ಹೆಚ್. 944... ಇಷ್ಟೇ ಅವಳ ಜಾಡನ್ನು ಹಿಡಿದು ಪತ್ತೆ ಮಾಡಲು ಸಾಧ್ಯ ? ಅವನು ಆರ್.ಹೆಚ್. ಎಂಬ ವರ್ಣಮಾಲೆ ಅಕ್ಷರದಲ್ಲಿ ಪ್ರಾರಂಭ ಮತ್ತು ಮುಕ್ತಾಯ ಆಗುವ ಹೆಸರುಗಳನ್ನು ಅಂದರೆ, ಆ ಊರಲ್ಲಿರುವವರನ್ನು ಶೋಧಿಸುತ್ತಿದ್ದಾರೆ.

ರಮೇಶ್ ಹೆಗಡೆ...!

ಆರ್-ಹೆಚ್.

ಅವನ ಬಗ್ಗೆ ಮಾಹಿತಿ ಸಂಗ್ರಹಿಸಲು ಹೇಳಿದನು. ಎರಡು ಗಂಟೆಗಳಲ್ಲಿ ಎಲ್ಲಾ ತಿಳಿಯಿತು ಎಂದು ಹೇಳಬಹುದು.

ರಮೇಶ ಹೆಗಡೆ ನಿರುದ್ಯೋಗಿ ಬೇಗ ಹಣ ಸಂಪಾದಿಸಲು ಕೆಲವು ಕಡೆ ಕಳ್ಳತನ ಮಾಡಿದ್ದಾನೆ. ಒಂದು ಸಲ ರೆಡ್‌ಹ್ಯಾಂಡ್ ಆಗಿ ಸಿಕ್ಕಿಕೊಂಡು ಒಂದು ವರ್ಷ ಜೈಲು ಶಿಕ್ಷೆ ಅನುಭವಿಸಿ ಬಂದಿದ್ದಾನೆ.

ಅವನನ್ನು ಹಿಡಿದು ತೋಟದ ಮನೇಲಿ ಬಂಧಿಸಲು ಚೇಲಾ ರೌಡಿಗಳಿಗೆ ಹೇಳಿದನು. ಕುಡಿದು ಬಾರ್‌ನಿಂದ ಅಮಲಿರಿಸಿಕೊಂಡು ಬರುತ್ತಿದ್ದ ಅವನನ್ನು ಹಿಡಿದು ಜೀಪಲ್ಲಿ ಹಾಕಿಕೊಂಡು ಹೊರಟರು.

ರಮೇಶ್ ಹೆಗಡೆ- ಆರ್.ಹೆಚ್. ತುಂಬಾ ಗಾಬರಿಯಾಗಿದ್ದಾನೆ ಮತ್ತು ಭಯದಿಂದ ನಡುಗುತ್ತಿದ್ದಾನೆ. ಬಹದ್ದೂರ್ ಕುಟುಂಬದವರು ಎಂತಹ ದುಷ್ಟರು, ಕ್ರೂರಿಗಳು ಎಂಬುದನ್ನು ಕೇಳಿ ತಿಳಿದಿದ್ದನು. ಈಗ ಅವನಿಗೆ ಪ್ರಾಣಭಯ ಉಂಟಾಗಿದೆ.

ತೋಟದ ಮನೆ! ತೋಟದ ಹಾದಿಯಲ್ಲಿ ಅವನನ್ನು ದರದರನೆ ಎಳೆದುಕೊಂಡು ಹೋಗಿ ರೂಮಲ್ಲಿ ತಳ್ಳಿದರು. ಅವನು ತೂರಾಡುತ್ತಾ ಹೋಗಿ ನೆಲದ ಮೇಲೆ ದಬಾಲನೆ ಬಿದ್ದನು. ನಾಲ್ಕು ಮಂದಿ ಚೇಲಾಗಳು ಬಂದು ಅವನನ್ನು ಹಗ್ಗದಿಂದ ಬಂಧಿಸಿದರು. ಸಿಗರೇಟಿನ ಹೊಗೆ ತೇಲಿ ಬಂದಿತು.

ರೂಮಿನಿಂದ ಬರುತ್ತಿದ್ದಾನೆ. ಬಹದ್ದೂರ್ ಮಹೇಂದ್ರ...! ಆ ಕುಟುಂಬದ ಯಜಮಾನರ ಮಗ...! ಅವನು ಅದೆಂತಹ ಕ್ರೂರಿ ಎಂಬುದು ಜನಗಳಿಗೆ ತಿಳಿದಿದೆ. ಆದರೆ ಅವರ್‍ಯಾರೂ ಪ್ರತಿಭಟಿಸೋಲ್ಲ.

ಆ ಶಕ್ತಿ ಅವರಿಗಿಲ್ಲ!

ರಮೇಶ ಹೆಗಡೆ ''ಏ... ನನ್ನನ್ನು ಯಾಕೆ... ಯಾಕೆ ಬಂಧಿಸಿದ್ದೀರ? ನಾನು ನಿಮಗೇನೂ ಅಪಚಾರ ಮಾಡಿಲ್ಲ'' ಎಂದನು.

ಸಿಗರೇಟ್ ಅನ್ನು ಎಸೆದು ಈಗ ಹತ್ತಿರ ಬಂದು ಅವನ ಎದೆಯ ಮೇಲೆ ಈ ಬೂಟುಕಾಲಿನಿಂದ ಅದುಮುತ್ತಾ ''ನನ್ನ ಅಕ್ಕ ನೀಲಿಮನನ್ನು ಎಲ್ಲಿ ಬಂಧಿಸಿದ್ದೀಯ ಅಂತ ಹೇಳು'' ಎಂದು ಕರ್ಕಶವಾಗಿ ಕೇಳಿದನು.

ಅವನು ಗಾಬರಿಯಿಂದ ''ಸಾರ್... ಸಾರ್... ನೀವೇನು ಕೇಳುತ್ತಿದ್ದೀರ. ನೀಲಿಮಾ ಅವರ ಸಂಗತಿ ನನಗೆ ಗೊತ್ತಿಲ್ಲ.''

ಮರುಕ್ಷಣದಲ್ಲಿ ಅಲ್ಲಿರುವ ನಾಲ್ಕು ಮಂದಿ ಚೇಲಾಗಳು ಅಡ್ಡಾದಿಡ್ಡಿ ಚಚ್ಚಿದರು.

ಅವನು ನೋವಿನಿಂದ ಕಿರುಚಿದನು.

''ಏ... ನನ್ನ ಅಕ್ಕನ ಮೊಬೈಲ್‌ನಲ್ಲಿ ಆರ್.ಹೆಚ್. ಎಂಬ ಹೆಸರಿದೆ. ಅವಳನ್ನ ಕಿಡ್ನಾಪ್ ಮಾಡಿರೋದು ನೀನು. ಕಮಾನ್.... ಅವಳನ್ನು ಎಲ್ಲಿದ್ದಾಳೆ ಅಂತ ಹೇಳು. ಅವಳನ್ನು ನನಗೆ ಒಪ್ಪಿಸಿದರೆ ಇಪ್ಪತ್ತೈದು ಲಕ್ಷ ಕೊಡ್ತೀನಿ. ಎಲ್ಲಾ ಅಂದ್ರೆ ಈಗಲೇ ನಿನ್ನ ಪ್ರಾಣ ತೆಗೆಯುತ್ತೀನಿ.''

ಅವನು ನರಳುತ್ತಿದ್ದಾನೆ.

ನರಳುತ್ತಲೇ ಮಾತಾಡುತ್ತಿದ್ದಾನೆ.

''ಸಾರ್... ಆರ್.ಹೆಚ್. ಯಾರು? ನಿಮ್ಮ ಅಕ್ಕನ ಮೊಬೈಲ್‌ಗೆ ಆರ್.ಹೆಚ್. ಎಂಬ ಹೆಸರಿನಿಂದ ಯಾಕೆ ಕಾಲ್ ಬಂದಿದೆ? ನಾನು ಕಿಡ್ನಾಪ್ ಮಾಡಿದ್ದರೆ ಆ ಮೇಡಂಗೆ ಫೋನ್ ಮಾಡುತ್ತಿರಲಿಲ್ಲ. ಆ ರೀತಿ ಮಾಡಿದರೆ ಸಿಕ್ಕಿಕೊಳ್ಳುತ್ತೇನೆ ಅಂತ ಗೊತ್ತಿದೆ. ನಾನು ಕಳ್ಳತನ ಮಾಡಿರಬಹುದು. ಆದರೆ ನಿಮ್ಮ ಅಕ್ಕನನ್ನು ಕಿಡ್ನಾಪ್ ಮಾಡುವ ಧೈರ್ಯ, ಶಕ್ತಿ ನನಗಿಲ್ಲ.''

ಮಹೇಂದ್ರ ಬಹದ್ದೂರ್‌ಗೆ ಇವನ ಈ ಮಾತುಗಳು ಸರಿ ಎಂದು ಅನಿಸುತ್ತಿದೆ.

ರಮೇಶ ಹೆಗಡೆ ''ಸಾರ್... ಸತ್ಯ ತಿಳಿಯಬೇಕಾದರೆ ನೀಲಗಿರಿ ಗುಡ್ಡಕ್ಕೆ ಹೋಗಿ ನೀವು ಸತ್ಯ ತಿಳಿದು ಬರುವತನಕ ನಾನು ಇಲ್ಲೇ ಇರುತ್ತೇನೆ. ನನಗೆ ಚೆನ್ನಾಗಿ ಕುಡಿಯಲು, ತಿನ್ನ ಕೊಡಿ. ನೀವು ಬಂದು ಎಚ್ಚರಗೊಳಿಸಲು ಒಂದು ಬಕೇಟ್ ನೀರನ್ನು ಎರಚಿ'' ಎಂದಾಗ ಮಹೇಂದ್ರ ಬಹದ್ದೂರ್ ಚೇಲಾಗಳಿಗೆ ಸಂಜ್ಞೆ ಮಾಡಿದನು. ಅವರು ಅದೇ ರೀತಿ ಮಾಡಿದನು. ಎಲ್ಲಾ ಓಕೆ ಆಗಿದೆ.''

ಇಬ್ಬರು ಚೇಲಾಗಳನ್ನು ರಮೇಶ ಹೆಗಡೆಯ ಕಾವಲಿಗೆ ನೇಮಿಸಿ, ಉಳಿದವರೊಂದಿಗೆ ಈಗ ಕಾರಲ್ಲಿ ಹೊರಟನು.

ನೀಲಗಿರಿ ಗುಡ್ಡ ಹತ್ತುತ್ತಿದ್ದಾರೆ.

●●●

ಭಯ, ಆತಂಕಗೊಂಡಿರುವ ರಾಜಾ ಬಹದ್ದೂರ್ ಅವರಿಗೆ ಕಿಡ್ನಾಪರ್ ಫೋನ್ ಮಾಡಿದನು.

''ಮಿಸ್ಟರ್ ಬಹದ್ದೂರ್ ನಿನ್ನ ಮಗಳಿಗೆ ಟಾರ್ಚರ್ ಪ್ರಾರಂಭ ಮಾಡಿಲ್ಲ. ಅವಳ ಶೀಲದ ತಂಟೆಗೆ ಹೋಗಲಾರೆ. ಆದರೆ ಪ್ರಾಣ ಉಳಿಸಲಾರೆ.

''ನೀನ್ಯಾಕೆ ಕಿಡ್ನಾಪ್ ಮಾಡಿದ್ದೀಯ? ನಿನಗೆ ಏನು ಬೇಕು?''

''ಹಣ... ತುಂಬಾ ಹಣ. ಶ್ರೀಮಂತರ ಮಕ್ಕಳನ್ನ ಕಿಡ್ನಾಪ್ ಮಾಡೋದು ಹಣಕ್ಕಾಗಿ ಅಂತ ನಿನಗೆ ಗೊತ್ತಿಲ್ವ?''

ಅವರಿಂದ ಉತ್ತರ ಬರಲಿಲ್ಲ.

''ಹಣ ಕೊಡಲು ಇಷ್ಟ ಇಲ್ವ? ಪರವಾಗಿಲ್ಲ ಬಿಡು. ನಿನ್ನ ಮಗಳ ಮುದ್ದಾದ ಮುಖವನ್ನು ಬ್ಲೇಡ್‌ನಿಂದ ಶೇವ್ ಮಾಡ್ತೀನಿ. ಆ ದೃಶ್ಯದ ವೀಡಿಯೋ ಕ್ಲಿಪ್ ಕಳಿಸುತ್ತೀನಿ.''

ಅವರು ಗಾಬರಿಯಾದರು.

ಭೀತರಾಗಿ ಕೂಗಿಕೊಂಡರು.

'ಬೇಡ... ಬೇಡ... ನನ್ನ ಮಗಳಿಗೆ ತೊಂದರೆ ಮಾಡ್ಬೇಡ... ಹಿಂಸೆ ಮಾಡ್ಬೇಡ.''

''ಹಣ ಕೊಡುತ್ತೀಯ?''

''ಆಗಲಿ ಕೊಡುತ್ತೀನಿ.''

''ಎಪ್ಪತ್ತೈದು ಲಕ್ಷ ಬೇಕು.''

''ಏನಂದೆ... ಎಪ್ಪತ್ತೈದು ಲಕ್ಷನಾ... ನಾನು ಶ್ರೀಮಂತ ನಿಜ. ಆದರೆ ಅಷ್ಟೊಂದು ಹಣ ಇಲ್ಲ.''

ಅವನು ಕೆಟ್ಟ ರೀತಿ ನಗಾಡಿದನು.

''ನಿನ್ನ ಹತ್ತಿರ ಹಣ ಇಲ್ಲ ಅಲ್ವ?''

''ಇಪ್ಪತ್ತೈದು ಲಕ್ಷ ಕೊಡ್ತೀನಿ.''

''ಓಕೆ ಗುಡ್ ಬೈ. ಪ್ರತಿದಿವಸ ನಿನ್ನ ಮಗಳ ಒಂದೊಂದೇ ಅಂಗಗಳನ್ನು ಕತ್ತರಿಸಿ ವಿಡಿಯೋ ಕ್ಲಿಪ್ ಕಳುಸ್ತೀನಿ.''

ಆ ಕ್ಷಣದಲ್ಲಿ ಬದಲಾದರು.

''ಆಗಲಿ ನೀನು ಕೇಳಿದಷ್ಟು ಕೊಡ್ತೀನಿ.''

ಹಣವನ್ನು ಎಲ್ಲಿಗೆ, ಯಾವಾಗ, ಯವ ರೀತಿ ತರಬೇಕು ಎಂದು ಹೇಳುತ್ತಿದ್ದಾನೆ.

ಸಂಭಾಷಣೆ ರೆಕಾರ್ಡ್ ಆಗುತ್ತಿದೆ.

ಪೊಲೀಸರಿಗೆ ಫಾರ್‌ವರ್ಡ್ ಮಾಡಿದರು.

●●●

ಮಹೇಂದ್ರ ಬಹದ್ದೂರ್ ಮತ್ತು ಉಳಿದವರು ಆ ಬೆಟ್ಟ ಹತ್ತಿದರು. ಬೃಹದಾಕಾರದ ಬಂಡೆಗಳಿವೆ. ಮತ್ತೊಂದು ಕಡೆ ಪ್ರಪಾತ ಇದೆ. ವಿಶ್ರಾಂತಿಗಾಗಿ ಕಲ್ಲಿನ ಮಂಟಪ ಇದೆ. ಪ್ರಕೃತಿ ಸೌಂದರ್ಯ ರಮಣೀಯವಾಗಿರುವ ಆ ಗುಡ್ಡದ ಎಲ್ಲಾ ಕಡೆ ನೋಡುತ್ತಿರುವಾಗ ಕಂಡು ಬಂದಿತು ದೃಶ್ಯ ! ಬಂಡೆಗಳ ಮೇಲೆ ಕಲ್ಲಿನಿಂದ ಕುಟ್ಟಿ ಹೆಸರುಗಳನ್ನು ಕೆತ್ತಲಾಗಿದೆ.

ನೀಲಿಮಾ - ಆರ್.ಹೆಚ್.

ರಾಮಚಂದ್ರ ಹೆಗಡೆ

ನೀಲಿಮಾ ಲವ್ಸ್ ಆರ್.ಹೆಚ್. ಹೆಗಡೆ!

ಅರ್ಧ ಸತ್ಯ ತಿಳಿದಿದೆ.

ಆರ್.ಹೆಚ್... ಆರ್.ಹೆಚ್. ಅಂದರೆ ರಾಮಚಂದ್ರ ಹೆಗಡೆ.... ಯಾರು... ಯಾರವರು?

ಅವನ ಜೊತೆ ಚೇಲಾಗಳಲ್ಲಿ ಒಬ್ಬ ಆ ಕ್ಷಣಗಳಲ್ಲಿ ''ಸಾರ್... ಅವನ್ಯಾರು? ಎಲ್ಲಿದ್ದಾರೆ ಅಂತ ನನಗೆ ಗೊತ್ತಾಗಿದೆ'' ಎಂದು ಕೂಗಿಕೊಂಡನು.

''ಯಾರು... ಯಾರವನು?''

ಆ ಚೇಲಾ ಹೇಳುತ್ತಿದ್ದಾನೆ.

ಮಹೇಂದ್ರ ಬಹದ್ದೂರ್ ಮುಖ ಅರಳಿತು... ಕಣ್ಣುಗಳು ಮಿನುಗಿದವು. ಕ್ರೌರ್ಯ ತುಂಬಿರುವ ಶೀತಲ ನಗು ಮೂಡುತ್ತಿದೆ.

●●●

ಫೋನ್ ಕಾಲ್ ಬಂದಿತು! ಕಿಡ್ನಾಪರ್ ಮಾಡಿದ್ದಾನೆ.

''ಮಿಸ್ಟರ್... ರಾಜ ಬಹದ್ದೂರ್, ನೀನೊಬ್ಬನೇ ಬರಬೇಕು. ನಿನ್ನನ್ನು ಯಾರಾದರೂ ಫಾಲೋ ಮಾಡಿದರೆ ಅಥವಾ ಪೊಲೀಸರು ಬುದ್ಧಿವಂತಿಕೆ ಆಟ ಆಡಿದರೆ ನಿನ್ನ ಮಗಳು ತುಂಬಾ ಕ್ರೂಯಲ್ ಆಗಿ ಸಾಯುತ್ತಾರೆ. ಬುದ್ಧಿವಂತಿಕೆ ತೋರಿಸಬೇಡ. ಬೀಕೇರ್‌ಫುಲ್. ನೀನು ಕಾರಲ್ಲಿ ಹೈವೆ ಸರ್ಕಲ್ ಹತ್ತಿರ ಬಾ. ನಾನು ಫೋನ್ ಮಾಡ್ತೀನಿ. ಹಣದ ಸೂಟ್‌ಕೇಸ್‌ಗಳನ್ನು ಎಲ್ಲಿಡಬೇಕು ಅಂತ ಹೇಳ್ತೀನಿ. ನಾನು ಯಾವಾಗ, ಯಾವ ರೀತಿ ಹಣದ ಸೂಟ್‌ಕೇಸ್ ತಗೋತೀನಿ ಅಂತ ನೀನು ಗೆಸ್ ಮಾಡಲಾರೆ. ಐಯಾಮ್ ಸೋ ಸಾರಿ... ಪೊಲೀಸರು ಬಲೆ ಬೀಸಿದರೆ ನಿನ್ನ ಮಗಳಿಗೆ ತೊಂದರೆ ಆಗುತ್ತದೆ. ನೀನು ಕೊಟ್ಟಿರುವ ಹಣ ಸರಿಯಾಗಿದ್ದರೆ ನಿನ್ನ ಮಗಳು ಮನೆಗೆ ಕಳುಸ್ತೀನಿ. ಮತ್ತೊಮ್ಮೆ ಹೇಳುವ ಅಗತ್ಯ ಇಲ್ಲ'' ಎಂದು ಹೇಳಿ ಫೋನ್ ಲಿಂಕ್ ಕಟ್ ಮಾಡಿದನು.

ಕೋಟಿ... ಕೋಟಿಗಳನ್ನು ಮಾಡಿರುವ ಈ ಶ್ರೀಮಂತ ಉದ್ಯಮಿ ಮತ್ತು ರಾಜಕೀಯ ಕೃಪೆ ಇರುವ ಇವನಿಗೆ ಕೇವಲ ಇಪ್ಪತ್ತೈದು ಲಕ್ಷ ಹಣ ಮುಖ್ಯವೇ ಅಲ್ಲ. ಹಾಗಾಗಿ ಹಣದ ಸೂಟ್‌ಕೇಸ್ ರೆಡಿಯಾಯಿತು.

ಮಗನಿಗೂ ಸಹ ಹೇಳದೆ ಹಣದ ಸೂಟ್‌ಕೇಸ್‌ಗಳನ್ನು ಕಿಡಾನಪರ್‌ಗೆ ತಲುಪಿದರು.

●●●

ಟೆನ್‌ಷನ್ ಜಾಸ್ತಿ ಆಗಿದೆ.

ಒಂದು ದಿನ ಕಳೆದಿದೆ.

ಹಣ ತಲುಪಿಸಿ ಇಪ್ಪತ್ತನಾಲ್ಕು ಗಂಟೆಗಳಾಗಿದ್ದರೂ ಸಹ ಇವನು... ಇವನು ನೀಲಿಮಳನ್ನು ಮನೆಗೆ ಕಳಿಸಲಿಲ್ಲ.

ಫೋನ್ ಮಾಡಿದರು. ಸೇವೆ ಕಡಿತಗೊಂಡಿದೆ ಎಂಬ ಉತ್ತರ ಬಂದಿತು. ಇದೇ ತಲೆ ಬಿಸಿ ಆಗಿದೆ.

ಈಗ ಏನು ಮಾಡೋದು?

ಮಗ ಮಹೇಂದ್ರ ಬಹದ್ದೂರ್‌ಗೆ ವಿಷಯ ತಿಳಿಸಿದರು.

ಅವನು ಕೋಪದಿಂದ ಕೂಗಾಡಿದನು. ''ನನಗೆ ವಿಷಯ ತಿಳಿಸದೆ ನೀವ್ಯಾಕೆ ಹಣ ಕೊಡುವ ಮೂರ್ಖ ಕೆಲಸ ಮಾಡಿದ್ರಿ. ಅವನು ಪುನಹ ಹೆದರಿಸಿ ಹಣ ಕೇಳಿದರೆ ಏನು ಮಾಡ್ತೀರ?''

ರಾಜಾ ಬಹದ್ದೂರ್ ಚಡಪಡಿಸುತ್ತಿದ್ದಾರೆ. ಯಾಕೆ ಹೀಗಾಗಿದೆ! ಅವರ ಮಗನ ಕೋಪ ಕಡಿಮೆ ಆಗಿಲ್ಲ. ಹತ್ತಾರು ರೌಡಿಗಳನ್ನು ಕಳಿಸಿ ಅಕ್ಕ ನೀಲಿಮ ಮತ್ತು ಕಿಡಾನಪರ್‌ನ ಪತ್ತೆ ಮಾಡಲು ಹೇಳಿದರು.

●●●

ಮತ್ತೊಂದು ದಿನ ಕಳೆಯಿತು.

ಬೆಳಗಿನ ಎಂಟು ಗಂಟೆ. ಪೊಲೀಸ್ ಸ್ಟೇಷನ್‌ನಿಂದ ರಾಜಾ ಬಹದ್ದೂರ್ ಅವರಿಗೆ ಫೋನ್ ಕಾಲ್ ಬಂದಿತು.

ಶಾಕ್... ಡಬ್ಬಲ್ ಶಾಕಿಂಗ್ ನ್ಯೂಸ್. ರಾಜಾ ಬಹದ್ದೂರ್ ತತ್ತರಿಸುತ್ತಿದ್ದಾರೆ. ನಿಂತಲ್ಲೇ ತೂರಾಡುತ್ತಿದ್ದಾರೆ.

ಹತ್ತಿರದಲ್ಲೇ ಇದ್ದ ಮಗ ಮತ್ತು ಸಂಬಂಧಿಕರು ಅವರನ್ನು ನೆಲಕ್ಕೆ ಬೀಳದಂತೆ ಹಿಡಿದುಕೊಂಡರು. ಇಂತಹ ದುರಂತ ನಡೆಯುತ್ತದೆ ಎಂದುಕೊಂಡಿರಲಿಲ್ಲ.

ನೀಲಗಿರಿ ಗುಡ್ಡದಲ್ಲಿ ಕೊಲೆ... ಕೊಲೆ ನಡೆದಿದೆ.

ಪ್ರೇಮಿಗಳ ಹತ್ಯೆ ನಡೆದಿದೆ! ಪ್ರಖ್ಯಾತ ಉದ್ಯಮಿಯ ಮಗಳು ನೀಲಿಮ ಮತ್ತು ಅವಳ ಪ್ರಿಯತಮ ರಾಮಚಂದ್ರ ಹೆಗಡೆ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೊಲೆ ಎಂದು ಎಲ್ಲರೂ ತಿಳಿದುಕೊಂಡಿದ್ದರು. ಆ ರೀತಿ ಸುದ್ದಿ ಗಾಳಿ ವೇಗದಲ್ಲಿ ಎಲ್ಲಾ ಕಡೆ ಪ್ರಸಾರ ಆಗಿದೆ. ಆದರೆ ಪೊಲೀಸರು ಮತ್ತು ಡಾಕ್ಟರ್ ಬಂದು ಪರೀಕ್ಷೆ ಮಾಡಿದಾಗ ಸತ್ಯ ಅನಾವರಣಗೊಂಡಿತು.

ನೀಲಿಮಳ ತಂದೆ-ತಾಯಿ, ತಮ್ಮ ಮತ್ತು ಸಂಬಂಧಿಕರು, ಪೊಲೀಸ್ ಸಿಬ್ಬಂದಿ ಮತ್ತು ಹತ್ತಾರು ಹಳ್ಳಿಗಳಿಂದ ಜನಗಳು ಬಂದಿದ್ದಾರೆ. ಅವರಿಬ್ಬರು ತಬ್ಬಿಕೊಂಡು ಮಲಗಿರುವ ರೀತಿ ಬಿದ್ದಿದ್ದಾರೆ...!

ಮುಖದಲ್ಲಿ ನೀಲಿಛಾಯೆ ಇದೆ! ಶವಗಳಿರುವ ಬಲಭಾಗದಲ್ಲಿ ಎರಡು ಅಡಿ ದೂರದಲ್ಲಿ ಕಂಡು ಬರುತ್ತಿದೆ ವಿಷದ ಸೀಸೆಗಳು. ಆದರೆ ಪ್ರೇಮಿಗಳಲ್ಲಿ ಯಾರೊಬ್ಬರೂ ಸಹ ಅಂತಿಮ ಪತ್ರವನ್ನು ಬರೆದಿರಲಿಲ್ಲ.

ಸುದ್ದಿ ಮಾಧ್ಯಮದವರು ವಿಷಯ ಸಂಗ್ರಹಿಸಿ ಅಬ್ಬರದ ರೀತಿಯಲ್ಲಿ ಪ್ರಸಾರ ಮಾಡುತ್ತಿದ್ದಾರೆ. ಪೊಲೀಸ್ ಅಧಿಕಾರಿ ಭುವನೇಶ್ ಶ್ರೀಮಂತ ರಾಜಾ ಬಹದ್ದೂರ್ ಕಿಡ್ನಾಪ್ ಮಾಡಿರುವ ಸಂಗತಿ ಮತ್ತು ಹಣಕ್ಕಾಗಿ ಪೀಡಿಸುತ್ತಿರುವ ಸಂಗತಿಯನ್ನು ಮಾತ್ರ ಹೇಳಿದ್ದರು. ಆದರೆ... ಆದರೆ ಎಪ್ಪತ್ತೈದು ಲಕ್ಷ ಹಣವನ್ನು ಬ್ಲಾಕ್‌ಮೇಲರ್‌ಗೆ ಕೊಟ್ಟಿದ್ದ ಸಂಗತಿಯನ್ನು ಹೇಳಿರಲಿಲ್ಲ. ಈಗ ಅವರ ಬಗ್ಗೆ ವಿಚಾರಣೆ ಮಾಡಿದಾಗ ನಿಜ ಹೇಳಲಿಲ್ಲ. ತಾವು ಕಿಡಾನಪರ್‌ಗೆ ಹಣ ಕೊಟ್ಟಿಲ್ಲ ಎಂದು ಸುಳ್ಳು ಹೇಳಿದ್ದರು.

ಪೊಲೀಸ್ ಅಧಿಕಾರಿ ಶವಗಳನ್ನು ತುಂಬಾ ಸೂಕ್ಷ್ಮವಾಗಿ ಗಮನಿಸುತ್ತಿದ್ದಾಗ ನೀಲಿಮಳ ಶವದ ಮುಷ್ಠಿ ಬಿಗಿದಿರುವುದು ಕಂಡು ಹತ್ತಿರ ಹೋಗಿ ಓಪನ್ ಮಾಡಿದನು.

ಉಂಗುರ... ಗಂಡಸರು ಧರಿಸುವ ಬಲು ಸೊಗಸಾದ ಮತ್ತು ಲಾಕೇಟ್ ಇರುವ ಸರ ಇದೆ. ಅದರ ಮೇಲೆ ಕರ್ಚಿಫ್ ಹಾಕಿಕೊಂಡು ಬಿಡಿಸಿ ನೋಡಿದನು.

**NEELIMA** ಎಂಬ ಅಕ್ಷರಗಳಿವೆ ಮತ್ತು ಲಾಕೆಟ್‌ನಲ್ಲಿ ಅವಳ ಫೋಟೋ ಇದೆ.

ಪಿ.ಸಿ. ಯೊಬ್ಬ ಹತ್ತಿರ ಬಂದು ತುಂಬಾ ಮೆಲ್ಲಗೆ ''ಸಾರ್... ಅಲ್ಲಿ ನೋಡಿ'' ಎಂದು ಮರದ ಕಡೆ ಕೈ ತೋರಿಸಿದನು.

ಮೊಬೈಲ್ ಹ್ಯಾಂಡ್ ಸೆಟ್ ಬಿದ್ದಿದೆ! ಚುರುಕಾಗಿ ಪರಿಶೀಲನೆ ನಡೆಯುತ್ತಿದೆ. ಎಲ್ಲರ ಬೆರಳು ಗುರುತುಗಳನ್ನು ಪಡೆಯಲಾಗಿದೆ. ವಿಷದ ಸೀಸೆಯನ್ನು ಲ್ಯಾಬ್ ಟೆಸ್ಟ್‌ಗೆ ಕಳಿಸಲಾಗಿದೆ.

●●●

ಕೊಲೆಗಾರನನ್ನು ಪೊಲೀಸರು ಅರೆಸ್ಟ್ ಮಾಡಿದರು...!

ಮಹೇಂದ್ರ... ಬಹದ್ದೂರ್ ಮಹೇಂದ್ರ... ನೀಲಿಮಳ ತಮ್ಮ ಕೊಲೆಗಾರ...

ಶವದ ಮುಷ್ಠಿಯಲ್ಲಿದ್ದ ಲಾಕೇಟ್ ಸರವನ್ನು ನೀಲಿಮ ತನ್ನ ತಮ್ಮನ ಬರ್ತ್‌ಡೇಗೆ ಪ್ರೆಸೆಂಟ್ ಮಾಡಿದ್ದಳು. ವಿಷದ ಸೀಸೆಯ ಮೇಲೆ ಅವನ ಬೆರಳು ಗುರುತುಗಳು ಮೂಡಿರೋದು ವರದಿಯಾಗಿದೆ. ಅದರೊಂದಿಗೆ ಅವನ ಮೊಬೈಲ್ ಹ್ಯಾಂಡ್ ಸೆಟ್ ಸಿಕ್ಕಿದೆ. ಅವನನ್ನು ಬಂಧಿಸಿ ತನಿಖೆ ಮಾಡಿದರು.

ಕೊಲೆಗೆ ಕಾರಣ ದುರಾಸೆ!

ಎಲ್ಲಾ ಆಸ್ತಿ ತನಗೇ ಬರಲಿ ಎಂಬ ದುರಾಸೆಯಿಂದ ಕೊಲೆ ಮಾಡಿದ್ದನು. ಇವಳ ನಿಜವಾದ ಪ್ರೇಮಿ ರಾಮಚಂದ್ರ ಹೆಗಡೆ ಮತ್ತು ನೀಲಿಮ ಸೇರಿ ಕಿಡ್ನಾಪಿಂಗ್ ಆಟ ಆಡಿದ್ದರು. ಬಡವ ಮತ್ತು ಬೇರೆ ಜಾತಿಯ ರಾಮಚಂದ್ರ ಹೆಗಡೆ ಜೊತೆ ಮದುವೆ ಮಾಡೋಲ್ಲ. ವಿವಾಹವಾದ ನಂತರ ಶ್ರೀಮಂತಿಕೆಯ ವೈಭವದಿಂದ ಬದುಕಲು ತುಂಬಾ ಹಣ ಬೇಕು. ಇವರಿಬ್ಬರು ಸೇರಿ ಕಿಡ್ನಾಪಿಂಗ್ ನಾಟಕ ಆಡಿದ್ದರು. ಈ ರಹಸ್ಯ ಪತ್ತೆ ಮಾಡಿದ್ದ ಮಹೇಂದ್ರ ಬಹದ್ದೂರ್ ಅಕ್ಕ ಮತ್ತು ಅವಳ ಪ್ರಿಯತಮ ಇರುವ ಜಾಗ ಪತ್ತೆ ಮಾಡಿ, ಎಪ್ಪತ್ತೈದು ಹಣ ಕಿತ್ತುಕೊಂಡು ಅವರಿಬ್ಬರನ್ನು ನೀಲಗಿರಿ ಗುಡ್ಡಕ್ಕೆ ಅಪಹರಿಸಿಕೊಂಡು ಬಂದು ವಿಷ ಕುಡಿಸಿದ್ದನು. ಪ್ರೇಮಿಗಳು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಸನ್ನಿವೇಶ ಸೃಷ್ಟಿ ಮಾಡಲು ಪ್ರಯತ್ನಿಸಿ ವಿಫಲನಾಗಿದ್ದನು.

☯

# ಸಿಂಧನೂರು: ಎಂಟು ವರ್ಷದಿಂದ ಪ್ರೀತಿಸುತ್ತಿದ್ದ ಪ್ರಿಯತಮೆಯ ಕತ್ತು ಕುಯ್ದು ಬರ್ಬರ ಕೊಲೆ!



ಕೊಲೆ ಮಾಡಿದ ಕಿರಾತಕ ಮೊಬಿನ್

ಎಮ್ಮೆಸ್ಸಿ ಮೆಥಮೆಟಿಕ್ಸ್ ಓದುತ್ತಿದ್ದ ಶಿಫಾ (23)ಕೊಲೆಯಾದ ದುರ್ದೈವಿ... ಪ್ರೀತಿ ಪ್ರೇಮ ಅನ್ನೋದು ಪುಸ್ತಕದ ಬದನೆಕಾಯಿ ಅಂತ ಅದೆಷ್ಟೋ ಸಿನೆಮಾಗಳಲ್ಲಿ ಹೇಳಿ ಯುವಜನಾಂಗಕ್ಕೆ ಹೇಳುತ್ತಲೇ ಇದ್ದಾರೆ. ಆದರೆ ಪ್ರೀತಿ ಅನ್ನೋ ಮಾಯಾ ಜಾಲದಲ್ಲಿ ಸಿಲುಕಿದ್ದವರ ಪಾಡು ಮಾತ್ರ ಘೋರ, ಘನ ಘೋರ. ಪ್ರೀತಿ ಅನ್ನೋ ಮಾಯಾ





ಕೊಲೆಯಾದ ಶಿಫಾ

ಜಿಂಕೆ ಏನು ಬೇಕಾದರೂ ಮಾಡಿಸಿಯೇ ಬಿಡುತ್ತೆ. ಆ ಕ್ಷಣ, ಆ ಒಂದು ಕ್ಷಣ ಕೋಪ ಇಡೀ ಬದುಕನ್ನೇ ನರಕ ಮಾಡಿ ಬಿಡುತ್ತೆ ಅನ್ನೋದಕ್ಕೆ ಈ ಪ್ರಕರಣ ಸಾಕ್ಷಿ. ಇನ್ನು ಹಂತಕ ತನಿಖೆ ವೇಳೆ ಮೃತಳ ಜೊತೆಗಿನ ಲವ್ ಸ್ಟೋರಿ ರಿವೀಲ್ ಮಾಡಿದ್ದಾನೆ.

ಬೇರೆಯವರೊಡನೆ ಪ್ರೀತಿಯಲ್ಲಿ ಬಿದ್ದಿದ್ದಾಳೆ ಎಂದು ಕೊಲೆ ಮಾಡಿದ ಮೊಬಿನ್ ಕೊಲೆಗೈದು ನೇರವಾಗಿ ಲಿಂಗಸುಗೂರು ಪೊಲೀಸ್ ಠಾಣೆಯಲ್ಲಿ ಶರಣಾಗತಿ. ರಾಜ್ಯದಲ್ಲಿ ಇಂದು ಬೆಚ್ಚಿ ಬೀಳಿಸುವ ಘಟನೆ ನಡೆದಿದ್ದು, ಎಂಟು ವರ್ಷಗಳಿಂದ ಪ್ರೀತಿಸಿದ್ದ ಪ್ರಿಯತಮೆಯನ್ನೇ ನಡು ರಸ್ತೆಯಲ್ಲೇ ಕತ್ತು ಸೀಳಿ ಭೀಕರವಾಗಿ ಕೊಲೆ ಮಾಡಿದ್ದಾನೆ. ಅಷ್ಟೇ ಅಲ್ಲ ನೇರವಾಗಿ ಪೊಲೀಸ್ ಠಾಣೆಗೆ ಬಂದು ನಾನೇ ಕೊಲೆ ಮಾಡಿದ್ದೇನೆ ಎಂದು ಶರಣಾಗಿದ್ದಾನೆ. ಇಷ್ಟಕ್ಕೂ ಇಬ್ಬರ ಮಧ್ಯ ಆಗಿದ್ದಾದ್ರು ಏನು ಅಂತೀರಾ ಈ ಸ್ಟೋರಿ ನೋಡಿ...

ಹೌದು ರಾಯಚೂರು ಜಿಲ್ಲೆಯ ಸಿಂಧನೂರು ನಗರದ ಹೊರವಲಯದಲ್ಲಿ, ಈ ಒಂದು ಭೀಕರ ಹತ್ಯೆ ನಡೆದಿದೆ. ಸಿಂಧನೂರು ಸರಕಾರ ಮಹಾವಿದ್ಯಾಲಯದಲ್ಲಿ ಎಂಎಸ್ಸಿ ಫಸ್ಟ್ ಇಯರ್‌ನಲ್ಲಿ ಓದುತ್ತಿದ್ದ 23 ವರ್ಷದ ಶೀಫಾ(23) ಕೊಲೆಯಾದ ದುರ್ದೈವಿ. ಮೃತ ಶಿಫಾ ಮತ್ತು ಕೊಲೆ ಮಾಡಿರುವ ಮೊಬಿನ್ ಇಬ್ಬರೂ ಕೂಡ ಕಳೆದ ಎಂಟು ವರ್ಷಗಳಿಂದ ಪರಸ್ಪರ ಪ್ರೀತಿಸುತ್ತಿದ್ದರು. ಇಬ್ಬರೂ ಇತ್ತೀಚಿಗೆ ಇವರಿಬ್ಬರ ಪ್ರೀತಿಯಲ್ಲಿ ಬಿರುಕು ಬಿಟ್ಟಿತ್ತು ಎಂದು ಹೇಳಲಾಗುತ್ತಿದೆ. ಮತ್ತೋರ್ವ ಯುವಕನ ಜೊತೆ ಪ್ರೀತಿಯಲ್ಲಿ ಬಿದ್ದಿದ್ದಳು. ಅದೆಷ್ಟೇ ಬುದ್ಧಿ ಹೇಳಿದರು ಕೂಡ ನನ್ನ ಮಾತು ಕೇಳಲಿಲ್ಲ. ಪ್ರತಿನಿತ್ಯ ಲಿಂಗಸಗೂರಿನಿಂದ ಸಿಂಧನೂರು ಕಾಲೇಜಿಗೆ ಬರುತ್ತಿದ್ದಳು. ಎಂದಿನಂತೆ ಸಿಂಧನೂರಿಗೆ ಆಗಮಿಸಿದ್ದಳು. ಇಂದು ಪ್ರಿಯತಮೆಯ ಮನವೊಲಿಸಲು ಮೊಬೀನ್ ಶೀಫಾ ಜೊತೆ ಬಂದಿದ್ದ ಎನ್ನಲಾಗುತ್ತಿದೆ. ಆದರೆ ಅದೆಷ್ಟೇ ಬುದ್ಧಿ ಹೇಳಿದರೂ ಮಾತು ಕೇಳಲಿಲ್ಲ ಎಂಬ ಕಾರಣಕ್ಕೆ ಕತ್ತು ಸೀಳಿ ಕೊಲೆಗೈದು, ಲಿಂಗಸುಗೂರು ಪೊಲೀಸ್ ಠಾಣೆಗೆ ಹೋಗಿ ತಾನೇ ಕೊಲೆ ಮಾಡಿರುವುದಾಗಿ ಶರಣಾಗಿದ್ದಾನೆ ಮೊಬಿನ್. ಎಂಟು ವರ್ಷಗಳಿಂದ ಪ್ರೀತಿಸುತ್ತಿದ್ದ ಇವರ ಪ್ರೀತಿಯಲ್ಲಿ ಬಿರುಕು ಬಿಟ್ಟಿದ್ದು, ಶೀಫಾ ಮತ್ತೋರ್ವ ಹುಡುಗನನ್ನ ಪ್ರೀತಿಸುತ್ತಿದ್ದು ಬೇಡ ಎಂದು ಅದೆಷ್ಟೋ ಮನವೊಲಿಸಿದರೂ ನನ್ನ ಮಾತು ಕೇಳಿರಲಿಲ್ಲ, ಹಾಗಾಗಿ ಇಂದು ಸಿಂಧನೂರಿಗೆ ಹೋಗಿ ಮನವೊಲಿಸುವ ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ, ಹಾಗಾಗಿ ಕೊಲೆ ಮಾಡಿದ್ದೇನೆ ಎಂದು ಕೊಲೆ ಮಾಡಿದ ಸ್ಥಳದಿಂದ ಮತ್ತೆ ಲಿಂಗಸುಗೂರಿಗೆ ತೆರಳಿ ಪೊಲೀಸ್ ಠಾಣೆಯಲ್ಲಿ ಶರಣಗತಿಯಾಗಿದ್ದಾನೆ ಮತ್ತು ತಾನೇ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ಇನ್ನು ಮಾಹಿತಿ ತಿಳಿಯುತ್ತಿದ್ದಂತೆ ಸಿಂಧನೂರು ಟೌನ್ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿ ಮೃತಳ ಪಾಲಕರಿಗೆ ಮಾಹಿತಿ ನೀಡಿದ್ದಾರೆ. ಇನ್ನು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ.




ಎಸ್ಪಿ ಪುಟ್ಟಮಾದಯ್ಯ



ಸಿಪಿಐ ವೀರಾರೆಡ್ಡಿ

ಒಟ್ಟಾರೆಯಾಗಿ ಟ್ರಯಾಂಗಲ್ ಲವ್ ಸ್ಟೋರಿಯಲ್ಲಿ ಕುಳಿತು ಮಾತನಾಡಿಕೊಂಡು ಬಗೆಹರಿಸಿಕೊಳ್ಳಬೇಕಾಗಿದ್ದ ವಿಚಾರ ಕೊಲೆಯಲ್ಲಿ ಅಂತ್ಯಯಾಗಿದೆ. ಎಂಟು ವರ್ಷಗಳ ಪ್ರೀತಿಸಿ ತಾಳ್ಮೆ ಕಳೆದುಕೊಂಡ ಪ್ರಿಯಕರ ಜೈಲು ಸೇರಿದರೆ, ಬಾಳಿ ಬದುಕಬೇಕಾದ ಪ್ರಿಯತಮೆ ಸ್ಮಶಾನ ಸೇರಿದ್ದಾಳೆ. ಇತ್ತ ಮಗಳನ್ನು ಕಳೆದುಕೊಂಡ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

**-ವೀರನಗೌಡ**








# ಐನಾತಿ ಕಳ್ಳರಿಬ್ಬರ ಬಂಧನ

7 ☜

ಸಿಪಿಐ ಶ್ರೀಶೈಲ ಬ್ಯಾಕೋಡರ ಮುಂದೆ ಹಾಜರುಪಡಿಸಿತು. ವಿಚಾರಣೆ ಕಾಲಕ್ಕೆ ಕಾಗಕ್ಕ-ಗುಬ್ಬಕ್ಕನ ಕಥೆ ಹೇಳಲು ಬಂದ ಐನಾತಿಗಳು ತಾವು ಮಾಡಿದ ಕೌಜಲಗಿ ಮತ್ತು ಕಲಾರಕೊಪ್ಪದ ಮನೆಗಳ್ಳತನಗಳನ್ನು ಒಪ್ಪಿಕೊಂಡರು. ಕಳ್ಳರನ್ನು ಜೈಲಿಗಟ್ಟಲಾಗಿದೆ.

**ಕಳ್ಳರಿಬ್ಬರಿಂದ 9.60 ಲಕ್ಷ ರೂ.**
**ಸ್ವತ್ತು ವಶಕ್ಕೆ...**

ಬಂಧಿತ ಕಳ್ಳರಾದ ಓಂಕಾರ ದಯಾನಂದ ಜಾಧವನ ತಂದೆ ತೀರಿಕೊಂಡಿದ್ದು, ಮನೆಯಲ್ಲಿ ತಾಯಿ ಇದ್ದಾಳೆ. ಈತ ಉಂಡಾಡಿಗುಂಡನಾಗಿ ರಾಘವೇಂದ್ರ, ರಾಮು ರೇವಣಕರ ಸ್ನೇಹ ಬೆಳೆಸಿದ್ದನು. ರಾಘವೇಂದ್ರ ತಂದೆ-ತಾಯಿ ಇಲ್ಲದೇ ಏಕಾಂಗಿಯಾಗಿ ಕಳ್ಳತನಕ್ಕೆ ಇಳಿದಿದ್ದನು. ಇವರಿಬ್ಬರಿಂದ 113 ಗ್ರಾಂ ಚಿನ್ನಾಭರಣ ಹಾಗೂ ಕಳ್ಳತನಕ್ಕೆ ಬಳಸಿದ ಆಟೋ ಸೇರಿದಂತೆ 9.60 ಲಕ್ಷ ರೂ.ಗಳ ಸ್ವತ್ತನ್ನು ವಶಪಡಿಸಿದ್ದಾರೆ. ಕುಲಗೋಡದ ಪೊಲೀಸರು.

**ಶ್ಲಾಘನೆ...**

ಗ್ರಾಮೀಣ ಪ್ರದೇಶದ ಮುಗ್ಧ ಜನರ ಪಾಲಿಗೆ ಕಂಟಕರಾಗಿದ್ದ ಕಳ್ಳರನ್ನು ಬಂಧಿಸುವಲ್ಲಿ ಯಶಸ್ವಿ ಕಾರ್ಯಾಚರಣೆ ನಡೆಸಿದ ಸಿಪಿಐ ಶ್ರೀಶೈಲ ಬ್ಯಾಕೋಡ, ಪಿಎಸ್‌ಐಗಳಾದ ಆನಂದ ಬಿ., ಉತ್ರೇಶ್ವರ ಮತ್ತು ಸಿಬ್ಬಂದಿಗಳನ್ನು ಡಿವೈಎಸ್ಪಿ ಡಿ.ಹೆಚ್. ಮುಲ್ಲಾ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್., ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಶ್ಲಾಘಿಸಿದ್ದಾರೆ.

☯



ಬಂಧಿತ ಕಳ್ಳರಿಂದ ವಶಪಡಿಸಿಕೊಂಡ ಚಿನ್ನಾಭರಣದೊಂದಿಗೆ ಕುಲಗೋಡ ಪೊಲೀಸರು

# ಹೆಣ್ಣು ಕೇಳಿದಕ್ಕೆ ಹರಿಯಿತು ಬಾಡಿ ಬಿಲ್ಡರ್‌ನ ನೆತ್ತರು!

9 ☞
ಕಿಡ್ನಿ ವಿಫಲವಾಗಿದ್ದರಿಂದ ಸಿಮ್ರಾನ್ ಅವರ ಮನೆಗೆ ಹೋಗಿ ಸೇವೆ ಮಾಡಿ ಬರುತ್ತಿದ್ದಳು. ಮನೆಗೆ ಬಂದು ಹೋಗುವಾಗ ಪರಸ್ಪರ ಇಬ್ಬರು ಲವ್ ಮಾಡುತ್ತಿದ್ದರು. ಸಿಮ್ರಾನ್, ಉಸ್ಮಾನ್‌ನನ್ನು ಮದುವೆ ಮಾಡಿಕೊಳ್ಳುವಂತೆ ಒತ್ತಾಯಿಸುತ್ತಿದ್ದಳು. ಆದರೆ ಸಿಮ್ರಾನ್‌ಳನ್ನು ಮದುವೆ ಮಾಡಿಕೊಳ್ಳಲು ಪತ್ನಿ ಹಾಗೂ ಅವರ ಮನೆಯವರು ಒಪ್ಪಿರಲಿಲ್ಲ. ಈ ವಿಷಯವಾಗಿ ಪೊಲೀಸ್ ಠಾಣೆಗೆ ಕರೆಸಿ ವಮಾನ ಮಾಡಿ ಕಳುಹಿಸಿದ್ದರು. ಇದೇ ಸಂದರ್ಭದಲ್ಲಿ ಉಸ್ಮಾನ್‌ಗೆ ಹೆಣ್ಣು ಕೊಡುವುದಿಲ್ಲವೆಂದು ಹೇಳಿ ಬಂದಿದ್ದೆವು. ಆದರೆ ಅವನು ಜನವರಿ 4ರಂದು ರಾತ್ರಿ ಎಲ್ಲರೂ ಮಲಗಿರುವ ಹೊತ್ತಿನಲ್ಲಿ ಬಂದು ಬಾಗಿಲು ತಟ್ಟಿದನು. ಆಗ ಬಾಗಿಲು ತೆಗೆದು ರಾತ್ರಿ ಇಷ್ಟು ಹೊತ್ತಿನಲ್ಲಿ ಯಾಕೆ ಬಂದಿರುವೆ ಎಂದು ಕೇಳಿದಕ್ಕೆ ಸಿಮ್ರಾನ್‌ಳನ್ನು ಮದುವೆ ಮಾಡಿಕೊಡುವಂತೆ ಕೇಳಿದನು. ಅದಕ್ಕೆ ನಾವು ಹೆಂಡತಿ, ಮಗುವಿರುವ ನಿನಗೆ ನಮ್ಮ ಮಗಳನ್ನು ಕೊಟ್ಟು ಮದುವೆ ಮಾಡುವುದಿಲ್ಲವೆಂದು ಹೇಳಿದಕ್ಕೆ ಉಸ್ಮಾನ್ ನೀವು ಮೊದಲು ಮದುವೆಗೆ ಒಪ್ಪಿದ್ದೀರಿ, ಈಗ ಉಲ್ಟಾ ಹೊಡೆಯುತ್ತಿದ್ದೀರಿ. ನೀವು ಏನೇ ಹೇಳಿದರೂ ಸಿಮ್ರಾನ್‌ಳನ್ನು ಮದುವೆಯಾಗದೆ ಬಿಡುವುದಿಲ್ಲವೆಂದು ನಮ್ಮ ಜೊತೆ ಚಾಲೆಂಜ್ ಮಾಡಿದನು. ಈಗಾಗಲೇ ಪೊಲೀಸ್ ಠಾಣೆಯಲ್ಲಿ ಜಬೀನ್‌ತಾಜ್‌ಳ ಮನೆಯವರಿಂದ ಸಾಕಷ್ಟು ಅವಮಾನವಾಗಿದೆ. ಇದೀಗ ನೀನು ಬೇರೆ ನಮಗೆ ಸವಾಲ್ ಹಾಕುತ್ತಿರುವೆ. ಇದು ಎಂದಿಗೂ ಫೋನ್ ಮಾಡಿ ಮನೆಗೆ ಕರೆಸಿಕೊಂಡೆವು. ಉಸ್ಮಾನ್ ಮದುವೆ ಮಾತನಾಡಿ ಇಲ್ಲವಾದರೆ ನನ್ನನ್ನು ಬಿಟ್ಟು ಕಳುಹಿಸಿ ಎಂದು ಹೇಳಿ ನಮ್ಮ ಮೇಲೆ ಹಲ್ಲೆಮಾಡಲು ಮುಂದಾದನು. ಆಗ ನಮ್ಮಲ್ಲಿದ್ದ ಒಬ್ಬನು ಹಗ್ಗ ತಂದು ಅವನ ಕೈಗಳನ್ನು ಕಟ್ಟಲು ಮುಂದಾದನು. ಆಗ ನಮ್ಮಲ್ಲಿದ್ದ ಒಬ್ಬನು ಹಗ್ಗ ತಂದು ಅವನ ಕೈಗಳನ್ನು ಕಟ್ಟಲು ಮುಂದಾದನು. ತಕ್ಷಣ ಉಸ್ಮಾನ್ ನಮ್ಮಿಂದ ತಪ್ಪಿಸಿಕೊಂಡು ಬೀದಿ ಕಡೆ ಓಡಿದನು. ಆಗ ನಾವೆಲ್ಲರು ದೊಣ್ಣೆಗಳನ್ನು ತೆಗೆದುಕೊಂಡು ನಮ್ಮ ಮನೆಗೆ ಚೋರ್ ಬಂದಿದ್ದಾನೆ ಚೋರ್ ಎಂದು ಕೂಗುತ್ತಾ ಅವನ ಹಿಂದೆಯೇ ಹೋಗಿ ಹಿಡಿದುಕೊಳ್ಳಲು ಹೋದಾಗ ಅವನ ಶರ್ಟ್ ಹರಿದು ಹೋಗಿದ್ದು, ಅರೆಬೆತ್ತಲೆಯಲ್ಲಿಯೇ ರಸ್ತೆಯಲ್ಲಿ ಓಡುತ್ತಿರುವಾಗ ರಸ್ತೆಯ ಅಕ್ಕಪಕ್ಕದಲ್ಲಿನ ಮನೆಗಳಲ್ಲಿನ ಕೆಲವು ಜನರು ನಮ್ಮ ಜೊತೆ ಸೇರಿಕೊಂಡು ಉಸ್ಮಾನ್‌ನನ್ನು ಹಿಂಬಾಲಿಸಿದರು. ಆಗ ನಾವುಗಳು ಕಲ್ಲುಗಳನ್ನು ತೆಗೆದುಕೊಂಡು ಹುಚ್ಚುನಾಯಿಯನ್ನು ಹೊಡೆಯುವಂತೆ ಅವನ ಮೇಲೆ ಕಲ್ಲುಗಳನ್ನು ಬೀಸಿದ್ದೆವು. ಒಂದು ಕಲ್ಲು ಅವನ ತಲೆಯ ಹಿಂಭಾಗಕ್ಕೆ ಬಿದ್ದು ರಕ್ತ ಸುರಿಯಲು ಪ್ರಾರಂಭಿಸಿತು. ಸ್ವಲ್ಪ ದೂರು ಹೋಗುತ್ತಿದ್ದಂತೆ ನೆಲದ ಮೇಲೆ ಅಂಗಾತ ಬಿದ್ದುಬಿಟ್ಟನು. ಇದೇ ಸರಿಯಾದ ಸಮಯವೆಂದು ದೊಣ್ಣೆ, ಕಲ್ಲುಗಳಿಂದ ಹೊಡೆದೆವು. ಅವನು ಪ್ರಜ್ಞೆ ಕಳೆದುಕೊಂಡು ಸುಮ್ಮನೆ ಮಲಗಿಬಿಟ್ಟನು. ದೊಣ್ಣೆ, ಕಲ್ಲುಗಳ ಏಟಿನಿಂದ ಗಾಯಗಳಾಗಿ ರಕ್ತ ಸುರಿಯುತ್ತಿದ್ದು, ಯಾರಾದರೂ ಇವನನ್ನು ಆಸ್ಪತ್ರೆಗೆ ಸೇರಿಸಿದರೆ ಬದುಕುತ್ತಾನೆಂದು ತಿಳಿದು ನಾವುಗಳೆಲ್ಲ ಅಲ್ಲಿಂದ ಹೊರಟುಬಿಟ್ಟೆವು. ನಂತರ ಮಧ್ಯರಾತ್ರಿ ಎಸ್‌ಎನ್‌ಆರ್ ಆಸ್ಪತ್ರೆಯಲ್ಲಿ ಉಸ್ಮಾನವ ಮೃತಪಟ್ಟಿರುವ ಬಗ್ಗೆ ತಿಳಿಯಿತು. ಕೋಪದಲ್ಲಿ ಹಲ್ಲೆಮಾಡಿ ಸಾಯಿಸಿದ್ದು ತಪ್ಪಾಗಿರುತ್ತದೆಂದು ತಿಳಿಸಿದರು. ಹೇಳಿಕೆ ಪಡೆದ ನಂತರ ನಾಲ್ಕು ಜನ ಆರೋಪಿಗಳನ್ನು ಕೃತ್ಯ ನಡೆಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ಮಹಜರ್ ನಡೆಸಿದ ಮೇಲೆ ಕೃತ್ಯಕ್ಕೆ ಉಪಯೋಗಿಸಿದ್ದ ದೊಣ್ಣೆ ಮತ್ತು ಕಲ್ಲುಗಳನ್ನು ಆರೋಪಿಗಳು ತೆಗೆದುಕೊಟ್ಟಿದ್ದು, ಪಂಚರ ಸಮಕ್ಷಮದಲ್ಲಿ ವಶಕ್ಕೆ ಪಡೆದ ಮೇಲೆ ನ್ಯಾಯಾಂಗ ಬಂದನಕ್ಕೆ ಒಪ್ಪಿಸಲಾಗಿದೆ. ಕಿಡ್ನಿ ವಿಫಲವಾಗಿ ಸಾವಿನೊಂದಿಗೆ ಸೆಣಸಾಡುತ್ತಿರುವ ಪತ್ನಿ ಹಾಗೂ ನಾಲ್ಕು ವರ್ಷದ ಮಗನೊಂದಿಗೆ ಸುಖೀ ಜೀವನ ನಡೆಸಬೇಕಾದ ಬಾಡಿ ಬಿಲ್ಡರ್, ಪ್ರೀತ್ಸೆ... ಪ್ರೀತ್ಸೆ ಎಂದು ಯುವತಿಯ ಹಿಂದೆ ಬಿದ್ದು ಸಾವು ತಂದುಕೊಂಡನು. ಹೆಣ್ಣು ಕೊಡಿ ಎಂದು ಭಾವಿ ಮಾವನ ಮನೆಗೆ ಬಂದ ಉಸ್ಮಾನ್‌ನನ್ನು ಅಟ್ಟಾಡಿಸಿಕೊಂಡು ಹೋಗಿ ಕೊಂದ ನಾಲ್ವರು ಬಾವಂದಿರು ಜೈಲಿನಲ್ಲಿ ಮುದ್ದೆ ಮುರಿಯುವಂತಾಯಿತು.


ವಿವಿಧ ಸ್ಟೈಲ್‌ನಲ್ಲಿ ಉಸ್ಮಾನ್


ಮೃತ ಉಸ್ಮಾನ್‌ನ ಲವರ್

# ಬಿಜೆಪಿ ಉದ್ಧಾರ ಆಗಲ್ಲ!

2 ☞
ಯಾವಾಗ ವಿಜಯೇಂದ್ರ ಅಧ್ಯಕ್ಷರಾದರೋ ಬಸವನಗೌಡ ಯತ್ನಾಳ್ ನಿಗಿನಿಗಿ ಕೆಂಡವಾಗಿ ಬಿಟ್ಟರು. ಇದಾದ ಬಳಿಕ ಲೋಕಸಭಾ ಚುನಾವಣೆ ನಡೆಯಿತು. ಈ ವೇಳೆ ಟಿಕೆಟ್ ವಿಚಾರಕ್ಕೆ ಹಿರಿಯ ನಾಯಕ ಕೆ.ಎಸ್.ಈಶ್ವರಪ್ಪ ಪಕ್ಷದಿಂದ ಹೊರ ಹೋದರು. ಒಂದಷ್ಟು ಜಟಾಪಟಿಗಳ ನಂತರ 2019ರ ಲೋಕಸಭಾ ಚುನಾವಣೆಗೆ ಹೋಲಿಸಿದರೆ, 2024 ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಸಾಧನೆಯೇನೂ ಕಾಣಲಿಲ್ಲ.

ಈ ಹಿಂದೆ ನಡೆದ ವಿಧಾನಸಭಾ ಉಪಚುನಾವಣೆಯಲ್ಲಿಯೂ ಕಳಪೆ ಸಾಧನೆ ಮಾಡಿತು. ಅಷ್ಟರಲ್ಲಾಗಲೇ ಬಿಜೆಪಿಯ ಭಿನ್ನಮತ ಗಡಿದಾಟಿ ಹೋಗಿತ್ತು. ಹೈಕಮಾಂಡ್ ಮಧ್ಯಪ್ರವೇಶ ಮಾಡಿದರೂ ಪ್ರಯೋಜನವಾಗಲಿಲ್ಲ, ಯತ್ನಾಳ್ ನೇತೃತ್ವದ ಅಸಮಾಧಾನಿತರ ತಂಡಕ್ಕೆ ಸೇರ್ಪಡೆಗೊಳ್ಳುವವರ ಸಂಖ್ಯೆಯೂ ಹೆಚ್ಚಾಯಿತು. ವಕ್ಫ್ ವಿರುದ್ಧದ ಹೋರಾಟ ನಡೆಸುವ ಮೂಲಕ ತಮ್ಮ ಶಕ್ತಿ ಪ್ರದರ್ಶನವನ್ನು ಯತ್ನಾಳ್ ಟೀಮ್ ಮಾಡುವ ಮೂಲಕ ವಿಜಯೇಂದ್ರ ಟೀಮ್ ಗೆ ಟಾಂಗ್ ನೀಡಿತು. ವಿಜಯೇಂದ್ರ ಪರವಾಗಿ ರೇಣುಕಾಚಾರ್ಯ, ಕಟ್ಟಾ ಸುಬ್ರಹ್ಮಣ್ಯ ಸೇರಿದಂತೆ ಒಂದಷ್ಟು ಜನ ಮಾತನಾಡಿದರೂ ಉಳಿದಂತೆ ಘಟಾನುಘಟಿಗಳು, ಹಿರಿಯ ನಾಯಕರು ಹೀಗೆ ಎಲ್ಲರೂ ಮೌನಕ್ಕೆ ಜಾರಿದ್ದು ತಟಸ್ಥರಾಗಿದ್ದರು.

ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ಕೆಳಗಿಳಿಸಬೇಕೆಂಬ ಹೋರಾಟ ಒಂದು ಕಡೆಯಾದರೆ ಮತ್ತೊಂದು ಕಡೆ ಅವರ ಕಾರ್ಯವೈಖರಿಗೆ ತಟಸ್ಥರಾಗಿದ್ದವರೇ ಸಿಡಿದೇಳುವಂತಾಗಿದೆ. ಯಾರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ತಾವೇ ಮಾಡುತ್ತಿರುವ ತೀರ್ಮಾನಗಳು ಪಕ್ಷದೊಳಗೆ ಕಿಡಿ ಹೊತ್ತಿಸುತ್ತಿವೆ. ಕೋಲಾರ ಜಿಲ್ಲೆಯಲ್ಲಿ ಅದರಲ್ಲೂ ಚಿಕ್ಕಬಳ್ಳಾಪುರದಲ್ಲಿ ಬಾವುಟ ಕಟ್ಟಲು ಪಕ್ಷಕ್ಕೆ ಜನರಿಲ್ಲದ ಕಾಲದಲ್ಲಿ ಧೈರ್ಯ ಮಾಡಿ ಬಿಜೆಪಿಗೆ ಒಂದು ಪಕ್ಷವನ್ನು ಗೆಲ್ಲಿಸಿಕೊಂಡಿದ್ದ ಡಾ.ಕೆ. ಸುಧಾಕರ್ ಅವರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸೋಲು ಕಂಡಿದ್ದರೂ ಲೋಕಸಭಾ ಚುನಾವಣೆಯಲ್ಲಿ ಗೆದ್ದು ಬಂದಿದ್ದರು.

ಇದುವರೆಗೆ ತಮ್ಮ ಪಾಡಿಗೆ ತಾವು ಎಂಬಂತಿದ್ದ ಸುಧಾಕರ್ ಇದೀಗ ವಿಜಯೇಂದ್ರ ವಿರುದ್ಧ ತಿರುಗಿ ಬಿದ್ದಿದ್ದಾರೆ. ಜಿಲ್ಲಾಧ್ಯಕ್ಷರ ಆಯ್ಕೆ ವೇಳೆ ತಮ್ಮನ್ನು ಒಂದೇ ಒಂದು ಮಾತು ಕೇಳದೆ ತಮ್ಮದೇ ವಿರುದ್ಧ ಕೆಲಸ ಮಾಡಿದವರಿಗೆ ಜಿಲ್ಲಾಧ್ಯಕ್ಷ ಸ್ಥಾನ ನೀಡಿರುವುದಕ್ಕೆ ಬಹಿರಂಗ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಅತ್ತ ದಾವಣಗೆರೆಯಲ್ಲಿಯೂ ಇಂತಹದ್ದೇ ಪರಿಸ್ಥಿತಿ ನಿರ್ಮಾಣವಾಗಿದೆ. ವಿಜಯೇಂದ್ರರ ವಿರುದ್ಧ ಪಕ್ಷದೊಳಗೆ ಆಕ್ರೋಶಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಇದರ ಪರಿಣಾಮ ಒಂದೇ ಮನೆ ಹತ್ತು ಬಾಗಿಲು ಎನ್ನುವಂತಾಗಿದೆ.

ಬಿಜೆಪಿಯಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಗಮನಿಸಿದರೆ ಬಿ.ವೈ. ವಿಜಯೇಂದ್ರ ಅವರು ರಾಜ್ಯಾಧ್ಯಕ್ಷರಾಗಿ ಇರುವ ತನಕ ಪಕ್ಷದಲ್ಲಿನ ಗೊಂದಲಗಳು ಬಗೆಹರಿಯುವ ಲಕ್ಷಣಗಳು ಕಾಣಿಸುತ್ತಿಲ್ಲ. ಭಿನ್ನಮತೀಯ ನಾಯಕರ ಪ್ರಮುಖ ಬೇಡಿಕೆ ಅವರನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ಇಳಿಸುವುದೇ ಆಗಿರುವುದರಿಂದ ಅದು ಈಡೇರುವ ತನಕ ಅವರು ಸುಮ್ಮನಿರುವುದಿಲ್ಲ. ಒಂದು ವೇಳೆ ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಿಂದ ಇಳಿಸಿದ ತಕ್ಷಣ ಎಲ್ಲವೂ ಸರಿ ಹೋಗುತ್ತಾ? ಖಂಡಿತಾ ಇಲ್ಲ... ಇದೆಲ್ಲವನ್ನು ಗಮನಿಸಿದರೆ ಏನೇ ತಿಪ್ಪರಲಾಗ ಹಾಕಿದರೂ ರಾಜ್ಯ ಬಿಜೆಪಿಯಲ್ಲಿ ಒಗ್ಗಟ್ಟು ತರುವುದು ಕಷ್ಟವೇ.. ಹೀಗಿದ್ದ ಮೇಲೆ ರಾಜ್ಯದಲ್ಲಿ ಬಿಜೆಪಿ ಉದ್ಧಾರವಾಗುವುದು ಕಷ್ಟವೇ..

# ಅನೈತಿಕ ಸಂಬಂಧಕ್ಕೆ ಹೆಣ ಬೀಳುತ್ತಿದೆ!

3 ☞
ವಾಗಿದೆ. ಇಲ್ಲಿ ತನ್ನ ಅನೈತಿಕ ಸಂಬಂಧಕ್ಕೆ ಗಂಡ ಅಡ್ಡಿಯಾಗಿದ್ದಾನೆ ಎಂಬ ಕಾರಣಕ್ಕೆ ಗಂಡನನ್ನು ಕೊಂದು ಕಪಿಲ ನದಿಗೆ ಎಸೆದು ಬಳಿಕ ನಾಪತ್ತೆಯ ನಾಟಕವಾಡಿದ ಹೆಂಡತಿ ಪೊಲೀಸರ ತನಿಖೆ ವೇಳೆ ಸಿಕ್ಕಿ ಬಿದ್ದಿದ್ದಾಳೆ. ಇದು ಚಾಮರಾಜನಗರ ಚಾಮರಾಜನಗರ ತಾಲೂಕಿನ ಜನ್ನೂರು ಗ್ರಾಮದಲ್ಲಿ ನಡೆದಿದೆ.

ಕುದೇರು ಪೊಲೀಸ್ ಠಾಣೆಗೆ ತೆರಳಿದ ಜನ್ನೂರು


ಪೊಲೀಸ್ ಕಸ್ಟಡಿಯಲ್ಲಿ ಆರೋಪಿ ಗೀತಾ

ಗ್ರಾಮದ ರಮೇಶ್ ಎಂಬಾತನ ಪತ್ನಿ ಗೀತಾ ಎಂಬಾಕೆ ತನ್ನ 45 ವರ್ಷದ ಗಂಡ ರಮೇಶ್ ನಾಪತ್ತೆಯಾಗಿದ್ದು ಆತನನ್ನು ಹುಡುಕಿಕೊಡುವಂತೆ ದೂರು ನೀಡಿದ್ದಳು. ದೂರು ದಾಖಲಿಸಿಕೊಂಡ ಪೊಲೀಸರು ಮುಂದಿನ ಕ್ರಮ ಕೈಗೊಳ್ಳುವ ಭರವಸೆ ನೀಡಿ ಕಳುಹಿಸಿದ್ದರು. ನಿಜ ಹೇಳಬೇಕೆಂದರೆ ಗೀತಾ ಮತ್ತು ರಮೇಶ್‌ಗೆ ಮದುವೆಯಾಗಿ ಹಲವು ವರ್ಷಗಳೇ ಕಳೆದಿದ್ದವು. ಈ ದಂಪತಿಗೆ ಇಬ್ಬರು ಮಕ್ಕಳಿದ್ದರು.

ಈ ನಡುವೆ ಗೀತಾಳಿಗೆ ಗುರುಪಾದಸ್ವಾಮಿ ಎಂಬಾತನೊಂದಿಗೆ ಅನೈತಿಕ ಸಂಬಂಧ ಬೆಳೆದಿತ್ತು. ಗಂಡ ಇವರ ಸಂಬಂಧಕ್ಕೆ ಅಡ್ಡಿಯಾಗಿದ್ದನು. ಹೀಗಾಗಿ ಗಂಡನನ್ನು ಮುಗಿಸಿದರೆ ಪ್ರಿಯಕರ ಗುರುಪಾದಸ್ವಾಮಿ ಜತೆ ಜಾಲಿಯಾಗಿರಬಹುದೆಂದು ಗೀತಾ ನಂಬಿದ್ದಳು ಅದರಂತೆ ಪ್ರಿಯಕರನ ಜತೆ ಸೇರಿ ಗಂಡನಿಗೆ ಮುಹೂರ್ತ ಫಿಕ್ಸ್ ಮಾಡಿದ್ದಳು. ಅದರಂತೆ ಜ.14ರಂದು ಗೀತಾ ತನ್ನ ಪ್ರಿಯಕರ ಗುರುಪಾದಸ್ವಾಮಿ ಜೊತೆ ಸೇರಿ ರಮೇಶ್‌ನನ್ನು ಕೊಲೆ ಮಾಡಿ ಆ ಬಳಿಕ ಮೃತದೇಹವನ್ನು ಕುಪ್ಪೆಗಾಲ ಬಳಿಯ ಕಪಿಲ ನದಿಯಲ್ಲಿ ಎಸೆದು ಬಂದಿದ್ದರು.

ಇದಾದ ನಂತರ ತಮ್ಮ ಮೇಲೆ ಯಾವುದೇ ಅನುಮಾನ ಬರಬಾರದೆಂದು ಜ.21 ರಂದು ಕುದೇರು ಠಾಣೆಗೆ ತೆರಳಿ ನಾಪತ್ತೆ ದೂರು ದಾಖಲಿಸಿದ್ದಳು. ದೂರಿನಲ್ಲಿ ಜ.14 ರಂದು ರಾತ್ರಿ ಹೊರ ಹೋಗಿದ್ದು ವಾಪಸ್ಸು ಬಂದಿಲ್ಲ. ಆಗಾಗ್ಗೆ ಹೊರಗೆ ಹೋಗುತ್ತಿದ್ದು ವಾಪಸ್ಸು ಬರುತ್ತಿದ್ದರು. ಆದರೆ, ಅಂದು ರಾತ್ರಿ ಹೋದವರು ಬಂದಿಲ್ಲ ಎಂದು ದೂರಿನಲ್ಲಿ ಈಕೆ ಹೇಳಿಕೆ ದಾಖಲಿಸಿದ್ದಳು.

ನಾಪತ್ತೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಆರಂಭಿಸಿದ್ದರು. ಗ್ರಾಮದವರ ಮಾಹಿತಿ ಆಧರಿಸಿ ಗೀತಾಳನ್ನು ವಿಚಾರಣೆ ಮಾಡಿದ ಪೊಲೀಸರಿಗೆ ಗೀತಾಳ ಮೇಲೆ ಅನುಮಾನ ಬಂದಿತ್ತು. ಅಲ್ಲದೆ ಆಕೆಗೆ ಅನೈತಿಕ ಸಂಬಂಧವಿರುವುದು ಗೊತ್ತಾಗಿತ್ತು. ಹೀಗಾಗಿ ಆಕೆಯನ್ನು ಪೊಲೀಸ್ ಭಾಷೆಯಲ್ಲಿ ವಿಚಾರಣೆ ನಡೆಸಿದಾಗ ಆಕೆ ಕೊಲೆ ಮಾಡಿರುವ ವಿಚಾರವನ್ನು ಒಪ್ಪಿಕೊಂಡಿದ್ದಾಳೆ. ಸದ್ಯ ಇಬ್ಬರನ್ನು ಪೊಲಿಸರು ಬಂಧಿಸಿದ್ದಾರೆ. ಅಲ್ಲದೆ ಹೊಳೆಗೆ ಎಸೆದಿದ್ದ ಶವವನ್ನು ಹೊರತೆಗೆದು ಮರಣೋತ್ತರ ಪರೀಕ್ಷೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ. ಗೀತಾ ತನ್ನ ಪ್ರಿಯಕರನ ಜತೆಯಲ್ಲಿ ಜೈಲು ಪಾಲಾಗಿದ್ದಾಳೆ. ಮಕ್ಕಳಿಬ್ಬರು ಅನಾಥರಾಗಿದ್ದಾರೆ.

## ಪಾತಕ ಪ್ರಪಂಚ

# ಅವಳಿಗೆ ಮದುವೆ ಕ್ರೇಜ್

ಈ ದೇಶದಲ್ಲಿ ಮಾತ್ರವಲ್ಲ ಇನ್ನಿತರ ದೇಶಗಳಲ್ಲಿ ಸಹ ವಿಚಿತ್ರ-ವಿಲಕ್ಷಣ ಮನೋಭಾವದ ಮತ್ತು ಅಸಹಜ ಆಸೆ-ಬಯಕೆಗಳು ಗಂಡಸರಿಗೆ ಮಾತ್ರವಲ್ಲ ಹೆಂಗಸರಿಗೂ ಇರುತ್ತದೆ. ಆದರೆ ಪುರುಷರ ಶೇಕಡವಾರು ಸಂಖ್ಯೆಗೆ ಹೋಲಿಕೆ ಮಾಡಿದರೆ ಮಹಿಳೆಯರ ಸಂಖ್ಯೆ ತುಂಬಾ ಕಡಿಮೆ ಅಂತ ಹೇಳಬೇಕು.

ಅವಳ ಹೆಸರು ಚಾಂದಿನಿ! ಪೂರ್ಣ ಹೆಸರು ಚಾಂದಿನಿ ನೂಪುರ. ಗುಜರಾತಿನ 'ನೂಪುರ' ಎಂಬ ನಗರದಿಂದ ಕರ್ನಾಟಕಕ್ಕೆ ಬಂದು ಹಲವಾರು ವರ್ಷಗಳೇ ಕಳೆದಿವೆ. ಗುಜರಾತಿನಲ್ಲಿ ನಡೆದಿದ್ದ ಸೌಂದರ್ಯ ಸ್ಪರ್ಧೆಯಲ್ಲಿ ಗೆದ್ದು ಎರಡು ಸಿನಿಮಾಗಳಲ್ಲಿ ಅವಕಾಶ ಪಡೆದಿದ್ದಳು.

ಚಾಂದಿನಿ ಸೌಂದರ್ಯ ದೇವತೆ. ಅಭಿನಯ ಚತುರೆ. ಪ್ರೊಡ್ಯೂಸರ್ ಮತ್ತು ಡೈರೆಕ್ಟರ್‌ಗಳು ಬಯಸಿದ ರೀತಿ, ಶೃಂಗಾರ ಶೈಲಿಯಲ್ಲಿ ಸೌಂದರ್ಯವನ್ನು ತೆರೆಯುತ್ತಿದ್ದಳು. ಚುಂಬನ ದೃಶ್ಯಗಳಿಗೆ ಓಕೆ ಎನ್ನುತ್ತಿದ್ದಳು.

ಕನ್ನಡದ ಬಹುತೇಕ ನಿರ್ಮಾಪಕರುಗಳು ಬೇರೆ ಭಾಷೆಯ ಹೀರೋಯಿನ್‌ಗಳಿಗಾಗಿ ಹುಡುಕುತ್ತಿರುತ್ತಾರೆ. ನಮ್ಮ ಟಾಪ್ ಹೀರೋಗಳಲ್ಲಿ ಕೆಲವರಿಗೆ ತೆಲುಗು, ತಮಿಳು, ಹಿಂದಿ ಅಥವಾ ಮಲೆಯಾಳಿ ಭಾಷೆಯಲ್ಲಿ ನಟಿಸಿ ಪ್ರಸಿದ್ಧರಾಗಿರುವ ಹೀರೋಯಿನ್‌ಗಳು ಬೇಕೆಂದು ಅವರು ಡಿಮ್ಯಾಂಡ್ ಮಾಡುತ್ತಿದ್ದರು. ಈ ಹಲವಾರು ಕಾರಣಗಳಿಂದ ಚಾಂದಿನಿ ನೂಪುರ ಕನ್ನಡ ಸಿನಿಮಾದಲ್ಲಿ ಅವಕಾಶ ಪಡೆದಳು. ಮೊದಲ ಸಿನಿಮಾ ಸೂಪರ್ ಹಿಟ್ ಆಯಿತು.

ಪ್ರೊಡ್ಯೂಸರ್‌ಗಳು ಸೂಟ್‌ಕೇಸ್ ಹಿಡಿದು ಸಾಲು ಸಾಲಾಗಿ ನಿಂತರು. ಒಂದರ ಹಿಂದೆ ಮತ್ತೊಂದರಂತೆ ನಾಲ್ಕು ಸಿನಿಮಾಗಳು ಪ್ರೊಡ್ಯೂಸರ್‌ಗಳಿಗೆ ಕೋಟಿಗಳ ಲೆಕ್ಕದಲ್ಲಿ ಲಾಭ ಮಾಡಿದ್ದರಿಂದ, ಅವಳ ಜನಪ್ರಿಯತೆಯ ಕಾರಣದಿಂದ ಟಿ.ವಿ. ಚಾನಲ್‌ಗಳ ರಿಯಾಲಿಟಿ ಶೋಗಳಲ್ಲಿ ಸಹ ಅವಕಾಶ ಪಡೆಯುತ್ತಿದ್ದರಿಂದ ಕರ್ನಾಟಕದಲ್ಲಿ, ಮುಖ್ಯವಾಗಿ ಸಿನಿಮಾ ತಯಾರಿಕೆಗಳ ಕೇಂದ್ರ ಆಗಿರುವ ಬೆಂಗಳೂರಲ್ಲಿ ಪರ್ಮನೆಂಟ್ ಆಗಿ ನೆಲೆಸಿದಳು.

ಹಗಲಿನ ವೇಳೆ ಇವಳು ಮೋಹಕವಾಗಿ ನಗುತ್ತಾ, ಚಿತ್ತಾಕರ್ಷಕವಾಗಿ ಮಾತಾಡುತ್ತಾ, ಎಲ್ಲರ ಜೊತೆ ಆತ್ಮೀಯತೆಯಿಂದ ಇರುತ್ತಾಳೆ. ರಾತ್ರಿ ಬದಲಾಗುತ್ತಾಳೆ.

ಅವಳಿಗೆ ಮದುವೆಯ ಕನಸು ಬೀಳುತ್ತದೆ. ನಂತರ ಮೊದಲ ರಾತ್ರಿ ಮತ್ತು ಹನಿಮೂನ್ ಕನಸು ಬೀಳುತ್ತದೆ. ಆಗಾಗ ಈ ಕನಸು ಪುನರಾವರ್ತನೆ ಆಗುತ್ತಿರುತ್ತದೆ.

ವಿಲಕ್ಷಣತೆ ಏನು? ಕನಸಿನ ವಿಚಿತ್ರ ಏನು?

ಅವಳು ಈ ಕನಸಿನ ಪ್ರಚೋದನೆಗೆ ಒಳಗಾಗಿ ಅದರಂತೆ ನಡೆಯುತ್ತಾಳೆ. ಮದುವೆ ಆಗುತ್ತಾಳೆ. ಎಲ್ಲವೂ ಸಹ ಅವಳ ಕನಸಿನಂತೆ ನಡೆಯುತ್ತದೆ. ಆದರೆ ಒಂದೇ ಒಂದು ಮಾತ್ರ ಸುಪ್ತಮನಸ್ಸಿನ ಪ್ರಚೋದನೆಗೆ ಒಳಗಾಗುವಂತೆ ಮಾಡುತ್ತದೆ.

ಅದು ಏನು? ಅದೇ ಚಿದಂಬರ ರಹಸ್ಯ!

●●●

ಚಾಂದಿನಿ ನೂಪುರ ಕನ್ನಡ ಭಾಷೆಯನ್ನು ಸೊಗಸಾಗಿ ಕಲಿತಿದ್ದಾಳೆ. ಅವಳು ತನ್ನ ರಾಜ್ಯದ (ಗುಜರಾತ್) ನಂಬಿಕಸ್ಥ ವ್ಯಕ್ತಿಯನ್ನು ಕರೆಸಿಕೊಂಡಿದ್ದಾಳೆ.

ಪಿಂಗಳ ದಾವನ್! ಪ್ರಾಯ ಮುವತ್ತು. ತುಂಬಾ ವರ್ಷಗಳಿಂದ ಗುಜರಾತ್‌ನಲ್ಲಿ ಡ್ರೈವರ್ ಕಮ್ ಬಾಡಿಗಾರ್ಡ್ ಆಗಿ ಕೆಲಸ ಮಾಡಿಕೊಂಡಿದ್ದನು. ಆ ರಾಜ್ಯ ಬಿಟ್ಟು ಬಂದ ಮೇಲೆ ಅವನ ಸಂಪರ್ಕ ಇರಲಿಲ್ಲ. ಈಗ ಫೋನ್ ಮಾಡಿ ಕರೆಸಿಕೊಂಡಿದ್ದಾಳೆ. ಏಕಾಂತದಲ್ಲಿ ಅವನ ಜೊತೆ ಮಾತಾಡುತ್ತಾ ಹೇಳಿದ್ದಳು.

ನನಗಾಗಿ ನೀನು ಯಾವ ಕೆಲಸವನ್ನೇ ಆಗಲಿ ಮಾಡಲು ರೆಡಿಯಾಗಿರಬೇಕು. ಮುಖ್ಯವಾಗಿ ರಹಸ್ಯ ಕಾಪಾಡಬೇಕು. ನಾನು ಹೇಳಿದಂತೆ ಕೇಳಬೇಕು. ನನ್ನನ್ನು ನೆರಳಿನ ರೀತಿಯಲ್ಲಿ ನೀನು ಕಾಪಾಡಬೇಕು. ನಿನಗೆ ಸಂಬಳ ಎಷ್ಟು ಗೊತ್ತಾ? ಐವತ್ತು ಸಾವಿರ! ತಿಂಗಳಿಗೆ ಐವತ್ತು ಸಾವಿರ.

ನನಗೆ ನಿನ್ನ ಬುದ್ಧಿವಂತಿಕೆ, ಚುರುಕುತನ ಮತ್ತು ರಹಸ್ಯ ಕಾಪಾಡುವ ರೀತಿ ಇಷ್ಟವಾದರೆ ನೀನು ಕೇಳಿದಷ್ಟು ಹಣ ಕೊಡ್ತೀನಿ. ಪಿಂಗಳ ದಾವನ್‌ಗೆ ತುಂಬಾ... ತುಂಬಾ ಖುಷಿಯಾಗಿದೆ.

ಅವನು ''ಮೇಡಂ... ನೀವು ಯಾವ ಕೆಲಸ ಹೇಳಿದರೂ ಪ್ರಶ್ನೆ ಮಾಡದೆ ಮಾಡ್ತೀನಿ. ನನಗೆ ನಿಮ್ಮ ರಕ್ಷಣೆ ಮತ್ತು ಗೌರವ ತುಂಬಾ ಮುಖ್ಯ. ನಾನು ಅದನ್ನು ಕಾಪಾಡ್ತೀನಿ'' ಎಂದು ಹೇಳಿದನು.

●●●

ಚಾಂದಿನಿ ನೂಪುರ ಬಂಗಲೆಯ ಬೆಡ್‌ರೂಮ್‌ನಲ್ಲಿರುವ ಟಿ.ವಿ. ಪ್ರೋಗ್ರಾಂ ನೋಡುತ್ತಿದ್ದಾಳೆ. ತನಗೆ ಬೇಕಾಗಿರುವ ಆ್ಯಪ್ ಅಳವಡಿಸಿಕೊಂಡು ನೋಡುತ್ತಿದ್ದಾಳೆ.

ಅದು ಎಂತಹ ಸಿನಿಮಾ? ವಿದೇಶ ಮತ್ತು ಭಾರತದಲ್ಲಿ ತಯಾರಾಗಿರುವ ವಿಲಕ್ಷಣ ವರ್ತನೆಯ ದೃಶ್ಯಗಳಿರುವ ಸಿನಿಮಾಗಳು. ನಿಜ ಜೀವನದಲ್ಲಿ ಅವಳು ಬೇರೆಯಾಗಿರುತ್ತಾಳೆ. ಮುಖ್ಯವಾಗಿ ಏಕಾಂತದಲ್ಲಿ ಅವಳು ಅವಳಾಗಿರುವುದಿಲ್ಲ. ಟಿ.ವಿ. ಆಫ್ ಮಾಡುವುದಿಲ್ಲ. ತಾನೇ ತಾನಾಗಿ ನಿದ್ದೆಗೆ ಒಳಗಾಗಿರುತ್ತಾಳೆ.

ಅಸಹಜ ಆಸೆಗಳು. ಅಸಹಜ ವಿಲಕ್ಷಣ ಬಯಕೆಗಳು. ಇವುಗಳು ಅವಳ ಸುಪ್ತಮನಸ್ಸಿನ ಮೇಲೆ ನಿದ್ದೆ ಬರುವ ತನಕ ನೋಡಿದ್ದ ಸಿನಿಮಾದ ದೃಶ್ಯಗಳ ಪುನರಾವರ್ತನೆ ಸುಪ್ತಮನಸ್ಸಿನ ಮೇಲೆ ಆಗುತ್ತದೆ.

ಅವಳಿಂದ ನಿಯಂತ್ರಿಸಲು ಆಗೋಲ್ಲ. ಬೇಗ... ಬೇಗ ಬಯಕೆ ತೀರಿಸಿಕೊಳ್ಳಬೇಕು. ಇದೇ ಅವಳ ಬಯಕೆಯ ಪ್ರಚೋದನೆಗೆ ಆಗುತ್ತಿದೆ.

ಬೆಳಗಿನ ಆರು ಗಂಟೆ. ನಿತ್ಯದಂತೆ ವ್ಯಾಯಾಮ ಮಾಡಲು ರೆಡಿಯಾಗಿ ಹೊರಗೆ ಬಂದಳು. ಅವಳ ಹಿಂದೆ ಬಾಡಿಗಾರ್ಡ್ ಆಗಿ ಕೆಲವು ಅಡಿಗಳ ದೂರದಲ್ಲಿ ಬರುತ್ತಾನೆ ದಾವನ್...!

ಅವಳು ತಟ್ಟನೆ ನಿಂತಳು. ಅವನ ಕಡೆ ತಿರುಗಿದಳು. ಹತ್ತಿರ ಬಾ ಎನ್ನುವಂತೆ ಸಂಜ್ಞೆ ಮಾಡಿದಾಗ ದಾವನ್ ಬಂದನು. ಅವಳು ಜಾಗಿಂಗ್ ಮಾಡುವಾಗ ಬಿಳಿಯ ಬಣ್ಣದ ಪ್ಯಾಂಟ್ ಧರಿಸಿರುತ್ತಾಳೆ.

ಬಿಗಿಯಾದ ಟೀ ಷರ್ಟ್, ಕ್ಯಾನ್ವಾಸ್ ಶೂಗಳು, ಅವಳು ತಲೆಯ ಕೂದಲನ್ನು ಸೇರಿಸಿ ಕ್ಲಿಪ್ ಕ್ಲಾಂಪ್ ಮಾಡಿ ಬಿಗಿದಿರುತ್ತಾಳೆ.

''ಹೇಳಿ ಮೇಡಂ.''

ಪ್ಯಾಂಟ್ ಜೇಬಿನಿಂದ ಮೊಬೈಲ್ ತೆಗೆದು ಅವನ ಮುಂದೆ ಹಿಡಿದು 'ನನಗೆ ಇವನ ಬಗ್ಗೆ ಇನ್‌ಫರ್‌ಮೇಷನ್ ಬೇಕು. ಇವನ ಬಗ್ಗೆ ಎಲ್ಲಾ ಡೀಟೈಲ್ಸ್ ಇದೆ. ನಿನಗೆ ವಾಟ್ಸಾಪ್ ಮಾಡ್ತೀನಿ.''

''ಕಲೆಕ್ಟ್ ಮಾಡ್ತೀನಿ ಮೇಡಂ.

'ಬಟ್... ದಿಸ್ ಈಸ್ ವೆರಿ ಕಾನ್ಫಿಡೆನ್‌ಶಿಯಲ್. ಅಪ್ಪ-ಅಮ್ಮನಿಗೂ ಸಹ ತಿಳಿಯಬಾರದು.''

''ಆಗಲಿ ಮೇಡಂ.'

''ಗೋ ಅಹೆಡ್. ನಿನ್ನ ಅಕೌಂಟ್‌ಗೆ ನಾನು ಇವತ್ತೇ ಗೂಗಲ್ ಪೇ ಮಾಡ್ತೀನಿ.''

''ಆ್ಯಸ್ ಯೂ ಪ್ಲೀಸ್ ಮೇಡಂ.'

●●●

ಅವನ ಹೆಸರು ಗೌತಮ್! ಪ್ರಾಯ ಇಪ್ಪತ್ತೈದು. ಅಪ್ಪ-ಅಮ್ಮ ಇಲ್ಲ. ಅಕ್ಕ-ಭಾವ ಬೇರೆ ಊರಲ್ಲಿ ಇದ್ದಾರೆ. ಈ ಊರಲ್ಲಿ ಸಂಬಂಧಿಕರು ಕೆಲವರು ಇದ್ದಾರೆ. ಆದರೆ ಅವರ ಸಂಪರ್ಕ ಕಡಿಮೆ. 'ಜಿಮ್' ಸೆಂಟರ್‌ನಲ್ಲಿ ಕೋಚ್ ಆಗಿ ಕೆಲಸ ಮಾಡುತ್ತಿದ್ದಾನೆ.

ಬಡಕುಟುಂಬದವನು. ಅವನು ತುಂಬಾ ಸಿನಿಮಾಗಳನ್ನು ನೋಡುತ್ತಾನೆ. ಮುಖ್ಯವಾಗಿ ಚಾಂದಿನಿ ನೂಪುರ ಅಭಿಮಾನಿ. ಅವಳ ಸಿನಿಮಾಗಳನ್ನು ತುಂಬಾ ನೋಡುತ್ತಾನೆ. ಅವನಿಗೆ ತನ್ನ ಮೆಚ್ಚಿನ ನಟಿಯನ್ನು ಮೀಟ್ ಮಾಡುವ ಆಸೆ ತುಂಬಾ ಇದೆ. ಮತ್ತೊಂದು ಆಸೆ ಇದೆ. ಆ ಆಸೆ ಏನು?

ಕೇವಲ ಎರಡು ದಿನಗಳಲ್ಲಿ ಪಿಂಗಳ ದಾವನ್ ಜಿಮ್ ಸೆಂಟರ್‌ನಲ್ಲಿ ಕೋಚ್ ಆಗಿರುವ ಗೌತಮ್ ಬಗ್ಗೆ ಮಾಹಿತಿ ಕಲೆಕ್ಟ್ ಮಾಡಿದ್ದಾನೆ. ಅಸಲು ಸಂಗತಿ ಏನು?

ಚಾಂದಿನಿ ಯಾವುದೋ ಸಿನಿಮಾ ಶೂಟಿಂಗ್ ನಲ್ಲಿರುವಾಗ ಜನಗಳ ಗುಂಪಿನಿಂದ ಒಬ್ಬ ಮುಂದೆ ಬರಲು ಸಾಹಸ ಮಾಡುತ್ತಿದ್ದನು. ಅವನೇ ಗೌತಮ್...! ಆಗ ಅವನನ್ನು ನೋಡಿದ್ದಳು ಮತ್ತು ಅಲ್ಲೇ ಇದ್ದ ಅಸೋಸಿಯೇಟ್ ಡೈರೆಕ್ಟರ್‌ಗೆ ತನ್ನ ಮೊಬೈಲ್ ಕೊಟ್ಟು ''ಆ ಯುವಕನ ಫೋಟೋ ತೆಗೆದು, ಅವನ ಫೋನ್ ನಂಬರ್ ಮತ್ತು ಅಡ್ರೆಸ್ ಕಲೆಕ್ಟ್ ಮಾಡಲು ಹೇಳಿದ್ದಳು.

ಈಗ ಪಿಂಗಳ ದಾವನ್ ಅವನ ಬಗ್ಗೆ ಮಾಹಿತಿ ಸಂಗ್ರಹಿಸಿದ್ದಾನೆ.

ಏಕಾಂತದಲ್ಲಿ ದಾವನ್‌ಗೆ ಹೇಳಿದಳು. ''ಗ್ರೀನ್ ಹಿಲ್ ಎಸ್ಟೇಟ್ ಬಂಗಲೆ ಮಾರುತಿನಗರದ ಮುವತ್ತನೆ ಕ್ರಾಸ್‌ನಲ್ಲಿದೆ. ಅದು ಏಕಾಂತ ಪ್ರದೇಶ. ನೀನು ಅಲ್ಲಿಗೆ ಗೆಟಪ್ ಬದಲಿಸಿಕೊಂಡು ಹೋಗಿ ಒಂದು ತಿಂಗಳ ಬಾಡಿಗೆಗೆ ಬುಕ್ ಮಾಡು. ಒಂದೇ ಒಂದು ತಿಂಗಳು ಸಾಕು. ಒಂದೇ ಜಾಗದಲ್ಲಿ ನಾನು ಒಂದು ತಿಂಗಳಿಗಿಂತ ಜಾಸ್ತಿ ಇರೋಲ್ಲ. ಮಾಲೀಕರು ಆಗೋಲ್ಲ ಅಂದ್ರೆ ಬೇಕಾದರೆ ಎರಡು ತಿಂಗಳ ಬಾಡಿಗೆ ಕೊಡು. ನನಗೆ ಆ ಸ್ಥಳ ಬೋರ್ ಆದರೆ ಖಾಲಿ ಮಾಡಿದರಾಯಿತು.''

ಪಿಂಗಳ ದಾವನ್ ಅವಳು ಹೇಳಿದಂತೆ ಮಾರುತಿ ನಗರದ ಮುವತ್ತನೆ ಕ್ರಾಸ್‌ನಲ್ಲಿರುವ ಆ ಬಂಗಲೆ ಬುಕ್ ಮಾಡಿದನು.

●●●

ಗೌತಮ್ ಜಿಮ್ ಕೆಲಸ ಮುಗಿಸಿಕೊಂಡು ಮನೆಗೆ ಹೋಗುತ್ತಿದ್ದಾನೆ. ಫೋನ್ ಕಾಲ್ ಬಂದಿತು. ಅನ್‌ನೋನ್ ನಂಬರ್ ಕಾಲ್. ಮಧುರವಾದ ಹೆಣ್ಣಿನ ಧ್ವನಿ ಕೇಳಿಸಿತು.

ಅವನು ಪುಳಕಗೊಂಡನು.

''ನಾನು ಚಾಂದಿನಿ ನೂಪುರ.''

''ಯಾವ ಚಾಂದಿನಿ.''

''ನೀನು ಅಭಿಮಾನದಿಂದ ಸಿನಿಮಾಗಳನ್ನು ನೋಡುತ್ತಾ ನನ್ನ ಬಗ್ಗೆ ಕನಸು ಕಾಣುತ್ತಿರುವ ಹೀರೋಯಿನ್ ಚಾಂದಿನಿ.

ಅವನು ನಗಾಡಿದನು.

''ಯಾಕೆ ನಗುತ್ತೀಯ?''

''ಇದು ಏಪ್ರಿಲ್ ತಿಂಗಳಲ್ಲ.''

''ನಾನು ಫೂಲ್ ಮಾಡುತ್ತಿಲ್ಲ.''

''ಹಲೋ ಮೇಡಂ... ಚಾಂದಿನಿಯಂತ ಟಾಪ್ ಹೀರೋಯಿನ್ ನನ್ನಂತವನಿಗೆ ಫೋನ್ ಮಾಡಲು ಸಾಧ್ಯವೇ ಇಲ್ಲ.'

ಅವಳು 'ನಿನಗೆ ನಂಬಿಕೆ ಬರಲು ಏನು ಮಾಡಲಿ'' ಅಂತ ನೀನೇ ಹೇಳು.''

''ವೀಡಿಯೋ ಕಾಲ್ ಮಾಡ್ತೀಯ?''

''ಈಗಲೇ ಮಾಡ್ತೀನಿ.''

ವೀಡಿಯೋ ಕಾಲ್ ಪಿಕ್ ಮಾಡಿದಾಗ ಕಂಡು ಬಂದಿತು. ಮೈ ಬೆಚ್ಚಗಾಗುವ, ಮನಸ್ಸು ಚಂಚಲಗೊಳ್ಳುವ ಶೃಂಗಾರ ದೃಶ್ಯ!

ಬಾತ್‌ರೂಮ್ ದೃಶ್ಯ. ಸೋಪಿನ ನೊರೆ ತುಂಬಿರುವ ಟಬ್‌ನಲ್ಲಿ ಅವಳ ಬೆತ್ತಲೆ ದೇಹ ಲೀನವಾಗಿದೆ.

ತಲೆ ಮಾತ್ರ ಮೇಲೆ ಎತ್ತಿದ್ದಾಳೆ.

ಮೊಬೈಲ್ ಹಿಡಿದು ಮಾತಾಡುತ್ತಿದ್ದಾಳೆ.

ಆಗಾಗ ಅವಳು ತನ್ನ ಸುಂದರವಾದ ದೇಹದ ನಗ್ನತೆಯ ಸ್ವಲ್ಪ ಭಾಗ ಕಾಣುವಂತೆ ಮೊಬೈಲ್ ಕ್ಯಾಮರಾ ಹಿಡಿದಿದ್ದಾಳೆ.

''ಈಗಲಾದರೂ ನಂಬಿಕೆ ಬಂತಾ?''

ಅವನಿಂದ ಮಾತಾಡಲು ಆಗುತ್ತಿಲ್ಲ.

ಇದು ನಿಜವೆ?

ಕನಸಲ್ಲ ತಾನೆ?

ಸಿನಿಮಾದಲ್ಲಿ ಅವಳನ್ನು ಇಂತಹ ಶೃಂಗಾರತೆಯ ರೋಚಕ ಅರೆನಗ್ನ ದೃಶ್ಯಗಳನ್ನು ನೋಡಿದ್ದನು. ಈಗ ಅವಳೇ ಮಾತಾಡುತ್ತಾ ಆ ದೃಶ್ಯವನ್ನು ತೋರಿಸುತ್ತಿದ್ದಾಳೆ.

ಅವನಿಗೆ ನಂಬಿಕೆ ಬಂದಿದೆ!

''ಏ ಗೌತಮ್... ಈಗಲಾದರೂ ನಂಬಿಕೆ ಬಂತಾ?''

ಅವನು ಭಾವೋದ್ವೇಗ ಮತ್ತು ಸಂತೋಷನನ್ನು ಕಂಟ್ರೋಲ್ ಮಾಡಿಕೊಳ್ಳುತ್ತಾ ''ನಂಬಿಕೆ ಬಂದಿದೆ ಮೇಡಂ ಆದರೆ ನನ್ನಂತ ಸಾಮಾನ್ಯನ ಬಗ್ಗೆ ನಿಮಗ್ಯಾಕೆ ಆಸಕ್ತಿ ಬಂದಿದೆ'' ಎಂದು ಕೇಳಿದನು.

''ಸಿನಿಮಾಗಳಲ್ಲಿ ಮೇಕಪ್ ಮತ್ತು ಗ್ರಾಂಡ್ ಡ್ರೆಸ್‌ಗಳಿಂದ ಹೀರೋಗಳು ಮಿಂಚುತ್ತಾರೆ. ಆದರೆ ನೀನು ನ್ಯಾಚುರಲ್ ಆಗಿ ಹೀರೋ ರೀತಿ ಇದ್ದೀಯ. ಅಷ್ಟೇ ಅಲ್ಲ, ನೀನು ನನಗೆ ಅಭಿಮಾನಿಗಳಿಗೋದ್ರಿಂದ ನೀನು ನನಗೆ ಇಷ್ಟ ಆಗಿದ್ದೀಯ'' ಎಂದ ಕೂಡಲೇ ಅವನು ಉತ್ಸಾಹದಿಂದ ''ಥ್ಯಾಂಕ್ ಯೂ ಸೋ ಮಚ್ ಮೇಡಂ'' ಎಂದನು.

''ಮೇಡಂ ಅಲ್ಲ... ಚಾಂದಿನಿ ಅಂತ ಕೂಗು.''

ಅವನ ಮುಖ ಅರಳಿತು.

ಮೈಯಲ್ಲಿ ಸುಖದ ಕಂಪನ ಆಯಿತು.

ಅವನು ''ಚಾಂದಿನಿ... ನಿಮ್ಮನ್ನು ಭೇಟಿ ಮಾಡಿ ಹತ್ತಿರದಿಂದ ನೋಡ್ಬೇಕು. ತುಂಬಾ... ತುಂಬಾ ಮಾತಾಡ್ಬೇಕು. ಪ್ಲೀಸ್... ಅವಕಾಶ ಮಾಡಿಕೊಡ್ತೀರ'' ಎಂದು ಉದ್ವೇಗದ ಧ್ವನಿಯಲ್ಲಿ ಕೇಳಿದನು.

ಅವಳು ಮಾದಕವಾಗಿ ನಕ್ಕಳು.

''ಏ... ನಾನು ನಿನಗೆ ಫೋನ್ ಮಾಡಿರೋದು ನಿನ್ನನ್ನು ನನ್ನ ಬರ್ತ್‌ಡೇ ಫಂಕ್ಷನ್‌ಗೆ ಕರೆಸಿಕೊಳ್ಳಲು.''

ಅವನು ಗಾಬರಿ, ಚಡಪಡಿಕೆಯಿಂದ ''ಏನು ಬರ್ತ್‌ಡೇ ಫಂಕ್ಷನ್ನಾ? ಬೇಡ... ಬೇಡ ಮೇಡಂ... ಯಾಕೆ ಅಂದರೆ ನಿಮ್ಮಂತ ಟಾಪ್ ಹೀರೋಯಿನ್ ಬರ್ತ್‌ಡೇ ಅಂದ್ರೆ ನೂರಾರು ಮಂದಿ ಶ್ರೀಮಂತ ಗಣ್ಯರು ಬಂದಿರುತ್ತಾರೆ. ನನ್ನಂತ ತೀರಾ ಸಾಮಾನ್ಯ ಅಂತಹ ಫಂಕ್ಷನ್‌ಗಳಿಗೆ ಬರಬಾರದು'' ಎಂದನು.

ಅವಳು ಕಿಲಕಿಲನೆ ನಗಾಡಿದಳು.

''ಏ ಫೂಲ್... ಬರ್ತ್‌ಡೇ ಫಂಕ್ಷನ್ಗೆ ನಿನ್ನ ವಿನಹ ಯಾರೂ ಬರೋಲ್ಲ. ಇದು ನಮ್ಮಿಬ್ಬರ ವಿನಹ ಬೇರೆ ಯಾರಿಗೂ ಗೊತ್ತಿರೋಲ್ಲ.''

''ವಾಟ್... ಇದು ನಿಜಾನ?''

''ಹೌದು ಗೌತಮ್.''

''ನನಗೆ... ನನಗೆ ಕನ್‌ಫ್ಯೂಸ್ ಆಗುತ್ತಿದೆ. ಒಂದು ರೀತಿ ಗೊಂದಲ ಕಾಡುತ್ತಿದೆ.''

''ನೀನು ನನ್ನನ್ನು ಮೀಟ್ ಮಾಡಿದ ಮೇಲೆ ಎಲ್ಲಾ ಗೊಂದಲ ಕ್ಲಿಯರ್ ಆಗುತ್ತೆ.''

''ಮೀಟ್ ಮಾಡೋದು ಯಾವಾಗ?''

''ನಾಳೆ ಸಂಜೆ ಆರು ಗಂಟೆಗೆ. ಅದಕ್ಕೆ ಮೊದಲು ನನ್ನ ಕಡೆಯ ವ್ಯಕ್ತಿ ನಿನ್ನ ಮೀಟ್ ಮಾಡಿ ಕೆಲವು ಡ್ರೆಸ್‌ಗಳನ್ನು ಕೊಡುತ್ತಾನೆ. ಅದನ್ನು ಹಾಕಿಕೊಂಡು ಟ್ರಿಮ್ ಆಗಿ ಬರಬೇಕು. ನೀನು ಹೀರೋ ರೀತಿ ಕಾಣಬೇಕು.''

''ನಾನು... ನನ್ನ ಮನೆ ಬಗ್ಗೆ ನಿಮ್ಮ ಕಡೆಯವನಿಗೆ ಗೊತ್ತಾ?''

☞14

13 ☞

''ನಿನ್ನ ಬಗ್ಗೆ ಎಲ್ಲಾ ಇನ್‌ಫರ್‌ಮೇಷನ್ ಕಲೆಕ್ಟ್ ಮಾಡಿರುವ ವ್ಯಕ್ತಿಗೆ ಎಲ್ಲಾ ಗೊತ್ತಿರುತ್ತೆ. ನೀನು ರೆಡಿಯಾಗಿರು ಗೌತಮ್.''

''ಒಂದೇ ಒಂದು ರಿಕ್ವೆಸ್ಟ್.''

''ಕೇಳು ಗೌತಮ್.''

''ನೀವು ಟಬ್ ಬಾತ್ ಮಾಡುತ್ತಿರುವ ದೃಶ್ಯದ ವೀಡಿಯೋ ಕ್ಲಿಪ್‌ಅನ್ನು ನನಗೆ ವಾಟ್ಸಾಪ್ ಮಾಡ್ತೀರ?''

''ಆಹಾ... ರಸಿಕ ನೀನು.''

''ನನ್ನ ರಸಿಕತೆ, ಶೃಂಗಾರತೆ ಪ್ರಚೋದನೆಗೊಳ್ಳಲು ಕಾರಣ ನಿಮ್ಮ ಸೌಂದರ್ಯ.''

ಅವಳು ಮಾದಕವಾಗಿ ನಕ್ಕಳು.

ಫೋನ್ ಲಿಂಕ್ ಕಟ್ ಆಯಿತು.

●●●

ಗೌತಮ್‌ಗೆ ಸಂಜೆ ಹೊತ್ತಿಗೆ ಫೋನ್ ಮಾಡಿ ಡ್ರೈವರ್, ಕವರ್ ಬಾಡಿಗಾರ್ಡ್ ದಾವನ್ ಡ್ರೆಸ್‌ಗಳನ್ನು ಕೊಟ್ಟನು. ಗೌತಮ್ ಏನೇನೋ ಕೇಳಲು ಪ್ರಯತ್ನಿಸಿದನು. ''ನೋ ಮೋರ್ ಕ್ವಶ್ಚನ್. ನೀನು ನಾಳೆ ಸಂಜೆ ಐದು ಗಂಟೆಗೆ ಶಿವಾನಂದ ಸರ್ಕಲ್ ಹತ್ತಿರ ಬಂದಿರಬೇಕು.''

ಅವನು ತಲೆಯಾಡಿಸಿದನು.

ಪಿಂಗಳ ದಾವನ್ ಗಂಭೀರವಾಗಿ ''ನಿನಗೆ ಖುಷಿ ತಡೆಯಲಾಗದೆ ಈ ಪ್ರಕರಣದ ಬಗ್ಗೆ ಯಾರ ಹತ್ತಿರವೂ ಬಾಯಿ ಬಿಡಬಾರದು. ಆ ರೀತಿ ಮಾಡಿದರೆ ನಿನಗೆ ಡೇಂಜರಸ್ ಪ್ರಾಬ್ಲಂ ಆಗುತ್ತೆ'' ಎಂದನು.

ಗೌತಮ್ ಗಾಬರಿಯಾದನು. ದಾಂಡಿಗ ಪಿಂಗಳ ದಾವನ್ ಹೋಗುತ್ತಿರುವುದನ್ನು ನೋಡುತ್ತಿದ್ದಾನೆ. ಈ ಸಿನಿಮಾ ನಟಿಗೆ ಯಾಕೆ ದಿಢೀರ್ ಅಂತ ನನ್ನ ಬಗ್ಗೆ ಆಸಕ್ತಿ ಬಂದಿದೆ? ಅನುಮಾನದ ಆಲೋಚನೆಗಳು ಬರುತ್ತಿದ್ದರೂ ಸಹ ಅವಳ ಮೇಲಿನ ಕ್ರೇಜ್ ನಿಂದಾಗಿ ಅವಳು ಹೇಳಿದ್ದ ಜಾಗಕ್ಕೆ ಹೋಗಲು ತೀರ್ಮಾನ ಮಾಡಿದನು.

●●●

ಸಂಜೆ ಐದು ಗಂಟೆ. ದಾಂಡಿಗ ದಾವನ್ ಹಿಂದಿನ ದಿವಸ ತಂದು ಕೊಟ್ಟಿದ್ದ ಡ್ರೆಸ್ ಹಾಕಿಕೊಂಡು ಅವಳಿಗೆ ರೆಡಿಯಾಗಿ ಕಾಯುತ್ತಿದ್ದಾನೆ.

ಕಾರು ಬಂದಿತು.

ಅವನೀಗ ದಾಂಡಿಗ ದಾವನ್ ಕಡೆ ಗಾಬರಿಯಿಂದಲೇ ನೋಡುತ್ತಾ ''ಮೇಡಂ ಎಲ್ಲಿ ಇದ್ದಾರೆ'' ಎಂದು ಕೇಳಿದನು.

ಅವನು ಗಡುಸಾಗಿ ''ಅದನ್ನೆಲ್ಲಾ ಮಾತಾಡುತ್ತಾ ಇಲ್ಲಿರಲು ಟೈಂ ಇಲ್ಲ. ಐಯಾಮ್ ಸಾರಿ. ಪ್ರಶ್ನೆ ಮಾಡದೆ ಕಾರಲ್ಲಿ ಕೂರು'' ಎಂದು ರೇಗುವ ರೀತಿ ಹೇಳಿದನು.

ಅನುಮಾನ, ಅಂಜಿಕೆಯಿಂದಲೇ ಕಾರಲ್ಲಿ ಕುಳಿತನು.

ಕಾರು ವೇಗವಾಗಿ ಹೋಗುತ್ತಿದೆ. ಅವನಿಗೆ ಚಾಂದಿನಿಯ ಬಲು ಅಪರೂಪದ ಸೌಂದರ್ಯ ನೆನಪಾಗಿ ಮೈ ಹಿತವಾಗಿ ಕಂಪಿಸಿತು.

ಮಾರುತಿನಗರ. ಮೂವತ್ತನೆ ಕ್ರಾಸ್. ಬಲಭಾಗದ ರಸ್ತೆಯಲ್ಲಿ ಕಾರು ತಿರುಗಿತು. ಅರ್ಧ ಮೈಲಿಯಷ್ಟು ದೂರ ಹೋದ ಮೇಲೆ ನಿರ್ಜನ ಪ್ರದೇಶದಲ್ಲಿರುವ, ಬಲು ಎತ್ತರ ವಾದ ಕಾಂಪೌಂಡ್ ಗೋಡೆ ಇರುವ ಮಿನಿ ಬಂಗಲೆ ಕಂಡಿತು. ಅವನಲ್ಲಿ ಉದ್ವೇಗ ಜಾಸ್ತಿಯಾಗಿದೆ.

ಇನ್ನೇನು ಕೆಲವೇ ನಿಮಿಷಗಳಲ್ಲಿ ಪ್ರಖ್ಯಾತ ಸಿನಿಮಾ ಹೀರೋಯಿನ್ ಚಾಂದಿನಿಯನ್ನು ಹತ್ತಿರದಿಂದ ನೋಡಲಿದ್ದೇನೆ.

ದಾವನ್ ಕಾರಿನಿಂದ ಇಳಿದು ಬಟನ್ ಪ್ರೆಸ್ ಮಾಡಿದನು. ಲಾಕಿಂಗ್ ಸಿಸ್ಟಮ್ ಇರುವ ಗೇಟ್ (ಐರನ್ ಗೇಟ್) ತಾನೇ ತಾನಾಗಿ ತೆರೆದುಕೊಂಡಿತು. ಕಾರು ಕಾಂಪೌಂಡ್‌ನ ಒಳ ಆವರಣ ಪ್ರವೇಶಿಸಿತು. ಇಬ್ಬರೂ ಕಾರಿನಿಂದ ಇಳಿದರು.

ಬಂಗಲೆಯ ವಿಶಾಲವಾದ ಫ್ರಂಟ್ ಹಾಲ್‌ನಲ್ಲಿ ಕಂಡು ಬರುತ್ತಿದೆ ಶ್ರೀಮಂತಿಕೆಯ ವೈಭವ...!

''ಮೇಡಂ ಈಗ ಬರ್ತಾರೆ'' ಎಂದು ಹೇಳಿ ಈಗ ಡೈನಿಂಗ್ ಹಾಲ್‌ಗೆ ಕರೆದುಕೊಂಡು ಬಂದು ''ನೀನು ಟಿಫನ್ ಮಾಡಿ ಟೀ ಕುಡಿಯುತ್ತಿರು'' ಎಂದು ಹೇಳಿ ಹೊರಟನು.

ಆ ಮಿನಿ ಬಂಗಲೆಯಲ್ಲಿ ನಾಲ್ಕು ಕೊಠಡಿಗಳಿವೆ. ಅವುಗಳಲ್ಲಿ ಎರಡು ಫ್ರಂಟ್ ಹಾಲ್‌ನಲ್ಲಿವೆ. ಸ್ಪೆಷಲ್ ತಿಂಡಿಗಳು. ಟೀ-ಕಾಫಿ ಎಲ್ಲಾ ಇದೆ.

ಅವನು ತಿಂದು-ಕುಡಿದು ರಿಲ್ಯಾಕ್ಸ್ ಮಾಡಿಕೊಳ್ಳುತ್ತಿರುವಾಗ ಗಾಳಿಯಲ್ಲಿ ತೇಲಿ ಬಂದ ಗುಲಾಬಿ ಹೂವು ಇವನ ಎದೆ ಮೇಲೆ ಬಿದ್ದಿತು.

ಎತ್ತಿಕೊಂಡು ನೋಡಿದನು.

ವೆಲ್‌ಕಮ್ ಮೈ ಡಿಯರ್ - ಚಾಂದಿನಿ ಎಂಬ ಬರಹದ ಟ್ಯಾಗ್ ಅನ್ನು ಹೂವಿಗೆ ಕ್ಲಾಂಪ್ ಮಾಡಲಾಗಿದೆ. ಅವಳು ಬರೆದಿರುವ ಮೈಡಿಯರ್ ಎಂಬುದು ರೋಮಾಂಚನ ಉಂಟು ಮಾಡಿತು.

''ಏ ಗೌತಮ್... ನೇರವಾಗಿ ಬಲಭಾಗದಲ್ಲಿರುವ ರೂಮಿಗೆ ಹೋಗು.''

ಅವಳ ಧ್ವನಿ ಕೇಳಿ ಬಂದಿತು. ಸರ್ರನೆ ಆ ಕಡೆ ತಿರುಗಿದನು. ಆದರೆ ಅವಳು ಕಂಡು ಬರಲಿಲ್ಲ. ಅವಳು ಹೇಳಿದ್ದ ಆ ರೂಮಿಗೆ ಬಂದನು. ಆ ದೃಶ್ಯ ಕಂಡ ಕೂಡಲೇ ರೋಮಾಂಚನ ಉಂಟಾಯಿತು. ಬರ್ತ್‌ಡೇ ದೃಶ್ಯ ಅಲ್ಲ!

ಮದುವೆ ಮಂಟಪ ಕಂಡು ಬರುತ್ತಿದೆ. ಅಲ್ಲೊಬ್ಬ ಅರ್ಚಕ ಕುಳಿತಿದ್ದಾನೆ. ಇವರನ್ನು ಕಂಡು ''ಬಾರಯ್ಯ ವರಮಹಾಶಯ. ಬೇಗ ಸ್ನಾನ ಮುಗಿಸಿಕೊಂಡು, ಪಕ್ಕದ ರೂಮಿನಲ್ಲಿರೋ ಮದುವೆ ಗಂಡಿನ ಡ್ರೆಸ್‌ಗಳನ್ನು ಹಾಕಿಕೊಂಡು ಬಾ.''

ಅವನಿಗೆ ನಂಬಿಕೆ ಬರುತ್ತಿಲ್ಲ. ಅರ್ಚಕ ಮತ್ತೊಮ್ಮೆ ರೇಗುವ ರೀತಿ ಹೇಳಿದಾಗ ಅವನು ಅಲ್ಲಿಗೆ ಹೋದನು.

ಕಚ್ಚೆ ಪಂಚೆ (ರೆಡಿಮೇಡ್). ತಿಳಿಹಳದಿ ಬಣ್ಣದ ಷರ್ಟ್. ಚಿನ್ನದ ಸರ. ಉಂಗುರಗಳು. ಮೈಸೂರಿನ ಪೇಟ. ಹೊಸ ಚಪ್ಪಲಿಗಳು.

ಅವನಿಗೆ ನಂಬಲಾಗುತ್ತಿಲ್ಲ. ತಾನು ಯಾವುದೋ ಕನಸಿನ ಲೋಕದಲ್ಲಿ ತೇಲುತ್ತಿದ್ದೇನೆ ಎಂಬ ಭ್ರಮೆ ಉಂಟಾಗಿ ಸುಖದ ಕಲ್ಪನೆಯಿಂದ ಕಂಪಿಸಿದನು.

ಯಾಕೆ ಈ ರೀತಿ ಆಗುತ್ತಿದೆ?

ಇವಳ್ಯಾಕೆ ಮದುವೆ ಆಗುತ್ತಿದ್ದಾಳೆ? ಶ್ರೀಮಂತ ಉದ್ಯಮಿಗಳು ಇವಳನ್ನು ಮದುವೆ ಆಗಲು ಸಿದ್ಧರಾಗಿರುವಾಗ ನನ್ನಂತವನಿಂದ ಅವಳಿಗೇನು ಉಪಯೋಗ?

ಮದುವೆ ಮಂಟಪ ಸಿದ್ಧವಾಗಿದೆ. ಹೋಮಕುಂಡ ಉರಿಯುತ್ತಿದೆ. ಅರ್ಚಕರು ಮಂತ್ರ ಹೇಳುತ್ತಿದ್ದಾರೆ. ಇವನೀಗ ಹಸೆಮಣೆಯ ಮೇಲೆ ಕುಳಿತು ಅರ್ಚಕರು ಹೇಳಿದಂತೆ ಮಾಡುತ್ತಿದೆ.

ರೂಮಿನ ಬಾಗಿಲು ತೆರೆಯಿತು. ಚಾಂದಿನಿ ನೂಪುರ ಬಂದಳು. ಮದುವೆ ಹೆಣ್ಣಿನ ರೀತಿ ಅಲಂಕಾರ ಮಾಡಿಕೊಂಡು ಬಂದಿದ್ದಾಳೆ.

ಇವನು ರೋಮಾಂಚನಗೊಂಡನು.

ಇದು ಕನಸಲ್ಲ!

ಸ್ಟಾರ್ ನಟಿಯನ್ನು ತಾನು ಮದುವೆ ಆಗುತ್ತಿದ್ದೇನೆ. ಆದರೆ ಈ ರಹಸ್ಯ ಮದುವೆ ಯಾಕೆ ಬೇಕು? ಯಾರೊಬ್ಬರಿಗೂ ತಿಳಿಸದೆ ಮದುವೆ ಆಗುವ ಅಗತ್ಯ ಏನಿತ್ತು?

ಅವಳು ಹಂಸನಂತೆ ಬಳಕುತ್ತಾ ಬಂದು ಇವನ ಪಕ್ಕದಲ್ಲಿ ಕುಳಿತಳು.

ಕೈ ಮೇಲೆ ಕೈ ಹಾಕಿ ಒತ್ತಿದಳು.

ಬೆಚ್ಚನೆಯ ಮೃದು ಸ್ಪರ್ಶ.

ಅವಳ ಕೈ ಹತ್ತಿಯಂತೆ ಮೃದುವಾಗಿದೆ.

ಇವನ ಕಡೆ ನೋಡಿ ನಕ್ಕಳು.

ಸುಮಾರು ಅರ್ಧ ಗಂಟೆ ಶಾಸ್ತ್ರಮಾಡಿದರು. ನಂತರ ಆಕರ್ಷಕವಾಗಿದ್ದ ಹೂವಿನ ಹಾರಗಳನ್ನು ಈಗ ಪರಸ್ಪರ ಬದಲಿಸಿಕೊಂಡರು.

ಮಾಂಗಲ್ಯ ಕಟ್ಟುವ ಶಾಸ್ತ್ರ ರೆಕಾರ್ಡ್ ಮಾಡಿದ್ದ ಮಂಗಳಕರ ವಾದ್ಯ ಟೇಪ್ ರೆಕಾರ್ಡರ್‌ನಿಂದ ಕೇಳಿ ಬರುತ್ತಿದೆ.

ಮಾಂಗಲ್ಯ ಕಟ್ಟಿದನು.

ಚಾಂದಿನಿ ನನ್ನ ಹೆಂಡತಿ!

ಅರ್ಚಕರಿಗೆ ಸಂಭಾವನೆ ಕೊಟ್ಟು ಕಳಿಸಿದ ಮೇಲೆ ಅವಳು ಗೌತಮನ ಕೈ ಹಿಡಿದು ಬೇರೆ ರೂಮಿಗೆ ಕರೆದುಕೊಂಡು ಬಂದು, ಟೇಬಲ್ ಮೇಲೆ ಇದ್ದ ಬಾಕ್ಸ್ ಓಪನ್ ಮಾಡಿದಳು.

ವಜ್ರದ ಉಂಗುರ ಹೊಳೆಯುತ್ತಿದೆ.

ಅವಳು ಅದನ್ನು ಎತ್ತಿಕೊಂಡು ಅವನ ಕೈಬೆರಳಿಗೆ ತೊಡಿಸುತ್ತಾ 'ಇದು ಹೆಂಡತಿಯಾಗಿ ನಾನು ನಿನಗೆ ಕೊಡುತ್ತಿರುವ ಗಿಫ್ಟ್'' ಎಂದು ಬಿಗಿಯಾಗಿ ತಬ್ಬಿಕೊಂಡಳು ಮತ್ತು ಉಂಗುರ ತೊಡಿಸಿದ್ದ ಅವನ ಕೈ ಎಳೆದು ತನ್ನ ಮುಖದ ತುಂಬಾ ಸವರಿಕೊಂಡಳು.

ತುಟಿಗಳ ಮೇಲೆ ಒತ್ತಿಕೊಳ್ಳುತ್ತಾ ಅವನ ಆ ಬೆರಳನ್ನು ಬಾಯೊಳಗೆ ಎಳೆದುಕೊಂಡು, ನಾಲಿಗೆ ಸ್ಪರ್ಶ ಮಾಡಿದಳು ಮತ್ತು ಅವನಿಗೆ ಹಿತವಾಗುವ ರೀತಿ ಕಚ್ಚಿದಳು. ಅವನ ಆಸೆ ಕೆರಳಿತು.

''ಚಾಂದಿನಿ... ನನ್ನ ಅರಗಿಣಿ'' ಎನ್ನುತ್ತಾ ಅವಳ ಮುಖ ಮುದ್ದಾಡಿದ್ದನು. ಅವಳೇ ಮುಖ ಮೇಲೆ ಎತ್ತಿ ಚುಂಬನಕ್ಕೆ ಸಹಕರಿಸಿದಳು.

ಚಾಕುಲೇಟ್ ರೀತಿ ವಳ ಜೇನು ತುಟಿಗಳ ಮೇಲೆ ಹಲ್ಲುಗಳ ಸ್ಪರ್ಶ ಮಾಡುತ್ತಾ ಚಪ್ಪರಿಸುತ್ತಿದ್ದಾನೆ.

ಅವನ ಕೈ ಆಟ ಆಡಿತು.

ತನ್ನ ರವಿಕೆ ಒಳಗಿದ್ದ ಅವನ ಕೈ ಎಳೆದು ದೂರ ತಳ್ಳುತ್ತಾ ''ಏ ಪೋಲಿ... ಬೇರೆ ರೂಮಲ್ಲಿ ಪ್ರಸ್ಥದ ಶಾಸ್ತ್ರ ಹೂವಿನ ಮಂಚ ರೆಡಿಯಾಗಿದೆ. ಅಲ್ಲಿ ನಿನಗೆ ಕೇಳಿದ್ದನ್ನೆಲ್ಲಾ ಕೊಡುತ್ತೇನೆ'' ಎಂದಳು.

ತಬ್ಬಿಕೊಂಡು ಮುದ್ದಾಡುತ್ತಾ , ಎಲ್ಲೆಲ್ಲೋ ಕೈ ಆಡಿಸುತ್ತಾ ಅವಳೊಂದಿಗೆ ಪ್ರಸ್ಥದ ಕೊಠಡಿಗೆ ಬಂದವನೇ ರೋಮಾಂಚನಗೊಂಡನು.

ಸಿನಿಮಾ ದೃಶ್ಯದಂತೆ ಇದೆ.

ಹೂವಿನ ಅಲಂಕಾರದ ಮಂಚ.

ಟೀಪಾಯಿಯ ಮೇಲೆ ಎಲ್ಲಾ ಇದೆ.

ಸಿಹಿ ತಿಂಡಿಗಳ ತಟ್ಟೆ.

ಹಣ್ಣುಗಳ ತಟ್ಟೆ.

ಬೆಳ್ಳಿ ಲೋಟದಲ್ಲಿ ಹಾಲು.

ಅವಳು ಈಗ ಹಾಲಿನ ಲೋಟ ಎತ್ತಿಕೊಂಡು ಅವನಿಗೆ ಕುಡಿಸಿದಳು. ಉಳಿದಿದ್ದ ಸ್ವಲ್ಪ ಹಾಲನ್ನು ತಾನು ಕುಡಿದಳು.

ನಗುತ್ತಾ ಸ್ವಾಗತಿಸಿದಳು.

ಪ್ರಾಯದ ಯುವಕ ಕಾಮದ ದಾಹದಿಂದ ಹೆಬ್ಬುಲಿಯಂತೆ ಬಿದ್ದನು. ಅವಳನ್ನು ಎತ್ತಿಕೊಂಡು ಮಂಚದಲ್ಲಿ ಮಲಗಿಸುತ್ತಾ ಮೇಲೆ ಬಿದ್ದು ಮುದ್ದಾಡಿದನು.

ಅವಳೇ ಮೊದಲು ಅವನನ್ನು ಬೆತ್ತಲೆ ಮಾಡಿದಳು.

ರೋಮಾಂಚನ ಆಗುತ್ತಿದೆ.

ಅವಳ ಸುಂದರವಾದ ಕೈ ಇವನ ದೇಹದ ಪ್ರತಿ ಅಂಗ, ಅಂಗವನ್ನೂ ಸವರುತ್ತಿದೆ. ಅವನೂ ಸಹ ಅವಳ ಬೆತ್ತಲೆ ದೇಹದ ಮೇಲೆ ದಾಳಿ ಮಾಡಿದ್ದಾನೆ.

ಕಾಮೋ ಕಾಮ ಸಂಭವ!

ನಾಲ್ಕು ದಿನಗಳ ಕಾಲ ಗಂಡ-ಹೆಂಡತಿಯಂತೆ ಹಗಲು-ರಾತ್ರಿ ದಾಂಪತ್ಯದ ಸುಖ ಅನುಭವಿಸಿ ಸುಖದ ಸ್ವರ್ಗ ಕಂಡರು!

ಆ ಮನೆಯಿಂದ ಹೊರಗೆ ಬರಲಿಲ್ಲ. ಗಾರ್ಡನ್‌ನಲ್ಲಿ ರೋಮಾನ್ಸ್ ಮಾಡಿದರು. ಮನೆ ಹಿಂಭಾಗದಲ್ಲಿ ಸ್ವಿಮ್ಮಿಂಗ್ ಪೂಲ್ ಇದೆ. ಅಲ್ಲಿ ಈಜಾಡುತ್ತಾ ಸೆಕ್ಸ್ ಆಟ ಆಡಿದರು. ಮನೆ ಸುತ್ತಲು ಎತ್ತರವಾದ ಕಾಂಪೌಂಡ್ ಗೋಡೆ ಇದ್ದ ಕಾರಣದಿಂದ ಒಳಗಿನ ಯಾವ ದೃಶ್ಯವೂ ಹೊರಗಿನವರಿಗೆ ಕಾಣುತ್ತಿರಲಿಲ್ಲ.

ಅವಳು ಶೂಟಿಂಗ್‌ಗೆ ಸಹ ಹೋಗದೆ ಪುನಹ ಮೂರು ದಿನಗಳ ಕಾಲ ಕಾಮಲೋಕದಲ್ಲಿ ವಿಹರಿಸಿದ್ದರು. ಗಂಡ-ಹೆಂಡತಿಯ ರೀತಿ ಸರಸ-ಸಂಭಾಷಣೆ ಆಡುತ್ತಿದ್ದರು. ಸಂಸಾರಸ್ಥರ ರೀತಿ ಎಂಜಾಯ್ ಮಾಡಿದ್ದರು.

●●●

ಪೊಲೀಸರಿಗೆ ಸುದ್ದಿ ಬಂದಿತು!

ಮಾರುತಿನಗರದ ಹಾಳು ಬಿದ್ದಿರುವ ನೆಲ ಬಾವಿಯ ಒಳಗೆ ಶವ ಬಿದ್ದಿದೆ.

ಆ ಬಾವಿಯಲ್ಲಿ ನೀರು ಬತ್ತಿ ಹೋಗಿದ್ದರಿಂದ ಶವ ಕಾಣುತ್ತಿದೆ. ಪ್ರಾರಂಭದ ಮೂರು ದಿನಗಳು ಅಲ್ಲಿ ಶವ ಇದೆ ಎಂದು ಯಾರಿಗೂ ಗೊತ್ತಿರಲಿಲ್ಲ. ಶವ ಕೊಳೆತು ವಾಸನೆ ಬರಲಾರಂಭಿಸಿದ್ದರಿಂದ ಜನಗಳು ಪೊಲೀಸರಿಗೆ ಸುದ್ದಿ ತಿಳಿಸಿದ್ದರು.

ಪ್ರಾಯದ ಯುವಕನ ಶವ.

ಶವದ ಬಹುಭಾಗ ಕೊಳೆತಿದೆ.

ಆ ಮಹಾನಗರದಲ್ಲಿ ಇವನ್ಯಾರು ಅಂತ ಗುರುತಿಸಲು ಹೇಗೆ ಸಾಧ್ಯ? ಪೊಲೀಸರು ಸುದ್ದಿ ಮಾಧ್ಯಮಗಳಲ್ಲಿ ಪ್ರಸಾರ ಮಾಡಿದರು. ಮೂರು ದಿನಗಳ ನಂತರ ಯಾರೋ ಒಬ್ಬರು ಶವ ಗುರುತಿಸಿ ಮಾಹಿತಿ ನೀಡಿದರು.

ಸತ್ತಿರುವ ವ್ಯಕ್ತಿ ಗೌತಮ್!

ಜಿಮ್ ಸೆಂಟರ್‌ನ ಕೋಚ್.

ಅವನಿಗೆ ವಿಪರೀತ ಸಿನಿಮಾಗಳ ಕ್ರೇಜ್ ಇತ್ತು. ಅವನು ಚಾಂದಿನಿ ನೂಪುರ ಸಿನಿಮಾಗಳನ್ನು ಜಾಸ್ತಿ ನೋಡುತ್ತಿದ್ದ. ಅವನೊಬ್ಬ ಅನಾಥ ಎಂದಿದ್ದರು. ಇದರಿಂದ ಕೊಲೆಯ ಹಿನ್ನೆಲೆಯ ಬಗ್ಗೆ ಅವರಿಗೆ ಸುಳಿವು ಸಿಗಲಿಲ್ಲ.

●●●

''ದಾವನ್... ಪೊಲೀಸರಿಗೆ ಕೊಲೆ ಸುಳಿವು ಸಿಕ್ಕಿಲ್ಲ ತಾನೆ?''

''ಇಲ್ಲ ಮೇಡಂ.''

''ನೀನು ತುಂಬಾ ಎಚ್ಚರಿಕೆಯಿಂದ ಇರು.''

''ಆಗಲಿ ಮೇಡಂ.''

●●●

ಒಂದು ತಿಂಗಳು ಕಳೆಯಿತು.

ಸುಪ್ತವಾಗಿದ್ದ ಆಸೆ, ಕನಸುಗಳ ರೂಪದಲ್ಲಿ ಪ್ರಚೋದನೆ ನೀಡಲಾರಂಭಿಸಿತು.

ಆ ಆಸೆ ಅಸಹಜವಾಗಿತ್ತು.

ವಿಲಕ್ಷಣ ಬಯಕೆ ಪ್ರಚೋದಿಸಿತು.

ಮದುವೆ ಆಗಬೇಕು... ದಾಂಪತ್ಯ ಸುಖ ಬೇಕು. ಆಕರ್ಷಕ ಹೀರೋ ರೀತಿ ಇರುವ ಆದರೆ ತೀರಾ ಸಾಮಾನ್ಯ ಕುಟುಂಬದ ಯುವಕ ಬೇಕು.

ದಾವನ್‌ಗೆ ಆದೇಶಿಸಿದಳು.

ಒಂದು ವಾರದಲ್ಲಿ ಸರ್ಕಾರಿ ಶಾಲೆಯ ವ್ಯಾಯಾಮ ಶಿಕ್ಷಕ (ಪಿ.ಟಿ. ಟೀಚರ್) ಮಾದಪ್ಪ ಎಂಬ ಯುವಕನನ್ನು ಬಲೆಗೆ ಬೀಳಿಸಿಕೊಂಡರು.

ಕೇವಲ ಆರು ದಿನಗಳ ಅವಧಿಯಲ್ಲಿ, ಬೆಂಗಳೂರಿನ ಮತ್ತೊಂದು ಬಡಾವಣೆಯಲ್ಲಿ ಬಂಗಲೆಯನ್ನು ಬಾಡಿಗೆಗೆ ಪಡೆದರು. ಅದೇ ರೀತಿ ಅಂದರೆ, ಸಂಪ್ರದಾಯದ ರೀತಿಯಲ್ಲಿ ಮದುವೆ ಮಾಡಿಕೊಂಡಳು.

ಒಂದು ವಾರ ಮೊದಲ ರಾತ್ರಿ, ಮಧುಚಂದ್ರದ ಸುಖ ಅನುಭವಿಸಿದಳು. ಗಂಡನಿಂದ ಸಿಗುವ ಎಲ್ಲಾ ರೀತಿಯ ದಾಂಪತ್ಯ ಸುಖ ಅನುಭವಿಸಿದಳು.

''ದಾವನ್... ಈ ಗಂಡ ಬೋರ್ ಆಗುತ್ತಿದ್ದಾನೆ'' ಎಂದಳು. ಇಪ್ಪತ್ತ ನಾಲ್ಕು ಗಂಟೆಗಳಲ್ಲಿ ಅವನ ಶವ ಬೆಂಗಳೂರಿನ ಬೇರೊಂದು ಬಡಾವಣೆಯಲ್ಲಿ ಬಿದ್ದಿತ್ತು.

ತಿಂಗಳಿಗೆ ಒಬ್ಬನಂತೆ ಆರು ಮಂದಿಯನ್ನು ಮದುವೆ ಮಾಡಿಕೊಂಡು ಅವರನ್ನು ಯಮನಲೋಕಕ್ಕೆ ಕಳಿಸಿದ್ದಳು.

ಏಳನೆಯ ಪ್ರಕರಣದಲ್ಲಿ ಇವಳಿಗೆ ಮದುವೆ ಮಾಡಿಸಿದ್ದ ಅರ್ಚಕನಿಂದ ಸುಳಿವು ಸಿಕ್ಕಿದ್ದರಿಂದ ಅರೆಸ್ಟ್ ಮಾಡಿದರು. ಎಲ್ಲಾ ಮದುವೆಗಳ ಮತ್ತು ಕೊಲೆ ರಹಸ್ಯ ಬಹಿರಂಗವಾಗಿದೆ. ವಿಕೃತ-ವಿಲಕ್ಷಣ ಬಯಕೆಗಳಿಂದ ರತಿರೂಪದ ರಾಕ್ಷಸಿಯಾಗಿದ್ದ ಇವಳು ಶಿಕ್ಷೆ ಅನುಭವಿಸುತ್ತಿದ್ದಾಳೆ.



ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

75 ವರ್ಷ ಸಂವಿಧಾನಕ್ಕೆ

ಭಾರತದ ಸಂವಿಧಾನ

ಪ್ರಸ್ತಾವನೆ

ಭಾರತದ ಜನಗಳಾದ ನಾವು
ಭಾರತವನ್ನು ಒಂದು ಸಾರ್ವಭೌಮ ಸಮಾಜವಾದೀ
ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ
ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ;
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ:
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು
ಉಪಾಸನಾ ಸ್ವಾತಂತ್ರ್ಯ:
ಸ್ಥಾನಮಾನ ಹಾಗೂ ಅವಕಾಶ ಸಮಾನತೆ
ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,
ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು ಸುನಿಶ್ಚಿತಗೊಳಿಸಿ ಅವರಲ್ಲಿ
ಭ್ರಾತೃಭಾವನೆಯನ್ನು ವೃದ್ಧಿಗೊಳಿಸಲು
ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ
ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ,
ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.

ನಾಡಿನ ಸಮಸ್ತ ಜನತೆಗೆ

**ಗಣರಾಜ್ಯೋತ್ಸವದ ಶುಭಾಶಯಗಳು**

**ಫ್ಯಾಸಿಸಂ ಅನ್ನು ತಿರಸ್ಕರಿಸೋಣ**
**ಕೋಮುವಾದವನ್ನು ಹಿಮ್ಮೆಟ್ಟಿಸೋಣ**
**ಸಂವಿಧಾನವನ್ನು ಬಲಪಡಿಸೋಣ**
**ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿಯೋಣ**
**ಬನ್ನಿ, ಗಾಂಧಿ ಭಾರತವನ್ನು ಮರುನಿರ್ಮಿಸೋಣ**

"75 ವರ್ಷಗಳ ಹಿಂದೆ ಇದೇ ದಿನ ಭಾರತ ಸಂವಿಧಾನವನ್ನು ಅಂಗೀಕರಿಸಿ **ಸಾರ್ವಭೌಮ ಗಣರಾಜ್ಯವಾಯಿತು.** ಇಂದು ನಮ್ಮ ಗಣರಾಜ್ಯ ಮತ್ತು ನಮ್ಮ ಸಂವಿಧಾನ ಅಪಾಯದಲ್ಲಿದೆ. ಫ್ಯಾಸಿಸ್ಟ್ ಮತ್ತು ವಿಭಜಕ ಶಕ್ತಿಗಳು ನಮ್ಮ ರಾಷ್ಟ್ರದ ಒಕ್ಕೂಟ ವ್ಯವಸ್ಥೆ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ದುರ್ಬಲಗೊಳಿಸುತ್ತಿವೆ. **ನಮ್ಮ ಗಣರಾಜ್ಯವನ್ನು ಸಾರ್ವಭೌಮವನ್ನಾಗಿಸಲು ನಮ್ಮ ಬದ್ಧತೆಯನ್ನು ವ್ಯಕ್ತಪಡಿಸುವ ಸಮಯವಿದು. ಬನ್ನಿ, ಭಾಗಿಯಾಗೋಣ...**"

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು





ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ನಮ್ಮ ಕರ್ನಾಟಕ
ಗ್ಯಾರಂಟಿ ಕರ್ನಾಟಕ

ಶಕ್ತಿ | ಅನ್ನಭಾಗ್ಯ | ಗೃಹಜ್ಯೋತಿ | ಗೃಹಲಕ್ಷ್ಮಿ | ಯುವನಿಧಿ


"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

# ದರ್ಶನ್-ಪ್ರೇಮ್ ಚಿತ್ರ ನಿಂತಿಲ್ಲ - ರಕ್ಷಿತಾ

ಬಣ್ಣದ ಲೋಕದಲ್ಲಿ ಆಗಾಗ ಅಂತೆ-ಕಂತೆಯ ನೂರಾರು ಸುದ್ದಿಗಳು ಹರಿದಾಡುತ್ತಲೇ ಇರುತ್ತವೆ. ಇಂಥ ಸುದ್ದಿಗಳಲ್ಲಿ ಕೆಲವು ಸತ್ಯವಾಗಿದ್ದರೆ, ಇನ್ನು ಕೆಲವು ಸುಳ್ಳಾಗಿರುತ್ತವೆ. ಉದಾಹರಣೆಗೆ ದರ್ಶನ್ ಜತೆ ಜೋಗಿ ಪ್ರೇಮ್ ನಿರ್ದೇಶನ ಮಾಡ್ತಿರುವ ಚಿತ್ರ ನಿಂತೇ ಹೋಯ್ತುಂತೆ ಎನ್ನುವ ಸುದ್ದಿ. ಇದು ಶುದ್ದ ಸುಳ್ಳು, ಪ್ರೇಮ್ ದರ್ಶನ್ ಜತೆ ಖಂಡಿತ ಸಿನಿಮಾ ಮಾಡ್ತಾರೆ ಎಂದು ರಕ್ಷಿತಾ ಪ್ರೇಮ್ ಅವರೇ ಸ್ಪಷ್ಟೀಕರಿಸಿದ್ದಾರೆ. ಫೆಬ್ರವರಿ 16ಕ್ಕೆ ದರ್ಶನ್ ಅವರ ಹುಟ್ಟುಹಬ್ಬ, ಅಭಿಮಾನಿಗಳಲ್ಲಿ ಪ್ರತಿ ವರ್ಷಕ್ಕಿಂತ ಈ ವರ್ಷ ಉತ್ಸಾಹ ಹೆಚ್ಚಿದೆ. ಆದರೆ ದರ್ಶನ್ ಈ ವರ್ಷ ಕೂಡ ಅದ್ದೂರಿ ಬರ್ತ್‌ಡೇ ಸಂಭ್ರಮಕ್ಕೆ ಬ್ರೇಕ್ ಹಾಕುವ ಸಾಧ್ಯತೆ ಇದೆ.



ಅವತ್ತೇ ಡೆವಿಲ್ ಚಿತ್ರದ ಚಿತ್ರೀಕರಣಕ್ಕೆ ಮರುಚಾಲನೆ ನೀಡಲಿದ್ದಾರೆ ಎನ್ನುವ ಮಾತು ಕೂಡ ಕೇಳಿ ಬರುತ್ತಿದೆ. ಇದರ ನಡುವೆ ನಿನ್ನೆಯಿಂದ ದರ್ಶನ್ ತಾವು ಈ ಹಿಂದೆ ಒಪ್ಪಿಕೊಂಡಿದ್ದ ಎರಡು ಚಿತ್ರಗಳಿಂದ ಹಿಂದೆ ಸರಿದಿದ್ದಾರೆ ಎನ್ನುವ ಸುದ್ದಿ ಹರಿದಾಡುತ್ತಿದೆ. ಜೋಗಿ ಪ್ರೇಮ್ ಮತ್ತು ಸೂರಪ್ಪಬಾಬು ಅವರ ಜೊತೆ ಮಾಡಬೇಕಿದ್ದ ಚಿತ್ರಗಳನ್ನು ದರ್ಶನ್ ಕೈಬಿಟ್ಟಿದ್ದು, ಇವರಿಬ್ಬರಿಂದ ಪಡೆದಿದ್ದ ಮುಂಗಡ ಹಣವನ್ನೂ ಸಹ ಮರಳಿಸಿದ್ದಾರೆ ಎಂಬ ಸುದ್ದಿ ಎಲ್ಲೆಡೆ ಹರಿದಾಡುತ್ತಿತ್ತು, ಆದರೆ ಈ ವಿಚಾರಕ್ಕೆ ಸಂಬಂಧಿಸಿದಂತೆ ನಿರ್ದೇಶಕ ಪ್ರೇಮ್ ಅವರ ಪತ್ನಿ ರಕ್ಷಿತಾ ಅವರೇ ಮಾತನಾಡಿದ್ದಾರೆ. ಎಲ್ಲಾ ಕಡೆ ಕೇಳಿಬರುತ್ತಿರುವ ಈ ಸುದ್ದಿ ಸಂಪೂರ್ಣ ಸುಳ್ಳು ಎಂದು ಹೇಳಿದ್ದಾರೆ. ಈ ಕುರಿತು ಮಾಧ್ಯಮದ ಜೊತೆ ಮಾತನಾಡಿರುವ ರಕ್ಷಿತಾ ಪ್ರೇಮ್, ದರ್ಶನ್ ಜೊತೆ ಪ್ರೇಮ್ ಸಿನಿಮಾ ಮಾಡುವುದು ಖಚಿತ ಹಾಗೂ ನಿಶ್ಚಿತ ಎಂದವರು ಹೇಳಿದ್ದಾರೆ. ದರ್ಶನ್ ದುಡ್ಡು ವಾಪಸು ಮಾಡಿರುವ ವಿಚಾರ ನಮಗೆ ಗೊತ್ತಿಲ್ಲ ಎಂದಿರುವ ರಕ್ಷಿತಾ, ಎರಡು ದಿನಗಳ ಹಿಂದಷ್ಟೇ ನಾನು ದರ್ಶನ್ ಜೊತೆ ಮಾತನಾಡಿದ್ದೇನೆ, ಸದ್ಯ ಹರಡಿರುವ ಸುದ್ದಿಯಂತೆ ನಮ್ಮ ನಡುವೆ ಆ ಥರದ ಯಾವುದೇ ಚರ್ಚೆ ನಡೆದಿಲ್ಲ ಎಂದು ಹೇಳಿದ್ದಾರೆ. ಅಂಥಾ ಯಾವುದೇ ಬೆಳವಣಿಗೆ ಆಗಲ್ಲ ಎಂಬ ಭರವಸೆಯನ್ನು ಸಹ ಅವರು ವ್ಯಕ್ತಪಡಿಸಿದ್ದಾರೆ.

ಮುಂಗಡ ಹಣ ಮರಳಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿರುವ ರಕ್ಷಿತಾ, ನಮ್ಮ ಚಿತ್ರನಿರ್ಮಾಣ ಸಂಸ್ಥೆ ಕೆವಿಎನ್ ಪ್ರೊಡಕ್ಷನ್ಸ್‌ನಿಂದ ಇಂಥ ಯಾವುದೇ ಮಾಹಿತಿ ಸಿಕ್ಕಿಲ್ಲ, ನನ್ನ ಪ್ರಕಾರ ಈ ಮಾತುಗಳೆಲ್ಲ ನಮ್ಮ ಚಿತ್ರಕ್ಕೆ ಸಂಬಂಧಿಸಿದ್ದಲ್ಲ ಎಂದೂ ಅವರು ಹೇಳಿದ್ದಾರೆ. ಈ ಮೂಲಕ ಪ್ರೇಮ್ ಮತ್ತು ದರ್ಶನ್ ಜೋಡಿಯ ಸಿನಿಮಾ ಖಂಡಿತ ಆಗೇ ಆಗುತ್ತೆ ಎಂದು ದರ್ಶನ್ ಅಭಿಮಾನಿಗಳಿಗೆ ರಕ್ಷಿತಾ ಪ್ರೇಮ್ ಅವರು ಆಶ್ವಾಸನೆ ನೀಡಿದ್ದಾರೆ.

ರಕ್ಷಿತಾ ಪ್ರೇಮ್ ಅವರ ಈ ಹೇಳಿಕೆಯಿಂದ ಸದ್ಯ ದರ್ಶನ್ ಅಭಿಮಾನಿಗಳು ನಿರಾಳರಾಗಿದ್ದು, ದರ್ಶನ್ ಅವರ ಹುಟ್ಟುಹಬ್ಬದ ವೇಳೆಗೆ ಜೋಗಿ ಪ್ರೇಮ್ ಅವರಿಂದ ಚಿತ್ರದ ಬಗ್ಗೆ ಅಪ್‌ಡೇಟನ್ನು ನಿರೀಕ್ಷೆ ಮಾಡುತ್ತಿದ್ದಾರೆ. ಹುಟ್ಟುಹಬ್ಬದ ಶುಭಾಶಯ ಕೋರಿ ಹೊಸ ಥೀಮ್ ಪೋಸ್ಟರ್‌ನ್ನು ಪ್ರೇಮ್ ಬಿಡುಗಡೆ ಮಾಡಬಹುದು ಎಂದು ಲೆಕ್ಕಾಚಾರ ಹಾಕುತ್ತಿದ್ದಾರೆ. ಇನ್ನು ರಕ್ಷಿತಾ ಅವರು ಪ್ರೇಮ್ ದರ್ಶನ್ ಚಿತ್ರ ನಿಂತಿಲ್ಲ ಎಂದು ಸ್ಪಷ್ಟೀಕರಣ ನೀಡಿದ ಬೆನ್ನಲ್ಲೇ ದರ್ಶನ್ ಹೊರ ಬಂದಿದ್ದಾರೆ ಎನ್ನಲಾದ ಆ ಎರಡು ಚಿತ್ರಗಳು ಯಾವುವು, ಅಥವಾ ಅದೂ ಕೂಡ ಬರೀ ಗಾಸಿಪ್‌ನಾ ಎಂಬುದಕ್ಕೆ ದರ್ಶನ್ ಅವರೇ ಉತ್ತರ ನೀಡಬೇಕಿದೆ. ☯

# ಚೌಕಿದಾರ್ ಟೀಸರ್‌ನಲ್ಲಿ ರಗಡ್ ಪೃಥ್ವಿ



ಪ್ರತಿಯೊಬ್ಬರ ಮನೆಯಲ್ಲೂ ಒಬ್ಬ ಚೌಕಿದಾರ್ ಇರುತ್ತಾರೆ, ಅವರ ಕಥೆಯನ್ನೇ ಈ ಚಿತ್ರದಲ್ಲಿ ಹೇಳೋ ಪ್ರಯತ್ನವನ್ನು ನಿರ್ದೇಶಕ ಚಂದ್ರಶೇಖರ್ ಬಂಡಿಯಪ್ಪ ಅವರು ಮಾಡಿದ್ದಾರೆ. ಗ್ರಾಮಾಂತರ ಪ್ರದೇಶದಿಂದ ಶುರುವಾಗುವ ಈ ಚಿತ್ರದ ಕಥೆಯಲ್ಲಿ ನಟ ಸಾಯಿಕುಮಾರ್ ಹಾಗೂ ಪೃಥ್ವಿ ಅಂಬಾರ್ ತಂದೆ, ಮಗನಾಗಿ ನಟಿಸಿದ್ದಾರೆ. ಕನ್ನಡ, ತೆಲುಗು, ತಮಿಳು ಹಾಗೂ ಮಲಯಾಳಂ ಸೇರಿದಂತೆ 4 ಭಾಷೆಯಲ್ಲಿ ಈ ಚಿತ್ರ ಏಕಕಾಲಕ್ಕೆ ಬಿಡುಗಡೆಯಾಗಲಿದೆ.

ಕ್ಲಾಸ್ ಸಿನಿಮಾಗಳ ಮೂಲಕ ಲವರ್ ಬಾಯ್ ಆಗಿ ಕಾಣಿಸಿಕೊಳ್ಳುತ್ತಿದ್ದ ನಟ ಪೃಥ್ವಿ ಅಂಬರ್ ಇದೇ ಮೊದಲ ಬಾರಿಗೆ ರಗಡ್ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಕೈಲಿ ಸದಾ ರೋಸ್ ಹಿಡಿಯುತ್ತಿದ್ದ ಪೃಥ್ವಿ ಅಂಬಾರ್ ಅವರ ಕೈಗೆ ಲಾಂಗ್ ಕೊಟ್ಟು ನಿರ್ದೇಶಕ ಚಂದ್ರಶೇಖರ್ ಬಂಡಿಯಪ್ಪ ಅವರು ರಕ್ತವನ್ನೇ ಹರಿಸಿದ್ದಾರೆ. ಪ್ರತಿಯೊಬ್ಬರ ಮನೆಯಲ್ಲೂ ಒಬ್ಬೊಬ್ಬ ಚೌಕಿದಾರ್ ಇರುತ್ತಾರೆ, ಅಂಥವರ ಕಥೆಯನ್ನೇ ಈ ಚಿತ್ರದಲ್ಲಿ ನಿರ್ದೇಶಕ ಚಂದ್ರಶೇಖರ್ ಬಂಡಿಯಪ್ಪ ಅವರು ಹೇಳೋ ಪ್ರಯತ್ನವನ್ನು ಮಾಡಿದ್ದಾರೆ. ಇತ್ತೀಚೆಗೆ ಚೌಕಿದಾರ್ ಸಿನಿಮಾದ ಟೀಸರ್ ಅನಾವರಣಗೊಂಡಿದೆ. ಹಿಂದೆಂದೂ ಕಾಣದ ವಿಶೇಷ ಲುಕ್ ನಲ್ಲಿ ನಾಯಕ ಪೃಥ್ವಿ ಅಂಬಾರ್ ಅವರು ಇಲ್ಲಿ ಪ್ರತ್ಯಕ್ಷರಾಗಿದ್ದಾರೆ. ರಕ್ತಸಿಕ್ತ ಅವತಾರವೆತ್ತಿರುವ ಅವರ ಹೊಸ ಲುಕ್ ಸಿನಿರಸಿಕರಿಗೆ ಕಿಕ್ ಕೊಟ್ಟಿದೆ.

ಚೌಕಿದಾರ್ ಚಿತ್ರದ ಟೀಸರ್‌ನಲ್ಲಿ ಎಲ್ಲಾ ಪಾತ್ರಗಳನ್ನು ತೋರಿಸಿರುವ ನಿರ್ದೇಶಕ ಚಂದ್ರಶೇಖರ್ ಬಂಡಿಯಪ್ಪ ಕಥೆಯ ಗುಟ್ಟನ್ನು ಮಾತ್ರ ಎಲ್ಲಿಯೂ ಬಿಟ್ಟುಕೊಟ್ಟಿಲ್ಲ. ಕನ್ನಡ ಹಾಗೂ ತೆಲುಗು ಸೇರಿ ಎರಡು ಭಾಷೆಯಲ್ಲಿ ಈ ಚ ಇತ್ರದ ಟೀಸರನ್ನು ಬಿಡುಗಡೆ ಮಾಡಲಾಗಿದ್ದು, ಖಾಕಿ ಲುಕ್‌ನಲ್ಲಿ ಹಿರಿಯನಟಿ ಸುಧಾರಾಣಿ ಅವರು ಪೊಲೀಸ್ ಖದರ್ ತೋರಿಸಿದ್ದಾರೆ. ಹಿರಿಯ ನಟ ಸಾಯಿ ಕುಮಾರ್ ಅವರು ನಾಯಕ ಪೃಥ್ವಿ ಅಂಬಾರ್ ತಂದೆಯ ಪಾತ್ರದಲ್ಲಿ ಗಮನ ಸೆಳೆಯುತ್ತಾರೆ. ಧರ್ಮ, ಹಿರಿಯ ನಟಿ ಶ್ವೇತಾ ಚಿತ್ರದ ಪ್ರಮುಖ ತಾರಾ ಬಳಗದಲ್ಲಿದ್ದಾರೆ.

ಚಿತ್ರದಲ್ಲಿ ಪೃಥ್ವಿ ಅಂಬಾರ್‌ಗೆ ಜೋಡಿಯಾಗಿ ಅಭಿನಯಿಸಿರುವ ಧನ್ಯ ರಾಮ್‌ಕುಮಾರ್ ಇಲ್ಲಿ ಡಿ ಗ್ಲಾಮರ್ ಆಗಿ ಕಾಣಿಸಿಕೊಂಡಿದ್ದಾರೆ. ಸಚಿನ್ ಬಸ್ರೂರ್ ಅವರ ಹಿನ್ನೆಲೆ ಸಂಗೀತ ಈ ಟೀಸರ್‌ನಲ್ಲಿ ಗಮನ ಸೆಳೆಯುತ್ತಿದೆ. ಕಲ್ಲಹಳ್ಳಿ ಚಂದ್ರಶೇಖರ್ ಅವರು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ವಿದ್ಯಾದೇವಿ ಚಿತ್ರ ನಿರ್ಮಾಣದಲ್ಲಿ ಸಾಥ್ ಕೊಡುತ್ತಿದ್ದಾರೆ.

ವಿ.ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ, ಸಂತೋಷ್ ನಾಯಕ್ ಅವರುಗಳು ಈ ಚಿತ್ರದ ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ. ಸಿದ್ದು ಕಂಚನಹಳ್ಳಿ ಅವರ ಛಾಯಾಗ್ರಹಣ, ರವಿ ವರ್ಮಾ ಅವರ ಸಾಹಸ ನಿರ್ದೇಶನ ಈ ಸಿನಿಮಾಗಿದೆ. ☯



# ತರುಣ್ ಸುಧೀರವ ಚಿತ್ರಕ್ಕೆ ಪ್ರಿಯಾಂಕಾ ನಾಯಕಿ

ಏಳುಮಲೆಯ ಮಡಿಲಲ್ಲಿ ಎದೆ ನಡುಗಿಸಿದ ಪ್ರೇಮಕಥೆ ಚಿತ್ರದ ನಾಯಕನಾಗಿ ಕ್ರೇಜಿಕ್ವೀನ್ ರಕ್ಷಿತಾ ಅವರ ಸಹೋದರ ರಾಣಾ ನಟಿಸುತ್ತಿರುವುದು ಎಲ್ಲರಿಗೂ ಗೊತ್ತೇ ಇದೆ, ನಾಯಕನನ್ನು ಪರಿಚಯಿಸಿದ್ದ ಸ್ಟಾರ್ ಡೈರೆಕ್ಟರ್ ತರುಣ್ ಸುಧೀರ್ ಈಗ ನಾಯಕಿಯನ್ನು ಸಹ ಘೋಷಣೆ ಮಾಡಿದ್ದಾರೆ. ಗುರುಶಿಷ್ಯರು ಸಿನಿಮಾದ ಯಶಸ್ಸಿನ ಬಳಿಕ ತರುಣ್ ಸುಧೀರ್, ಅಟ್ಲಾಂಟಾ ನಾಗೇಂದ್ರ, ಅವರ ಜೊತೆಗೂಡಿ ನಿರ್ಮಿಸುತ್ತಿರುವ ಹೊಸ ಕಥೆಗೆ ಹೊಸ ನಾಯಕಿಯನ್ನು ಕರೆ ತಂದಿದ್ದಾರೆ.

ತರುಣ್ ಸುಧೀರ್ ಬಳಗದಲ್ಲಿ ಕೆಲಸ ಮಾಡಿರುವ ಪುನೀತ್ ರಂಗಸ್ವಾಮಿ ಎಂಬುವವರ ಚೊಚ್ಚಲ ನಿರ್ದೇಶನದಲ್ಲಿ ಮೂಡಿ ಬರ್ತಿರುವ ನೈಜ ಘಟನೆಯ ಪ್ರೇಮಕಥೆಯಲ್ಲಿ ಮೈಸೂರಿನ ಪ್ರಿಯಾಂಕಾ ಆಚಾರ್ ನಾಯಕಿಯಾಗಿ ನಟಿಸುತ್ತಿದ್ದಾರೆ. ಮಹಾನಟಿ ಷೋದ ವಿನ್ನರ್ ಪಟ್ಟ ಗೆದ್ದಿದ್ದ ಪ್ರಿಯಾಂಕಾ ಆಚಾರ್ ತರುಣ್ ಸುಧೀರ್ ನಿಮಾಣದ ನೂತನ ಚಿತ್ರದಲ್ಲಿ ನಾಯಕಿಯಾಗಿ ಚಿತ್ರರಂಗಕ್ಕೆ ಮೊದಲ ಹೆಜ್ಜೆ ಇಡುತ್ತಿದ್ದಾರೆ. ಮಹಾನಟಿ ಶೋ ಜಡ್ಜ್ ಆಗಿದ್ದಾಗಲೇ ಪ್ರಿಯಾಂಕಾ ಆಚಾರ್ ಅವರ ಅಭಿನಯವನ್ನು ತರುಣ್ ಸುಧೀರ್ ಮೆಚ್ಚಿಕೊಂಡು ನನ್ನ ಸಿನಿಮಾದಲ್ಲಿ ಛಾನ್ಸ್ ಕೊಡುವುದಾಗಿಯೂ ಹೇಳಿದ್ದರು. ಅದರಂತೆ ಇದೀಗ ಅವರದ್ದೇ ನಿರ್ಮಾಣದ ನೂತನ ಚಿತ್ರದಲ್ಲಿ ಹೀರೋಯಿನ್ ಆಗಿ ನಟಿಸುವ ಆಫರನ್ನು ಪ್ರಿಯಾಂಕಾ ಆಚಾರ್ ಅವರಿಗೆ ನೀಡಿದ್ದಾರೆ. ಮೂಲತಃ ಮೈಸೂರಿನವರಾದ ಪ್ರಿಯಾಂಕಾಗೆ ಮೊದಲಿಂದಲೂ ನಟಿಯಾಗಬೇಕು ಎಂಬ ಕನಸಿತ್ತು. ಆ ಕನಸಿಗೆ ಇದೀಗ ತರುಣ್ ಸುಧೀರ್ ಸಾಥ್ ಕೊಡುತ್ತಿದ್ದಾರೆ.

ತರುಣ್ ಸುಧೀರ್ ಅವರು ತಮ್ಮ ಬಹುತೇಕ ಸಿನಿಮಾಗಳಲ್ಲಿ ಹೊಸ ನಾಯಕಿಯರನ್ನು ಪರಿಚಯಿಸುತ್ತಲೇ ಬಂದಿದ್ದಾರೆ. ರಾಬರ್ಟ್ ಮೂಲಕ ಆಶಾ ಭಟ್, ಕಾಟೇರ ಚಿತ್ರದ ಮೂಲಕ ಮಾಲಾಶ್ರೀ ಪುತ್ರಿ ಆರಾಧನಾರಾಮ್‌ರನ್ನು ಹೀರೋಯಿನ್ ಆಗಿ ಕನ್ನಡ ಸಿನಿಮಾಪ್ರೇಮಿಗಳ ಎದುರು ತಂದಿದ್ದ ತರುಣ್ ಈಗ ಪ್ರಿಯಾಂಕಾ ಆಚಾರ್ ಅವರನ್ನು ತಮ್ಮದೇ ನಿರ್ಮಾಣದ ಚಿತ್ರದಲ್ಲಿ ರಾಣಾಗೆ ಜೋಡಿಯಾಗಿ ನಿಲ್ಲಿಸುತ್ತಿದ್ದಾರೆ. ಅದ್ವೈತ್ ಗುರುಮೂರ್ತಿ ಅವರು ಈ ಚಿತ್ರಕ್ಕೆ ಕ್ಯಾಮರಾವರ್ಕ್ ಮಾಡುತ್ತಿದ್ದಾರೆ. ತರುಣ್ ಸುಧೀರ್ ಹಾಗೂ ಅಟ್ಲಾಂಟಾ ನಾಗೇಂದ್ರ ಅವರು ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದು, ಸದ್ಯ ಈ ಚಿತ್ರದ ಶೂಟಿಂಗ್ ಭರದಿಂದ ಸಾಗುತ್ತಿದೆ. ☯

Vol. 40 No. 35 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com